ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಮಾಣಿಕ ಸರ್ಕಾರ್
ಮುಖ್ಯಮಂತ್ರಿ ಭಾಷಣ
ಸೆನ್ಸಾರ್



ಸಂಪುಟ 11 | ಸಂಚಿಕೆ 37 | ಸೆಪ್ಟೆಂಬರ್ 4–10, 2017 | ಪುಟ 16 | ರೂ.10/-

Web : www.janashakthi.co.in e-mail : janashakthi2007@gmail.com



ಬಯಲಾಯಿತು ಅಪರಾಧಿ ದೇವಮಾನವ"ರ ಜತೆ ಬಿಜೆಪಿ ದೋಸ್ತಿ



ಯಶಸ್ವಿ ಅಹೋರಾತ್ರಿ ಸ್ವಾತಂತ್ರ್ಯೋತ್ಸವ



ನೋಟು ನಿಷೇಧ : ಯೆಚುರಿ 14 ಪ್ರಶ್ನೆಗಳು





ಲಿಂಗಾಯತ ಸ್ವತಂತ್ರ ಧರ್ಮ: ಚರ್ಚೆ

ದಲಿತ ಮಹಾಕಾವ್ಯ : ಹಾಡು ಅರ್ಥ

ಖಾಸಗಿತನದ ಹಕ್ಕು ಕುರಿತ ಸುಪ್ರಿಂ ಕೋರ್ಟ್ ತೀರ್ಪು ಸ್ವಾಗತಾರ್ಹ: ಸಿಪಿಐ(ಎಂ) ಪೊಲಿಟ್‌ಬ್ಯುರೊ

ಖಾಸಗಿತನದ ಹಕ್ಕು ಭಾರತೀಯ ಸಂವಿಧಾನದ ಕಲಮು 21ರ ಅಡಿಯಲ್ಲಿ ರಕ್ಷಣೆ ಪಡೆದಿರುವ ಒಂದು ಮೂಲಭೂತ ಹಕ್ಕು ಎಂದು ಹೇಳಿರುವ ದೇಶದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸ್ವಾಗತಿಸಿದೆ. ಈ ಹಿಂದೆ ಎಂ ಪಿ ಶರ್ಮ ಮತ್ತು ಖರಕ್‌ಸಿಂಗ್ ಕೇಸ್‌ನಲ್ಲಿ ನ್ಯಾಯಾಲಯ ಖಾಸಗಿತನದ ಹಕ್ಕು ಮೂಲಭೂತ ಹಕ್ಕು ಅಲ್ಲ ಎಂಬ ತೀರ್ಪುಗಳನ್ನು ಕೊಟ್ಟಿತ್ತು. ಈಗ ಭಾರತದ ಮುಖ್ಯ ನ್ಯಾಯಾಧೀಶರ ನೇತೃತ್ವದ ಒಂಭತ್ತು ಸದಸ್ಯರ ಸಂವಿಧಾನ ಪೀಠ ಒಂದು ಒಮ್ಮತದ ನಿರ್ಧಾರದಲ್ಲಿ ಅವನ್ನು ತಳ್ಳಿ ಹಾಕಿದೆ.

ಇದೊಂದು ಮೈಲಿಗಲ್ಲಾಗುವ ತೀರ್ಪು ಎಂದಿರುವ ಪೊಲಿಟ್‌ಬ್ಯುರೊ, ಇದು ಕಾರ್ಪೊರೇಟ್‌ಗಳು ಪ್ರಾಬಲ್ಯ ಹೊಂದಿರುವ ತಂತ್ರಜ್ಞಾನದ ಮುನ್ನಡೆಯ ಜಗತ್ತಿನಲ್ಲಿ ಖಾಸಗಿ ಮಾಹಿತಿಗಳ ದುರುಪಯೋಗದ ಮೂಲಕ ವ್ಯಕ್ತಿಗಳ ಖಾಸಗಿತನವನ್ನು ಉಲ್ಲಂಘಿಸುವ ಪ್ರಯತ್ನಗಳಿಂದ ರಕ್ಷಣೆಗೆ ಹಾದಿ ಮಾಡಿಕೊಡಬೇಕು ಎಂದು ಆಶಿಸಿದೆ. ಈ ಸರಕಾರ ಮುಂದೊತ್ತುತ್ತಿರುವ 'ಆಧಾರ್'ನ್ನು ಕಡ್ಡಾಯಗೊಳಿಸುವ ಪ್ರಶ್ನೆಯನ್ನು ಒಂದು ಪ್ರತ್ಯೇಕ ಐವರು ನ್ಯಾಯಾಧೀಶರ ಪೀಠ ನಿರ್ಧರಿಸಲಿದೆ ಎಂಬ ಸಂಗತಿಯತ್ತ ಅದು ಗಮನ ಸೆಳೆದಿದೆ.

ಸರಕಾರದ ದುಷ್ಟ ತಂತ್ರಗಳ ಎದುರಾಗಿ ಹೋರಾಡಿದವರಿಗೆ ಯೆಚುರಿ ಅಭಿನಂದನೆ

ಇದೊಂದು ದೂರಗಾಮೀ ತೀರ್ಪು, ಹಲವಾರು ಕ್ಷೇತ್ರಗಳಲ್ಲಿ ಇದು ಪರಿಣಾಮ ಬೀರಲಿದೆ, ಏಕೆಂದರೆ ಇಂದು ತಂತ್ರಜ್ಞಾನ ನಮ್ಮ ಬದುಕಿನಲ್ಲಿ ಹೆಚ್ಚೆಚ್ಚು ವ್ಯಾಪಕವಾದ ಪಾತ್ರ ವಹಿಸುತ್ತಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಈ ತೀರ್ಪನ್ನು ಸ್ವಾಗತಿಸುತ್ತ ಹೇಳಿದ್ದಾರೆ. ಭಾರತೀಯರಿಗೆ ಖಾಸಗಿತನದ ಅವರ ಮೂಲಭೂತ ಹಕ್ಕನ್ನು ನಿರಾಕರಿಸುವ ಈ ಸರಕಾರದ ದುಷ್ಟ ತಂತ್ರಗಳನ್ನು ಎದುರಿಸಿ ಹೋರಾಡಿರುವ ಎಲ್ಲ ವಕೀಲರು, ಕಾರ್ಯಕರ್ತರು ಮತ್ತು ಇತರರನ್ನು ಅವರು ಈ ಸಂದರ್ಭದಲ್ಲಿ ಅಭಿನಂದಿಸಿದ್ದಾರೆ. ನಾವು ಆಧಾರ್ ಅನ್ನು ಕಡ್ಡಾಯಗೊಳಿಸುವುದನ್ನು, ವಿದೇಶಿ ತಂತ್ರಜ್ಞಾನದ ಕಾರ್ಪೊರೇಟ್‌ಗಳು ಮಾಹಿತಿಗಳ ದುರುಪಯೋಗ ಮಾಡಿಕೊಳ್ಳುವದನ್ನು ವಿರೋಧಿಸುತ್ತೇವೆ. ಈ ತೀರ್ಪು ನಮ್ಮ ಹಕ್ಕುಗಳನ್ನು ಭದ್ರಪಡಿಸಿಕೊಳ್ಳಲು ಹಾದಿ ಮಾಡಿಕೊಡುತ್ತದೆ ಎಂದು ಅವರು ಆಶಿಸಿದ್ದಾರೆ.

ತ್ರಿವಳಿ ತಲಾಖ್ ಕುರಿತ ಸುಪ್ರಿಂ ಕೋರ್ಟ್ ತೀರ್ಪಿಗೆ ಎಐಡಿಡಬ್ಲ್ಯುಎ ಸ್ವಾಗತ

"ಪ್ರಸಕ್ತ ಸರಕಾರಕ್ಕೆ ಯಾವುದೇ ಸಮುದಾಯಕ್ಕೆ ಲಿಂಗನ್ಯಾಯದ ಕಾನೂನುಗಳನ್ನು ತರುವ ಆಸಕ್ತಿಯೇನೂ ಇಲ್ಲ"

ತ್ರಿವಳಿ ತಲಾಖ್ ಕುರಿತ ರಿಟ್ ಅರ್ಜಿಯ ಮೇಲೆ ಸುಪ್ರಿಂ ಕೋರ್ಟ್ ನೀಡಿರುವ ಬಹುಮತದ(3-2) ತೀರ್ಪನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಸ್ವಾಗತಿಸಿದೆ. ತ್ರಿವಳಿ ತಲಾಖ್ ಸ್ವೇಚ್ಛಾಚಾರದ್ದು ಮತ್ತು ಸಂವಿಧಾನ-ಬಾಹಿರ ಎಂದು "ಶಾಯರಾ ಬಾನೊ ವರ್ಸಸ್ ಕೇಂದ್ರ ಸರಕಾರ ಮತ್ತು ಇತರರು' (ರಿಟ್ ಅರ್ಜಿನಂ.118/2016) ಕೇಸಿನ ಮೇಲೆ ಆಗಸ್ಟ್ 22ರಂದು ನೀಡಿರುವ ತೀರ್ಪಿನಲ್ಲಿ ದೇಶದ ಸರ್ವೋಚ್ಚ ನ್ಯಾಯಾಲಯ ಹೇಳಿದೆ.

ಎಐಡಿಡಬ್ಲ್ಯುಎ ಈ ತಕ್ಷಣದ ತ್ರಿವಳಿ ತಲಾಕ್ ಏಕಪಕ್ಷೀಯ, ಸ್ವೇಚ್ಛಾಚಾರಿ, ಹಿಂತೆಗೆದುಕೊಳ್ಳಲಾಗದ ಮತ್ತು ತಕ್ಷಣದ ಸ್ವರೂಪದ್ದು ಎಂದು ಸದಾ ಅದನ್ನು ವಿರೋಧಿಸುತ್ತ ಬಂದಿದೆ. ಇದು ಲಕ್ಷಾಂತರ ಮುಸ್ಲಿಂ ಮಹಿಳೆಯರ ಬದುಕುಗಳನ್ನು ಸದಾ ಪ್ರತಿಕೂಲವಾಗಿಯೇ ತಟ್ಟಿದೆ. ಅವರು ಇಂತಹ ತಕ್ಷಣದ ವಿಚ್ಛೇದನದಿಂದ ಮಾನಸಿಕ ಆಘಾತಕ್ಕೆ ಒಳಗಾಗಿದ್ದಾರೆ, ಯಾವುದೇ ರೀತಿಯ ಹಣಕಾಸು ಅಥವ ಇತರ ದಾರಿಗಳಿಲ್ಲದೆ ಪರಿತ್ಯಜಿಸಲ್ಪಟ್ಟಿದ್ದಾರೆ. ಇದನ್ನು ಈಗ ಹೆಚ್ಚೆಚ್ಚಾಗಿ ಎಸ್‌ಎಂಎಸ್, ಸ್ಕೈಪ್ ಮುಂತಾದ ಇಲೆಕ್ಟ್ರಾನಿಕ್ ಮತ್ತು ಮುಖಾಮುಖಿಯಲ್ಲದ ವಿಧಾನಗಳ ಮೂಲಕ ಮಾಡಲಾಗುತ್ತಿದೆ ಎಂದಿರುವ ಎಐಡಿಡಬ್ಲ್ಯುಎ ತನ್ನ ಕಾನೂನು ಸೆಲ್ ಮೂಲಕ ಇಂತಹ ಹಲವು ತಕ್ಷಣದ ತಲಾಖ್‌ನ ಕೇಸ್‌ಗಳನ್ನು ಎತ್ತಿಕೊಂಡು ಇದ್ದಕ್ಕಿದ್ದಂತೆ ಮತ್ತು ಎಂದೆಂದಿಗೂ ಪರಿತ್ಯಜಿಸಲ್ಪಟ್ಟ ಮಹಿಳೆಯರ ನೋವನ್ನು ಕಡಿಮೆ ಮಾಡಲು ಪ್ರಯತ್ನಿಸಿದೆ.

ನ್ಯಾಯಮೂರ್ತಿ ಕುರಿಯನ್ ಜೋಸೆಫ್ ತ್ರಿವಳಿ ತಲಾಖ್ ಕುರಾನಿನ ಮೂಲ ಧರ್ಮಸೂತ್ರಗಳಿಗೆ ವಿರುದ್ಧವಾದದ್ದು ಮತ್ತು ಶರೀಯತ್ ನ್ನು ಉಲ್ಲಂಘಿಸುವಂತದ್ದು ಎಂದು ಹೇಳಿರುವುದು ಸರಿಯಾಗಿಯೇ ಇದೆ. ಅವರು 'ಶಮೀಮ್ ಅರಾ ವರ್ಸಸ್ ಉತ್ತರಪ್ರದೇಶ ರಾಜ್ಯ' ಕೇಸಿನಲ್ಲಿ ಸುಪ್ರಿಂ ಕೋರ್ಟ್ ತೀರ್ಪನ್ನು ಉದ್ಧರಿಸುತ್ತ ಇಸ್ಲಾಮೀ ಕಟ್ಟಳೆಗಳಲ್ಲಿ ಮುಸ್ಲಿಂ ಗಂಡನಿಗೆ ಈ ಸ್ವಚ್ಛಂದ, ಏಕಪಕ್ಷೀಯ ತಕ್ಷಣದ ವಿಚ್ಛೇದನೆ ಹೇರುವ ಅಧಿಕಾರ ಇಲ್ಲ ಎಂದು ಹೇಳಿದ್ದಾರೆ. ನ್ಯಾಯಮೂರ್ತಿ ಕುರಿಯನ್ ಮತ್ತು ನ್ಯಾಯಮೂರ್ತಿ ಆರ್ ಎಫ್ ನರಿಮನ್(ಇವರು ತಮ್ಮ ಮತ್ತು ನ್ಯಾಯಮೂರ್ತಿ ಯು ಯು ಲಲಿತ್ ಇಬ್ಬರ ತೀರ್ಪನ್ನು ಬರೆಯುತ್ತ) ತ್ರಿವಳಿ ತಲಾಖ್‌ನ್ನು ಇಸ್ಲಾಮ್‌ನ ಅನಿವಾರ್ಯ ಭಾಗ ಎಂದು ಪರಿಗಣಿಸಲಾಗದು ಹಾಗೂ ಹನಾಫಿ ನ್ಯಾಯಕಟ್ಟಳೆ ತ್ರಿವಳಿ ತಲಾಖ್ ಪಾಪಕರ ಎಂದು ವರ್ಜಿಸಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಸುಪ್ರಿಂ ಕೋರ್ಟ್ ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಖೇಹರ್(ತಮ್ಮ ಮತ್ತು ನ್ಯಾಯಮೂರ್ತಿ ಅಬ್ದುಲ್ ನಝೀರ್ ಪರವಾಗಿ ಬರೆದ) ಅಲ್ಪಮತದ ತೀರ್ಪಿನಲ್ಲಿ ವ್ಯಕ್ತಪಡಿಸಿದ ಕಣ್ಣೋಟವನ್ನು ತಾನು ಒಪ್ಪುವುದಿಲ್ಲ ಎಂದು ಎಐಡಿಡಬ್ಲ್ಯುಎ ಹೇಳಿದೆ. ಈ ತೀರ್ಪು ತಕ್ಷಣದ ತ್ರಿವಳಿ ತಲಾಖ್‌ಗೆ ಆರು ತಿಂಗಳ ತಡೆಯಾಜ್ಞೆ ನೀಡುತ್ತ ಸರಕಾರ ಈ ಅಂಶದ ಬಗ್ಗೆ ಶಾಸನ ತರಬೇಕು ಎಂದು ಸರಕಾರಕ್ಕೆ ನಿರ್ದೇಶನವಿತ್ತಿದೆ. ಒಂದು ಸಮರೂಪದ ನಾಗರಿಕ ಸಂಹಿತೆಯನ್ನು ಪ್ರತಿಪಾದಿಸುವ ಸರಕಾರದ ಪ್ರಯತ್ನವನ್ನು ತಾನು ಸದಾ ವಿರೋಧಿಸುವುದಾಗಿ ಹೇಳಿರುವ ಎಐಡಿಡಬ್ಲ್ಯುಎ ಪ್ರಸಕ್ತ ಆಳುವ ವ್ಯವಸ್ಥೆ ಅಲ್ಪಮತದ ತೀರ್ಪನ್ನು ಸಮರೂಪದ ನಾಗರಿಕ ಸಂಹಿತೆಯನ್ನು ಪ್ರೋತ್ಸಾಹಿಸಲು ಮತ್ತು ಮುಸ್ಲಿಂ ಸಮುದಾಯದ ಮೇಲೆ ಗುರಿಯಿಡಲು ಬಳಸಿಕೊಳ್ಳಬಹುದು ಎಂದು ಹೇಳಿದೆ. ಈ ಸರಕಾರಕ್ಕೆ ಯಾವುದೇ ಸಮುದಾಯಕ್ಕೆ ಲಿಂಗನ್ಯಾಯದ ಕಾನೂನುಗಳನ್ನು ತರುವ ಆಸಕ್ತಿಯೇನೂ ಇಲ್ಲ. ಅದು ಮಹಿಳೆಯರ ಹಿತಗಳನ್ನು ನೈಜವಾಗಿ ಕಾಪಾಡುವ ಒಂದು ಕಾನೂನು ತರುತ್ತದೆ ಎಂದು ನಂಬಲು ಸಾಧ್ಯವಿಲ್ಲ ಎಂದಿರುವ ಎಐಡಿಡಬ್ಲ್ಯುಎ ಈ ತೀರ್ಪಿನ ಅಧ್ಯಯನವನ್ನು ಮಾಡುತ್ತಿದ್ದು ಕ್ರಮೇಣ ಇದಕ್ಕೆ ವಿವರವಾದ ಪ್ರತಿಕ್ರಿಯೆ ಕೊಡುವುದಾಗಿ ಹೇಳಿದೆ.

ತ್ರಿವಳಿ ತಲಾಖ್ ನಿಷೇಧದ ಕೀರ್ತಿ ಬಾಚಿಕೊಳ್ಳುವ ಬಿಜೆಪಿ ಗೋಸುಂಬೆತನ-ಬೃಂದಾಕಾರಟ್

ತ್ರಿವಳಿ ತಲಾಖ್ ಕುರಿತ ಈ 395 ಪುಟಗಳ ಸುಪ್ರಿಂ ಕೋರ್ಟ್ ತೀರ್ಪು "ದಾಖಲು ಮಾಡಿಕೊಂಡಿರುವ ವಿಭಿನ್ನ ಅಭಿಪ್ರಾಯಗಳ ಹಿನ್ನೆಲೆಯಲ್ಲಿ 3:2 ಬಹುಮತದಿಂದ ತಲಾಖ್-ಎ-ಬಿದತ್ -ತ್ರಿವಳಿ ತಲಾಖ್‌ನ್ನು ರದ್ದು ಮಾಡಲಾಗಿದೆ"ಎಂಬ ಆದೇಶದೊಂದಿಗೆ ಮುಕ್ತಾಯಗೊಳ್ಳುತ್ತದೆ. ಈ ಆದೇಶ ಮಹಿಳೆಯರ ಹಕ್ಕುಗಳಿಗಾಗಿ ನಡೆಸುತ್ತಿರುವ ಜಾತ್ಯತೀತ ಹೋರಾಟಕ್ಕೆ ಸಿಕ್ಕಿರುವ ಒಂದು ಜಯ ಎಂದು ದೇಶದ ಮಹಿಳಾ ಆಂದೋಲನದ ಹಿರಿಯ ಮುಖಂಡರೂ, ಸಿಪಿಐ(ಎಂ) ಪೊಲಿಟ್‌ಬ್ಯರೊ ಸದಸ್ಯರೂ ಆಗಿರುವ ಬೃಂದಾ ಕಾರಟ್ ಹೇಳಿದ್ದಾರೆ. ಯಾವುದೇ ಒಂದು ಸಮುದಾಯದ ಮಹಿಳೆಯರ ಹಕ್ಕುಗಳನ್ನು ವೃದ್ಧಿಸುವ ಯಾವುದೇ ತೀರ್ಪು ಎಲ್ಲ ಮಹಿಳೆಯರ ಮೇಲೂ ಖಂಡಿತವಾಗಿಯೂ ಪರಿಣಾಮ ಬೀರುತ್ತದೆ ಎಂದಿರುವ ಅವರು ಮುಸ್ಲಿಮ್ ಮಹಿಳೆಯರು ಈ ಹೋರಾಟದ ಮುಂಚೂಣಿಯಲ್ಲಿದ್ದರು ಎಂಬುದನ್ನು ನೆನಪಿಸಿದ್ದಾರೆ. ಈ ತಕ್ಷಣದ ತ್ರಿವಳಿ ತಲಾಖ್ ಪಿತೃಪ್ರಧಾನ ಶಕ್ತಿಗಳು ಕುರಾನಿಗೆ ಕೊಟ್ಟಿರುವ ಅಪನಿರೂಪಣೆ ಎಂಬುದು ಈ ಮಹಿಳೆಯರ ನಿಲುವು. ಈ ವಿಜಯದ ಕೀರ್ತಿಯೆಲ್ಲ ಈ ಮಹಿಳೆಯರಿಗೆ ಮತ್ತು ಅವರ ಜತೆಗೆ ನಿಂತು ಮುಸ್ಲಿಂ ಮಹಿಳೆಯರ ನಡುವೆ ಹಲವು ದಶಕಗಳಿಂದ ಪ್ರಚಾರ ನಡೆಸುತ್ತಿರುವ ಎಐಡಿಡಬ್ಲ್ಯುಎ ಯಂತಹ ಪ್ರಜಾಪ್ರಭುತ್ವವಾದಿ ಮಹಿಳಾ ಸಂಘಟನೆಗಳಿಗೆ ಸಲ್ಲುತ್ತದೆ ಎಂದು ಬೃಂದಾ ಕಾರಟ್ ಹೇಳಿದ್ದಾರೆ.

ಮುಸ್ಲಿಂ ಮಹಿಳೆಯರ ಹೋರಾಟದ ಎದುರು ಮುಸ್ಲಿಂ ಕಾನೂನು ಮಂಡಳಿ ತನ್ನ ನಿಲುವನ್ನು ಬದಲಿಸಲೇ ಬೇಕಾಗಿ ಬಂತು. ಅದರ ಮೊದಲ ಅಫಿಡವಿಟ್ ಮಹಿಳೆಯರನ್ನು ತುಚ್ಛೀಕರಿಸುವ ಅತ್ಯಂತ ನಿಂದನೀಯ, ಆಕ್ಷೇಪಾರ್ಹ ಮತ್ತು ಪುರುಷಶ್ರೇಷ್ಠತೆಯ ತರ್ಕಗಳಿಂದ ಕೂಡಿದ್ದರೆ, ಅದರ ಕೊನೆಯ ಅಫಿಡವಿಟ್ ಈ ಆಚರಣೆ 'ಪಾಪಕರ' ಎನ್ನುತ್ತ ಇದರ ಬಳಕೆಯನ್ನು ನಿಲ್ಲಿಸುವ ಪ್ರತಿಜ್ಞೆ ಮಾಡಿದೆ.

ಈ ಹಿನ್ನೆಲೆಯಲ್ಲಿ ಬಿಜೆಪಿ ಮುಖಂಡರ ಪ್ರತಿಕ್ರಿಯೆಗಳು, ಇದು ತಮ್ಮ ವಿಜಯ ಎನ್ನುತ್ತಿರುವುದು ತಮಾಷೆಯಾಗಿ ಕಾಣುತ್ತವೆ ಎಂದು ಬೃಂದಾ ಕಾರಟ್ ಅಭಿಪ್ರಾಯ ಪಟ್ಟಿದ್ದಾರೆ. ನ್ಯಾಯಾಲಯ ಸಂವಿಧಾನ ವೈಯಕ್ತಿಕ ಕಾನೂನುಗಳಿಗೆ ನೀಡಿರುವ ರಕ್ಷಣೆ ಮತ್ತು ನ್ಯಾಯಾಂಗ ಮಧ್ಯಪ್ರವೇಶದ ನಡುವೆ ಸೂಕ್ಷ್ಮ ಸಮತೋಲನವನ್ನು ಕಾಯ್ದುಕೊಂಡಿದೆ. ಬಹುಮತದ ತೀರ್ಪು ಕೂಡ ಇದು ಕೇವಲ ಒಂದು ವಿಧದ ತ್ರಿವಳಿ ತಲಾಖ್‌ಗೆ ಅಂದರೆ ತಲಾಖ್-ಎ-ಬಿದತ್‌ಗೆ ಅದು ಕುರಾನಿನ ಧರ್ಮಸೂತ್ರಗಳಲ್ಲಿ ಸೇರಿಲ್ಲವಾದ್ದರಿಂದ ಅನ್ವಯವಾಗುತ್ತದೆ ಎಂದು ಜಾಗರೂಕತೆಯಿಂದ ಹೇಳಿದೆ. ನ್ಯಾಯಾಲಯದ ಮಧ್ಯಪ್ರವೇಶವನ್ನು ಮುಸ್ಲಿಂ ವೈಯಕ್ತಿಕ ಕಾನೂನಿನ ಅಡಿಯಲ್ಲಿ ವಿಚ್ಛೇದನದ ಇತರ ಅಂಶಗಳಿಗೂ ವಿಸ್ತರಿಸುವಂತೆ ಮಾಡುವ ಕೇಂದ್ರ ಸರಕಾರವನ್ನು ಪ್ರತಿನಿಧಿಸುವ ಅಟಾರ್ನಿ ಜನರಲ್ ಅವರ ಪ್ರಯತ್ನಗಳು ಮತ್ತು ತರ್ಕಗಳನ್ನು ಸುಪ್ರಿಂ ಕೋರ್ಟ್ ಸ್ವೀಕರಿಸಿಲ್ಲ. ಸಮರೂಪದ ನಾಗರಿಕ ಸಂಹಿತೆಯ ಪರವಾದ ತರ್ಕಗಳನ್ನು ತರುವ ಪ್ರಯತ್ನಗಳನ್ನೂ ನ್ಯಾಯಾಲಯ ಪರಿಗಣನೆಗೆ ತಗೊಂಡಿಲ್ಲ, ಭಾರತದ ಮುಖ್ಯ ನ್ಯಾಯಾಧೀಶರಂತೂ ಅಟಾರ್ನಿ ಜನರಲ್ ಅವರ ವಾದಗಳನ್ನು ನಿರ್ದಿಷ್ಟವಾಗಿ ಪ್ರಸ್ತಾಪಿಸುತ್ತ ಒಂದು "ಜಲಪಾತದಂತಹ ಪರಿಣಾಮ' ಉಂಟಾಗುವ ಬಗ್ಗೆ ಎಚ್ಚರಿಕೆ ನೀಡಿದ್ದಾರೆ ಎಂಬ ಸಂಗತಿಯತ್ತ ಬೃಂದಾ ಕಾರಟ್ ಗಮನ ಸೆಳೆದಿದ್ದಾರೆ.

ಆಗಸ್ಟ್ 22ರಂದು ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳು ದೇಶಾದ್ಯಂತ ಮುಷ್ಕರ ನಡೆಸಿದರು. ಯುಎಫ್‌ಬಿಯು(ಬ್ಯಾಂಕ್ ಸಂಘಗಳ ಐಕ್ಯ ವೇದಿಕೆ) ಕರೆಯ ಮೇರೆಗೆ ನಡೆದ ಈ ಮುಷ್ಕರದ ಮೂಲಕ ಬ್ಯಾಂಕಿಂಗ್ ವಲಯದಲ್ಲಿ ಕೇಂದ್ರ ಸರಕಾರ ತರುತ್ತಿರುವ ನವ-ಉದಾರವಾದಿ ಧೋರಣೆಗಳ ವಿರುದ್ಧ ತಮ್ಮ ಸ್ಪಷ್ಟ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಸಾರ್ವಜನಿಕ ವಲಯದ ಬ್ಯಾಂಕುಗಳ ಮಾತ್ರವಲ್ಲ, ಖಾಸಗಿ ಬ್ಯಾಂಕುಗಳು, ವಿದೇಶಿ ಬ್ಯಾಂಕುಗಳು ಮತ್ತು ಗ್ರಾಮಿಣ ಬ್ಯಾಂಕುಗಳ ನೌಕರರು, ಹಲವೆಡೆಗಳಲ್ಲಿ ಸಹಕಾರಿ ಬ್ಯಾಂಕುಗಳ ನೌಕರರು ಕೂಡ ಇದರಲ್ಲಿ ಭಾಗವಹಿಸಿದರು.

ಕಾರ್ಪೊರೇಟ್ ಸುಸ್ತಿದಾರರ ಕೆಟ್ಟ ಸಾಲಗಳನ್ನು ಅವರಿಂದ ವಸೂಲಿ ಮಾಡದೆ ಅದರ ಹೊರೆಯನ್ನು ಸಾರ್ವಜನಿಕ ವಲಯದ ಬ್ಯಾಂಕುಗಳ ಮೇಲಷ್ಟೇ ಅಲ್ಲದೆ ಬ್ಯಾಂಕ್ ಖಾತೆದಾರರ ಮೇಲೂ ಸೇವಾದರಗಳನ್ನು ಹೆಚ್ಚಿಸುವ ಹಾಕಿರುವುದನ್ನು ವಿರೋಧಿಸಿ, ಸಾಲ ವಸೂಲಿಗೆ ಕಟ್ಟುನಿಟ್ಟಾದ ಕ್ರಮಗಳನ್ನು ಆಗ್ರಹಿಸಿ ಈ ಮುಷ್ಕರ ನಡೆದಿದೆ. ಇದನ್ನು ಅನುಸರಿಸಿ ಸಪ್ಟಂಬರ್ 15ರಂದು ದಿಲ್ಲಿಯಲ್ಲಿ ಬೃಹತ್ ಧರಣಿ ನಡಟೆಸಲು ಮತ್ತು ಅಕ್ಟೋಬರ್‌ನಲ್ಲಿ ಮತ್ತೆ ಎರಡು ದಿನಗಳ ಮುಷ್ಕರ ನಡೆಸಲು ಕೂಡ ಯುಎಫ್‌ಬಿಯು ನಿರ್ಧರಿಸಿದೆ.



ಆಗಸ್ಟ್ 2 ರಂದು 11 ರಾಜ್ಯಗಳ 6000ಕ್ಕೂ ಹೆಚ್ಚು 'ಆಶಾ' ಕಾರ್ಯಜರ್ತೆಯರು ದಿಲ್ಲಿಯಲ್ಲಿ ರಾಮಲೀಲಾ ಮೈದಾನದಿಂದ ಜಂತರ್ ಮಂತರ್‌ವರೆಗೆ ಮೆರವಣಿಗೆ ನಡೆಸಿ ಮತಪ್ರದರ್ಶನ ನಡೆಸಿದರು. ಎನ್‌ಹೆಚ್‌ಎಂ(ರಾಷ್ಟ್ರೀಯ ಆರೋಗ್ಯಮಿಶನ್)ನ್ನು ಖಾಯಂ ಕಾರ್ಯಕ್ರಮವಾಗಿ ಮಾಡಬೇಕು, ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಖಾಸಗೀಕರಿಸಬಾರದು, ಸಾರ್ವಜನಿಕ ಆರೋಗ್ಯದ ಮೂಲಸೌಕರ್ಯಗಳನ್ನು ಉತ್ತಮ ಪಡಿಸಬೇಕು ಮತ್ತು 45 ಮತ್ತು 46ನೇ ಐಎಲ್‌ಸಿ ಶಿಫಾರಸಿನಂತೆ ಆಶಾ ಕಾರ್ಯಕರ್ತೆಯರೂ ಸೇರಿದಂತೆ ಎಲ್ಲ ಸ್ಕೀಮ್ ಕೆಲಸ ಮಾಡುವವರನ್ನು 'ನೌಕರರು' ಎಂದು ಪರಿಗಣಿಸಿಬೇಕು, ಅದುವರೆಗೆ ಶಾಸನಬದ್ಧ ಕನಿಷ್ಟ ಸಂಬಳವನ್ನು ಕೊಡಬೇಕು ಎಂದು ಆಗ್ರಹಿಸಿದರು. ನಂತರ ಆಶಾ ಕಾರ್ಯಕತೆ-ಯರು ದೇಶಾದ್ಯಂತ ಈ ಕುರಿತು ಸಂಗ್ರಹಿಸಿದ 50ಲಕ್ಷ ಸಹಿಗಳನ್ನು ಅವರ ಮುಖಂಡರು ಆರೋಗ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಿದರು.





ಚುನಾವಣಾ ಭರವಸೆಗಳನ್ನು ಈಡೇರಿಸದ ವಿರುದ್ಧ ಜನರ ಆಕ್ರೋಶ ರಾಜ್ಯಾದ್ಯಂತ ಪ್ರತಿಭಟನೆ, ಪ್ರಚಾರಾಂದೋಲನ

2014 ರ ಚುನಾವಣೆಗಳ ಸಂದರ್ಭದಲಿ ಮೋದಿಯವರು "ನಿಮಗೆ ಒಳ್ಳೆಯ ದಿನಗಳು ಬರಲಿವೆ" ಎಂದು ದೇಶದ ರೈತರಿಗೆ ಮತ್ತು ಇನ್ನುಳಿದ ನಾಗರಿಕರಿಗೆ ಭರವಸೆ ನೀಡಿದ್ದರು. ಇದ್ಯಾವುದನ್ನೂ ಮೋದಿ ಸರಕಾರ ಈಡೇರಿಸಿಲ್ಲ ಇಂತಹ ಸರಕಾರದ ಜನ–ವಿರೋಧಿ ನೀತಿಗಳನ್ನು ಬಯಲುಗೊಳಿಸಲು ಮತ್ತು ಚುನಾವಣಾ ಭರವಸೆಗಳನ್ನು ಈಡೇರಿಸಲು ಒತ್ತಾಯಿಸಿ ಸಿಪಿಐ(ಎಂ) ಅಗಸ್ಟ್ 15–31 ಅವಧಿಯಲ್ಲಿ ಪ್ರಚಾರಾಂದೋಲನ ಹಮ್ಮಿಕೊಂಡಿತ್ತು.

ರಾಷ್ಟ್ರೀಕೃತ ಬ್ಯಾಂಕಗಳಲ್ಲಿನ ರೈತರ ಸಾಲ ಮನ್ನಾ ಮಾಡುವುವುದು; ಕೃಷಿ ಉತ್ಪನ್ನಗಳಿಗೆ ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟಿನ ಕನಿಷ್ಟ ಬೆಂಬಲ ಬೆಲೆ ನೀಡುವುದು; ಪ್ರತಿವರ್ಷ 2 ಕೋಟಿ ಉದ್ಯೋಗಗಳನ್ನು ನಿರ್ಮಿಸುವ ಭರವಸೆಯನ್ನು ಈಡೇರಿಸುವುದು; ಸಾರ್ವಜನಿಕ ವಲಯ ಮತ್ತು ಸಾರ್ವಜನಿಕ ಸೇವೆಗಳ ಖಾಸಗೀಕರಣ ನಿಲ್ಲಿಸುವುದು; ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸುವುದು; ಗೋರಕ್ಷಕ ಸಮಿತಿಗಳು ಮತ್ತು ನೈತಿಕ ಪೊಲೀಸ್‌ಗಿರಿ ಮುಂತಾದ ಖಾಸಗಿ ಪಡೆಗಳನ್ನು ನಿಷೇಧಿಸುವುದು; ಜಾನುವಾರು ಮಾರಾಟ ನಿಷೇಧ ಅಧಿಸೂಚನೆಯನ್ನು ಇಡಿಯಾಗಿ ಕೈಬಿಡುವುದು; ಜಿಎಸ್‌ಟಿ ಮೂಲಕ ಜನಸಾಮಾನ್ಯರ ಮೇಲೆ ಹೇರಲಾದ ಹೊರೆಯನ್ನು ತೆಗೆದುಹಾಕುವುದು – ಸೇರಿದಂತೆ ಹಲವು ಜನತೆಯ ಹಕ್ಕೊತ್ತಾಯಗಳ ಬಗ್ಗೆ ಪ್ರಚಾರಾಂದೋಲನ ಒತ್ತು ನೀಡಿತ್ತು.

ಈ ಪ್ರಚಾರಾಂದೋಲನದ ಬಗ್ಗೆ ಜಿಲ್ಲೆಗಳಿಂದ ವರದಿಗಳು ಬರುತ್ತಿವೆ. ಬಂದಿರುವ ಕೆಲವು ವರದಿಗಳು ಇಲ್ಲಿವೆ :

ದಕ್ಷಿಣ ಕನ್ನಡ

ಜಿಲ್ಲೆಯಲ್ಲಿ ಹಲವು ಪ್ರದೇಶಗಳಲ್ಲಿ ವ್ಯಾಪಕವಾದ ಪಾದಯಾತ್ರೆ ಮೂಲಕ ಪ್ರಚಾರಾಂದೋಲನವನ್ನು ನಡೆಸಲಾಯಿತು.

ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿಯ ನೇತೃತ್ವದಲ್ಲಿ ಕೇಂದ್ರದ ಬಿಜೆಪಿ ನೇತೃತ್ವದ ಸರಕಾರವು ಜನವಿರೋಧಿ ನೀತಿಗಳನ್ನು ಕೈಬಿಡಬೇಕೆಂದು ಆಗ್ರಹಿಸಿ ದೇಶಾದ್ಯಂತ ನಡೆಸುತ್ತಿರುವ ರಾಜಕೀಯ ಪ್ರಚಾರಾಂದೋಲನದ ಭಾಗವಾಗಿ ಆಗಸ್ಟ್ 28 ರಂದು ಮಂಗಳೂರಿನಲ್ಲಿ ಪಾದಯಾತ್ರೆಯನ್ನು ನಡೆಸಲಾಯಿತು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ ಬೆಳಿಗ್ಗೆ ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಪಕ್ಷದ ಧ್ವಜವನ್ನು ಜಾಥಾ ನಾಯಕ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಅವರಿಗೆ ಹಸ್ತಾಂತರಿಸಿ ಪಾದಯಾತ್ರೆಯನ್ನು ಉದ್ಘಾಟಿಸಿ ಮಾತನಾಡಿದರು.

ಅಂದು ಬೆಳಗ್ಗಿನಿಂದ ಎಡೆಬಿಡದೆ ಸುರಿಯುತ್ತಿದ್ದ ಮಳೆಯಲ್ಲೂ 20 ಮಹಿಳೆಯರನ್ನೊಳಗೊಂಡಂತೆ 50 ಮಂದಿ ಪಕ್ಷದ ಕಾರ್ಯಕರ್ತರು ನಗರದ ಜಿಲ್ಲಾಧಿಕಾರಿ ಕಚೇರಿಯಿಂದ ಕಂಕನಾಡಿ, ಕದ್ರಿ, ಮಲ್ಲಿಕಟ್ಟೆ, ಪಿವಿಎಸ್ ವೃತ್ತ, ಮಹಾನಗರ ಪಾಲಿಕೆ ಕಚೇರಿ, ಮಣ್ಣಗುಡ್ಡೆ, ಕುದ್ರೋಳಿ, ಬಂದರು ಪ್ರದೇಶಗಳಿಂದ ನಗರ ಕೇಂದ್ರಕ್ಕೆ ಪುರಭವನದ ವರೆಗೆ 15 ಕಿ.ಮೀ.ದೂರ ಪಾದಯಾತ್ರೆ ನಡೆಸಿದರು.

ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ ಪುರಭವನದ ಬಳಿ ಸಮಾರೋಪ ಭಾಷಣ ಮಾಡಿದರು. ಮಂಗಳೂರು ನಗರ ಸಮಿತಿ ಸದಸ್ಯರಾದ ಜಯಂತಿ ಬಿ.ಶೆಟ್ಟಿ, ಸಂತೋಷ್ ಶಕ್ತಿನಗರ, ವಾಸುದೇವ ಉಚ್ಚಿಲ್, ಸುರೇಶ್ ಬಜಾಲ್, ಪ್ರೇಮನಾಥ ಜಲ್ಲಿಗುಡ್ಡೆ, ಭಾರತಿ ಬೋಳಾರ್ ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು.

ಇದೇ ರೀತಿ ಮಂಗಳೂರು ನಗರ ಉತ್ತರ ವಿಧಾನಸಭಾ ಕ್ಷೇತ್ರದ ಗ್ರಾಮೀಣ ಭಾಗ ಗುರುಪುರ ಬ್ಲಾಕ್ ಮಟ್ಟದ ಪಾದಯಾತ್ರೆಗೆ ಮಿಜಾರು ಗ್ರಾಮದಲ್ಲಿ ಚಾಲನೆ ನೀಡಲಾಯಿತು. ಪಾದಯಾತ್ರೆಯ ನೇತೃತ್ವವನ್ನು ವಸಂತ ಆಚಾರಿ ಮತ್ತು ಮುನೀರ್ ಕಾಟಿಪಳ್ಳ ವಹಿಸಿದ್ದರು.

ತುಮಕೂರು

ನಗರದ ಬಿಎಸ್‌ಎನ್‌ಎಲ್ ಕಛೇರಿ ಎದುರು ಆರಂಬಿಸಿದ ಪ್ರಚಾರಾಂದೋಲನವನ್ನು ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಸದಸ್ಯ ಸೈಯದ್‌ಮುಜೀಬ್ ಉದ್ಘಾಟಿಸಿ ಮಾತನಾಡಿದರು. ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ ಅವರೂ ವಿವರವಾಗಿ ಹಕ್ಕೊತ್ತಾಯಗಳ ಬಗ್ಗೆ ಮಾತನಾಡಿದರು. ಪ್ರಚಾರಾಂದೋಲನದಲ್ಲಿ ಸಿಪಿಐ (ಎಂ) ನಗರ ಕಾರ್ಯದರ್ಶಿ ಎಸ್. ರಾಘವೇಂದ್ರ, ಪ್ರಾಂತ ರೈತ ಸಂಘದ ಸಂಚಾಲಕ ಸಿ. ಅಜ್ಜಪ್ಪ, ಸಿಪಿಐ(ಎಂ) ಪಕ್ಷದ ರಾಮಚಂದ್ರ. ಎನ್. ಶಂಕರಪ್ಪ, ಷಣ್ಮುಖಪ್ಪ, ಎ. ಲೋಕೇಶ್, ಜೂನಿ, ದರ್ಶನ್, ಮೊದಲಾದವರು ಹಾಜರಿದ್ದರು.

ಧಾರವಾಡ:

ಆಗಸ್ಟ್–16 ರಿಂದ ಪ್ರಾರಂಭಿಸಿದ ಪ್ರಚಾರಾಂದೋಲನದ ಕೊನೆಯ ದಿನವಾದ ಅಗಸ್ಟ್ 30ರಂದು ಧಾರವಾಡ ನಗರದ ವಿವಿಧ ಮಾರುಕಟ್ಟೆ ಪ್ರದೇಶದಲ್ಲಿ ಕರಪತ್ರ ವಿತರಿಸಿ ಪ್ರಚಾರಾಂದೋಲನ ನಡೆಸಿದ ನಂತರ ವಿವೇಕಾನಂದ ವೃತ್ತದಲ್ಲಿ ಸಭೆ ನಡೆಸಲಾಯಿತು. ಬಿ.ಎಸ್.ಸೊಪ್ಪಿನ್ ಮುಖ್ಯ ಭಾಷಬಣ ಮಾಡಿದರು. ಪ್ರತಿಭಟನೆಯ ನೇತೃತ್ವವನ್ನು ಸಿಪಿಐಎಂ ಮುಖಂಡರಾದ ಮಹೇಶ ಪತ್ತಾರ, ಆರ್.ಎಚ್.ಆಯಿ, ಬಿ.ಎನ್.ಪೂಜಾರಿ, ಗಂಗಾಧರ ಗಾಡದ, ಮಾರುತಿ ಅಂಬಿಗೇರ, ಸುಭಾಸ ಮಾದರ, ಎ.ಎಂ. ಖಾನ ಮುಂತಾದವರು ವಹಿಸಿದ್ದರು.







ಕಡಲ ಕಡೆ

ಮಂಗಳೂರಿನಲ್ಲಿ ಇಂದಿರಾ ಕ್ಯಾಂಟೀನ್ ಆರಂಭಿಸಿ : ಡಿವೈಎಫ್ಐ

ರಿಯಾಯತಿ ದರದಲ್ಲಿ ಆಹಾರ ಒದಗಿಸುವ ಇಂದಿರಾ ಕ್ಯಾಂಟೀನ್‌ಗಳನ್ನು ಬೆಂಗಳೂರು ನಗರದಲ್ಲಿ ಆಗಸ್ಟ್ 16 ರಂದು ಆರಂಭ ಮಾಡಿದ್ದು, ಅದರ ಉದ್ಘಾಟನಾ ಸಮಾರಂಭವನ್ನು ರಾಜ್ಯ ಸರಕಾರ ಭರ್ಜರಿಯಾಗಿ ಏರ್ಪಡಿಸಿದರೆ ನಿಜವಾಗಿಯೂ ಎಲ್ಲ ನಗರ ಪಟ್ಟಣ ಪ್ರದೇಶಗಳಲ್ಲಿಯೂ ಈ ಯೋಜನೆ ಜಾರಿಗೊಳಿಸಬೇಕಿತ್ತು. ಮಂಗಳೂರು ನಗರದಲ್ಲಿಯೂ ಇಂದಿರಾ ಕ್ಯಾಂಟೀನ್ ಆರಂಭಿಸುವಂತೆ ಆಗ್ರಹಿಸಿ ಆಗಸ್ಟ್ 21 ರಂದು ಡಿವೈಎಫ್ಐ ಜಿಲ್ಲಾ ಸಮಿತಿ ನೇತೃತ್ವದಲ್ಲಿ ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಅಣ–ಕು ಕ್ಯಾಂಟೀನ್ ನಡೆಸಿ ಪ್ರತಿಭಟನೆ ನಡೆಸಲಾಯಿತು.

5 ವರ್ಷಗಳ ಹಿಂದೆ ಅಗ್ಗದ ದರದ ಕ್ಯಾಂಟೀನ್‌ಗಳನ್ನು ತಮಿಳುನಾಡಿನ ಅಮ್ಮ ಕ್ಯಾಂಟೀನ್ ಮಾದರಿಯಲ್ಲಿ ಆರಂಭಿಸಬೇಕು ಎಂದು ಆಗ್ರಹಿಸಿ ಮಂಗಳೂರಿನ ಡಿವೈಎಫ್ಐ ಜಿಲ್ಲಾ ಸಮಿತಿ ಇದೇ ಜಿಲ್ಲಾಧಿಕಾರಿ ಕಚೇರಿ ಎದುರು ಅಣಕು ಕ್ಯಾಂಟೀನ್ ನಡೆಸಿ ಪ್ರತಿಭಟನೆ ನಡೆಸಿದ್ದರು. ಇದೀಗ ರಾಜ್ಯ ಸರಕಾರ ನಗರಗಳಿಗೆ ಬಂದು ದಿನಗೂಲಿ ಮಾಡುವ ಕಾರ್ಮಿಕರಿಗೆ, ಬಡವರಿಗೆ, ವಿದ್ಯಾಭ್ಯಾಸಕ್ಕಾಗಿ ಬರುವ ವಿದ್ಯಾರ್ಥಿಗಳಿಗೆ 'ಇಂದಿರಾ ಕ್ಯಾಂಟೀನ್ ಯೋಜನೆ



ಆರಂಭಿಸಿರುವುದು ಶ್ಲಾಘನೀಯ. ಆದರೆ ಬೆಂಗಳೂರಿಗೆ ಮಾತ್ರವೇ ಸೀಮಿತಗೊಳಿಸಿರುವುದನ್ನು ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕಾರ್ಯಕರ್ತರು ಟೀಕಿಸಿದರು.

ಲಾಭವೂ ಇಲ್ಲ ನಷ್ಟವೂ ಇಲ್ಲದ ಅಗ್ಗದ ದರದಲ್ಲಿ ಅಣಕು ಕ್ಯಾಂಟೀನ್‌ನಲ್ಲಿ ಇರಿಸಲಾಗಿದ್ದ ಆಹಾರ ವಸ್ತುಗಳು ಕೆಲವೇ ಕ್ಷಣಗಳಲ್ಲಿ ಮಾರಾಟವಾದುವು. ಪ್ರತಿಭಟನೆಯನ್ನು ಉದ್ಘಾಟಿಸಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಮಾತನಾಡಿದರು. ಡಿವೈಎಫ್ಐ ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಸಂತೋಷ್ ಬಜಾಲ್ ಪ್ರಸ್ತಾವನೆಗೈದರೆ, ಬಳಿಕ ಉಪಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮಾತನಾಡಿದರು. ಡಿವೈಎಫ್ಐ ಜಿಲ್ಲಾ ಸಮಿತಿ ಮುಖಂಡರಾದ ಮನೋಜ್ ವಾಮಂಜೂರು, ರಫೀಕ್ ಹರೇಕಳ, ನವೀನ್ ಕೊಂಚಾಡಿ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ವರದಿ : ವಾಸುದೇವ ಉಚ್ಚಿಲ

ಉದಾರೀಕರಣ, ಕೋಮುವಾದಿಗಳು ದೇಶದ ದುರಂತಗಳು: ಅಮೀನ್ ಮಟ್ಟು

ದೇವರು, ಧರ್ಮದ ಹೆಸರಿನಲ್ಲಿ ಬಡಜನರ ಶೋಷಣೆ ಮಾಡುವವರು ಹಿಂದೂ ಧರ್ಮದೊಳಗಿನ ಶತ್ರುಗಳು. ಇಂಥವರು ತಮ್ಮ ಬಂಡವಾಳ ಬಯಲಿಗೆ ಬಾರದೆ ಇರಲು ಮುಸ್ಲಿಮರು, ಕ್ರೈಸ್ತರನ್ನು ಹಿಂದೂಗಳ ಶತ್ರುಗಳೆಂಬಂತೆ ಬಿಂಬಿಸುತ್ತಾರೆ. ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಭಾರತವನ್ನು ಜನಪ್ರತಿನಿಧಿಗಳ ಬದಲು ಕೋಮುವಾದಿ ಸಂವಿಧಾನೇತರರ ಶಕ್ತಿಗಳು ಆಳುತ್ತಿದ್ದು, ಇಂಥವರ ಚಕ್ರವ್ಯೂಹದಿಂದ ಯುವಜನರನ್ನು ಬಿಡಿಸಿ ಸೈದ್ಧಾಂತಿಕ ತಳಹದಿಯ ಹೋರಾಟ ನಡೆಸಬೇಕಾಗಿದೆ. ಈ ನಿಟ್ಟಿನಲ್ಲಿ ಡಿವೈಎಫ್ಐ ಮುನ್ನಡೆಯುತ್ತಿದೆ ಎಂಬುದಾಗಿ ಖ್ಯಾತ ಪತ್ರಕರ್ತ ಹಾಗೂ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ದಿನೇಶ್ ಅಮೀನ್ ಮಟ್ಟು ನುಡಿದರು.

ಅವರು ಮಂಗಳೂರಿನಲ್ಲಿ ಆಗಸ್ಟ್ 27 ರಂದು ಡಿವೈಎಫ್ಐ ಮಂಗಳೂರು ನಗರ 11ನೇ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ದೇಶಾದ್ಯಂತ ಭರವಸೆ ಹುಟ್ಟಿಸುವ ಅನೇಕ ಚಳುವಳಿಗಳು ರೂಪುಗೊಳ್ಳುತ್ತಿವೆ. ಗುಜರಾತ್ ರಾಜ್ಯಸಭಾ ಸಂದರ್ಭದಲ್ಲಿ ಚುನಾವಣಾ ಆಯೋಗ ನೀಡಿದ ತೀರ್ಪು ಮತ್ತು ಹರಿಯಾಣಾದ ಅತ್ಯಾಚಾರಿ ಸ್ವಾಮಿ ಗುರ್ಮಿಥ್ ಬಾಬಾ ವಿರುದ್ಧ ಸಿಬಿಐ ನ್ಯಾಯಾಲಯ ನೀಡಿದ ತೀರ್ಪು ಹೊಸ ಚಿಂತನೆ ಹಾಗೂ ಹುಮ್ಮಸ್ಸು ಮೂಡಿಸಿವೆ. ದಕ್ಷಿಣ ಕನ್ನಡದ ಶಿಕ್ಷಣ ವ್ಯಾಪಾರೀಕರಣವಾಗುತ್ತಿದ್ದು, ಇದರಿಂದ ಮತೀಯವಾದಿಗಳಿಗೆ ಪೋಷಣೆ ದೊರೆಯುತ್ತಿದೆ. ಆದರೆ ಸಂಘ ಪರಿವಾರದ ನಾಯಕರು ಕಾವ್ಯಾ, ಸೌಜನ್ಯರ ಸಾವಿನ ಬಗ್ಗೆ ಚಕಾರ ಎತ್ತುತ್ತಿಲ್ಲ. ಸಂಘ ಪರಿವಾರದ ಅಜೆಂಡಾ ಕೋಮುವಾದವನ್ನು ಹಬ್ಬಿಸಿ ನವ ಉದಾರೀಕರಣವನ್ನು ಬಲಿಷ್ಟಗೊಳಿಸುವುದಾಗಿದೆ. ಇವೆರಡೂ ದೇಶದ ದುರಂತಗಳಾಗಿದ್ದು, ಅದಕ್ಕೆ ಉತ್ತರ ಕಂಡುಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂದು ದಿನೇಶ್ ಅಮೀನ್ ಮಟ್ಟು ಹೇಳಿದರು.

ಡಿವೈಎಫ್ಐ ರಾಜ್ಯ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿ, ಮೂರು ವರ್ಷಗಳ ಹಿಂದೆ ನರೇಂದ್ರ ಮೋದಿಯವರು ಪ್ರಧಾನಿಯಾಗಿ ಬಂದ ಸಂದರ್ಭದಲ್ಲಿ ದೇಶದಲ್ಲಿ ವರ್ಷಂಪ್ರತಿ 2 ಕೋಟಿ ಉದ್ಯೋಗಗಳನ್ನು ಸೃಷ್ಟಿಸುವುದಾಗಿ ಹೇಳಿದ್ದರು. ಯುವಜನ ಆ ಬಗ್ಗೆ ತುಂಬಾ ನಿರೀಕ್ಷೆ ಇಟ್ಟುಕೊಂಡಿದ್ದರು. ಈಗ ಹೊಸದಾಗಿ ಉದ್ಯೋಗ ಸೃಷ್ಟಿಯಾಗುವುದು ಹೋಗಲಿ, ಈಗಾಗಲೇ ಸಾರ್ವಜನಿಕ ರಂಗದಲ್ಲಿ ಇದ್ದ 70 ಲಕ್ಷ ಉದ್ಯೋಗಗಳು ಇಲ್ಲವಾಗಿವೆ. ಭ್ರಮೆಗೆ ಒಳಗಾದ ಯುವಜನರನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಬೇರೆಡೆಯಲ್ಲೂ ಗೋರಕ್ಷಣೆ, ದೇಶಪ್ರೇಮದ ಉನ್ಮಾದ ಹುಟ್ಟಿಸಿ ಕ್ರಿಮಿನಲ್ ಕೃತ್ಯಕ್ಕೆ ಛೂಬಿಡಲಾಗುತ್ತಿದೆ. ಯುವಜನರು ಇಂಥ ಹುನ್ನಾರಗಳಿಗೆ ಬಲಿಬೀಳದಿರಲು ಅವರು ಕರೆ ನೀಡಿದರು.

ಡಿವೈಎಫ್ಐ ಮಾಜಿ ರಾಜ್ಯಾಧ್ಯಕ್ಷ ಸುನಿಲ್ ಕುಮಾರ್ ಬಜಾಲ್, ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ದಯಾನಂದ ಶೆಟ್ಟಿ, ಕಾರ್ಯದರ್ಶಿ ಸಂತೋಷ್ ಬಜಾಲ್, ಉಪಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ವೇದಿಕೆಯ ಮೇಲಿದ್ದರು. ನವೀನ್ ಕೊಂಚಾಡಿ ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನವು ಮುಂದಿನ ಸಾಲಿಗೆ ನೂತನ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿದ್ದು, ನವೀನ್ ಕೊಂಚಾಡಿ ಅಧ್ಯಕ್ಷರಾಗಿಯೂ ಸಾದಿಕ್ ಕಣ್ಣೂರು ಕಾರ್ಯದರ್ಶಿಯಾಗಿಯೂ ಆಯ್ಕೆಯಾಗಿದ್ದಾರೆ.

ವರದಿ : ವಾಸುದೇವ ಉಚ್ಚಿಲ

ಘನತೆಯ ಬದುಕಿಗೆ ಎಲ್ಲಾ ಅಂಗವಿಲರಿಗೂ ಶಿಕ್ಷಣ ಉದ್ಯೋಗ ಅಂಗವಿಕಲರ ಯೋಜನೆಗಳು ಬಿಕ್ಷೆಯಲ್ಲ– ಅದು ನಮ್ಮ ಹಕ್ಕು

ಘನತೆಯ ಬದುಕಿಗೆ ಎಲ್ಲಾ ಅಂಗವಿಕಲರಿಗೂ ಶಿಕ್ಷಣ, ಉದ್ಯೋಗ, ಸಿಗಬೇಕು. ಖಾಸಗಿ ಸಂಸ್ಥೆಗಳಲ್ಲೂ ಅಂಗವಿಕಲರಿಗೆ ಶೇಕಡಾ 5% ಮೀಸಲಾತಿ ನೀಡಬೇಕು. ಅಂಗವಿಕಲರ ಪಾಲಕರ ದೊಂದೆಕುಲ ನಮ್ಮಲ್ಲದೆ ಒಗ್ಗಟ್ಟಿನ ಬಲ ಅಥವಾ ನಮ್ಮಲ್ಲಿರಲಿ ಒಗ್ಗಟ್ಟಿನ ಬಲ, ಸರಕಾರ ಎಲ್ಲಾ ಅಂಗವಿಕಲರಿಗೂ ಉಚಿತ ಮನೆ, ನಿವೇಶನ ಹಾಗೂ ವಿಶೇಷ ಶೌಚಾಲಯ ನೀಡಲಿ, ಅಂಗವಿಕಲರು ಸಮಾಜದ ಅವಿಭಾಜ್ಯ ಅಂಗ, ಬದುಕಲು ಬಿಡಿ. ಅಂಗವಿಕಲರ ಯೋಜನೆಗಳು ಸಮರ್ಪಕವಾಗಿ ಜ್ಯಾರಿಯಾಗಲಿ, ಇದು ಬಿಕ್ಷೆಯಲ್ಲ ಅದು ನಮ್ಮ ಹಕ್ಕು ಎಂದು ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ರಾಜ್ಯ ಅಧ್ಯಕ್ಷ ಹಾಗೂ ಸಮಾಜವಿಜ್ಞಾನಿ ಜಿ.ಎನ್. ನಾಗರಾಜ ಹೇಳಿದರು.

ಅಂಗವಿಕಲರ ಹಕ್ಕುಗಳ ರಾಷ್ಟ್ರೀಯ ವೇದಿಕೆ ನವದೆಹಲಿಗೆ ಸಂಯೋಜಿಸಲ್ಪಟ್ಟ (NPRD) ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಉಡುಪಿ ಜಿಲ್ಲಾ ಸಮ್ಮೇಳನವು ಕುಂದಾಪುರ ಕಾರ್ಮಿಕ ಭವನದಲ್ಲಿ ಜರಗಿದ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕಳೆದ ವರ್ಷದಿಂದ ಇಲ್ಲಿಯುವರೆಗೆ ರಾಜ್ಯ–ಕೇಂದ್ರ ಸರಕಾರಗಳು ಅಂಗವಿಕಲರಿಗಾಗಿ ಯಾವುದೇ ಯೋಜನೆಗಳನ್ನು ರೂಪಿಸದೇ ಇದ್ದುದರಿಂದಾಗಿ ರಾಜ್ಯದ ಅಂಗವಿಕಲರ ಜೀವನದ ಸ್ಥಿತಿಗತಿಗಳಲ್ಲಿ ಯಾವುದೇ ಸುಧಾರಣೆಗಳಾಗದೇ ಹಾಗೆಯೇ ಮುಂದುವರಿದುಕೊಂಡು ಹೋಗಿರುವುದನ್ನು ಕಾಣುತ್ತಿದ್ದೇವೆ. ಸರಕಾರಗಳು ಅಂಗವಿಕಲರಿಗೆ ಸಮಾನ ಅವಕಾಶ, ಪೂರ್ಣ ಭಾಗವಹಿಸುವಿಕೆ, ಹಕ್ಕುಗಳ ಸಂರಕ್ಷಣೆ ಕುರಿತಂತೆ ಮಾತುಗಳಾಯಿತೇ ವಿನಹ ಕೃತಿಯಲ್ಲಂತೂ ಸಾಧ್ಯವಾಗಲೇ ಇಲ್ಲ. ಹೀಗಾಗಿ ರಾಜ್ಯದ ಅಂಗವಿಕಲನ ಬದುಕು ಉತ್ತಮಗೊಳ್ಳುವುದರಲ್ಲಿ ಸುಧಾರಣೆಯಾಗದೇ ಮತ್ತಷ್ಟು ಕಷ್ಟಗಳಿಗೆ ಸಿಲುಕಿದ್ದಾರೆ ಎಂದು ಜಿ.ಎನ್. ನಾಗರಾಜ ಆತಂಕ ವ್ಯಕ್ತ ಪಡಿಸಿದರು.

ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಜಿಲ್ಲಾ ಗೌರವ ಅಧ್ಯಕ್ಷ ವೆಂಕಟೇಶ ಕೋಣಿ ಪ್ರಸ್ತಾವಿಕ ಭಾಷಣ ಮಾಡುತ್ತಾ, ಕೆಲವು ತಂದೆ ತಾಯಿಗಳಿಗೆ ಎಲ್ಲಾ ಮಕ್ಕಳು ತೀವ್ರ ಸ್ವರೂಪದ ಅಂಗವಿಕಲತೆ, ಇಲ್ಲದೆ ಬುದ್ಧಿಮಾಂದ್ಯ, ಆಟಿಸಮ್ ಹೊಂದಿದ ಮಕ್ಕಳು ಇದ್ದಾರೆ. ತಂದೆ ತಾಯಿ ತೀರಿದ ಮೇಲೆ ಅಂಗವಿಕಲ ಮಕ್ಕಳು ಅನಾಥರಾಗುತ್ತಾರೆ. ಇಂತಹ ಸಮಸ್ಯೆ ಇಡೀ ರಾಜ್ಯದಲ್ಲಿ ದೊಡ್ಡದಾಗಿದ್ದು, ಸರಕಾರ ಇದರ ಬಗ್ಗೆ ಪರಿಶೀಲಿಸಬೇಕಾಗಿದೆ. ಕನಿಷ್ಠ ಜಿಲ್ಲೆಗೊಂದರಂತೆ ಬುದ್ಧಿಮಾಂದ್ಯ, ಸ್ವಲೀನ (ಆಟಿಸಂ) ಮತ್ತು ತೀವ್ರ ಅಂಗವಿಕಲತೆ ಇರುವವರಿಗೆ ಸರಕಾರ ಪುನರ್ವಸತಿ ಕೇಂದ್ರ ತೆರೆಯಬೇಕು ಎಂದು ಸರಕಾರವನ್ನು ಆಗ್ರಹಿಸಿದರು.

ವಾಗಜ್ಯೋತಿ ಕಿವುಡ, ಮತ್ತು ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ, ಮೂಡಬಗೆ, ಅಂಪಾರು, ಮುಖ್ಯೋಪಾಧ್ಯಾಯ ರವೀಂದ್ರರವರು ಮುಖ್ಯ ಅತಿಥಿಗಳಾಗಿ ಸಮ್ಮೇಳನದಲ್ಲಿ ಮಾತನಾಡಿದರು. ಪ್ರತೀ ಗ್ರಾಮ ಮತ್ತು ಗ್ರಾಮ ಪಂಚಾಯತ್ ಮಟ್ಟದಲ್ಲಿ ನಗರ ಪಟ್ಟಣಗಳಲ್ಲಿ ವಾರ್ಡು ಮಟ್ಟದಲ್ಲಿ ಅಂಗವಿಕಲರ ಹಾಗೂ ಪಾಲಕರ ಸಮಿತಿಗಳನ್ನು ರೂಪಿಸಿ, ಎಲ್ಲಾ ಅಂಗವಿಕಲರ ಘನತೆಯ ಜೀವನಕ್ಕಾಗಿ ಬೃಹತ್ ಅಂಗವಿಕಲರ ಸಂಘಟನೆ ಕಟ್ಟೋಣ ಎಂದು ಹೇಳಿದರು.

ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಕೃಷ್ಣ ಪೂಜಾರಿ ಕೋಟೇಶ್ವರ – ಚಟುವಟಿಕೆಯ ವರದಿ ಮಂಡಿಸಿದರು. ಮುಖಂಡರಾದ ಜಿ.ಎನ್. ಯಶಸ್ವಿ, ಮುಕಾಂಬು ಯಡ್ತರೆ, ವನಿತಾ ಹೊಂಬಾಡಿ ಮಂಡಾಡಿ, ರಾಜು ಪೂಜಾರಿ ಮುದೂರು, ವಿಲ್ಸನ್ ಹಂಗಳೂರು, ವಿಜಯ ಕಿರಿಮಂಜೇಶ್ವರ, ರಾಧಕೃಷ್ಣ ಬೈಂದೂರು, ಅನಿತಾ ಪಡುವರಿ, ಬಾಬು ಕೆ. ದೇವಾಡಿಗ ಉಪ್ಪುಂದ, ನಾಗರಾಜ ತಲ್ಲೂರು, ವಿಜಯಶ್ರೀ ಕಂಬದಕೋಣೆ, ಕೃಷ್ಣ ನಾಯ್ಕ, ಬ್ರಹ್ಮಾವರ ಅಣ್ಣಯ್ಯ ಕೋಡಿ, ದಿನೇಶ ಶೇರುಗಾರ ಕಂಡ್ಲೂರು ಉಪಸ್ಥಿತರಿದ್ದರು. ಮಂಜುನಾಥ ಹೆಬ್ಬಾರ್ ಕಾಲ್ತೋಡು ಸಮ್ಮೇಳನದ ಅಧ್ಯಕ್ಷತೆ ವಹಿಸಿದರು.

ವರದಿ : ವೆಂಕಟೇಶ ಕೋಣಿ

ಸಾಮೂಹಿಕ ಉಪವಾಸ ಸತ್ಯಾಗ್ರಹ

ವಿದ್ಯುತ್ ಕಾರ್ಮಿಕರು ಗುತ್ತಿಗೆ ಪದ್ಧತಿಯನ್ನು ವಿರೋಧಿಸಿ ಬೆಂಗಳೂರಿನಲ್ಲಿ ಕಾ. ಎಸ್. ವರಲಕ್ಷ್ಮಿ ಅವರ ನೇತೃತ್ವದಲ್ಲಿ ಅಗಸ್ಟ್ 31ರಂದು ಸಾಮೂಹಿಕ ಉಪವಾಸ ಸತ್ಯಾಗ್ರಹ ನಡೆಸಿದರು.





ಕಲಬುರ್ಗಿ ಹಂತಕರೆಲ್ಲಿ ? -ಉತ್ತರ ಕೊಡಿ



ಬೆಂಗಳೂರು: ನಾಡಿನ ಖ್ಯಾತ ಸಂಶೋಧಕ, ಹಿರಿಯ ವಿಚಾರವಾದಿ ಡಾ. ಎಂ ಎಂ ಕಲಬುರಗಿಯವರ ಹತ್ಯೆಯಾಗಿ ಎರಡು ವರ್ಷ ಕಳೆದರೂ, ಹತ್ಯೆಕೋರರನ್ನು ಬಂಧಿಸುವಲ್ಲಿ ವಿಳಂಬ ನೀತಿಯನ್ನು ಅನುಸರಿಸುತ್ತಿರುವ ಸರಕಾರದ ಕ್ರಮ ಖಂಡಿಸಿ ಅಗಸ್ಟ್ 30ರಂದು ಹಲವು ಪ್ರಗತಿಪರ ಸಂಘಟನೆಗಳು ಪುರಭವನದ ಎದುರು ಜಂಟಿಯಾಗಿ ಪ್ರತಿಭಟನಾ ಧರಣಿ ನಡೆಸಿದವು.

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಹಿರಿಯ ಸಾಹಿತಿಗಳಾದ ಬಿಟಿ ಲಲಿತಾನಾಯಕ್ ಮಾತನಾಡಿ, ವ್ಯವಸ್ಥೆಯನ್ನು ಪ್ರಶ್ನಿಸುವವರ ಧ್ವನಿ ಅಡಗಿಸಲು ಇಂದು ಕೋಮುವಾದಿ ಶಕ್ತಿಗಳು ಇಂತಹ ಜೀವ ತೆಗೆಯುವ ಕೃತ್ಯಕ್ಕೆ ಮುಂದಾಗುತ್ತಿವೆ. ಅದರಿಂದಾಗಿ ವ್ಯಕ್ತಿಗಳ ಜೀವ ತೆಗೆಯಬಹುದು ಆದರೆ ಚಿಂತನೆಗಳ ಜೀವ ತೆಗೆಯಲು ಸಾಧ್ಯವಿಲ್ಲ ಎಂದ ಅವರು ಸರಕಾರ ಕೂಡಲೇ ಕೊಲೆಗಡಕರನ್ನು ಪತ್ತೆಹಚ್ಚಬೇಕೆಂದು ಒತ್ತಾಯಿಸಿದರು.

ಬರಹಗಾರರಾದ ಯೋಗೇಶ್ ಮಾಸ್ಟರ್ ಮಾತನಾಡಿ, ದುಷ್ಕರ್ಮಿಗಳು ರಿವಾಲ್ವರ್ ತೊಗಂಡು ಮನೆಬಾಗಿಲಿಗೆ ಬಂದಾಗ ಪೋಲಿಸರಿಗೆ ಪೋನ್ ಮಾಡಿ ತಿಳಿಸಿದರೆ ಸ್ಟೇಶನ್ ಗೆ ಬಂದು ಕಂಪ್ಲೇಟ್ ಕೊಡಿ ಎಂಬ ಪೋಲಿಸರ ಮಾತುಗಳೇ ಚಿಂತಿಸುವಂತೆ ಮಾಡುತ್ತಿವೆ. ಈ ರೀತಿಯಾದರೆ ಸರಕಾರವನ್ನು, ಪೋಲಿಸರನ್ನು ಹಾಗೂ ಸಮಾಜವನ್ನು ಹೇಗೆ ನಂಬಬೇಕು? ವೈಜ್ಞಾನಿಕ ಮನೋಭಾವನೆಯನ್ನು ಮೂಡಿಸೋದು ಹೇಗೆ ಎಂಬುದಾಗಿ ಕಳವಳ ವ್ಯಕ್ತಪಡಿಸಿದರು. ನನ್ನ ಹತ್ಯೆ ಮಾಡಲು ತಂತ್ರ ಹೆಣೆದ ರೀತಿಯಲ್ಲಿಯೇ ಕಲಬುರಗಿಯವರನ್ನು ಹತ್ಯೆ ಮಾಡಿದಾರೆ. ಹಾಡು ಹಗಲೇ ತ್ರಿಶೂಲ ಹಂಚುವ, ವೈಚಾರಿಕರನ್ನು ಸದೆಬಡೆಯುವಂತೆ ಕೋಮುವಾದಿ ಸ್ವಾಮಿಗಳು ಕರೆ ನೀಡುತ್ತಿದ್ದು, ಇಂತಹ ಜೀವವಿರೋಧಿ ಸಿದ್ಧಾಂತವನ್ನು ಹರಡಲು ಬಿಡದೆ ಜಾಗೃತಿ ಮೂಡಿಸಬೇಕಿದೆಯೆಂದರು.

ಜನಶಕ್ತಿ ಪತ್ರಿಕೆಯ ಸಂಪಾದಕ ಮಂಡಳಿಯ ಎಸ್. ವೈ ಗುರುಶಾಂತ ಮಾತನಾಡಿ, ಎಂಎಂ ಕಲಬುರಗಿಯವರನು ಹತ್ಯೆ ಮಾಡಿದವರು ವೈಚಾರಿಕ ಭಿನ್ನತೆಯನ್ನು ಹೊಂದಿದವರು ಅಲ್ಲದೇ ಅವರಿಗೊಂದು ಸಾಂಸ್ಥಿಕ ಹಿನ್ನೆಲೆಯಿದೆ ಎಂಬುದಾಗಿ ಮಾಹಿತಿ ಸರಕಾರಕ್ಕೆ ಲಭಿಸಿದ್ದರೂ ಆ ಹತ್ಯೆಕೋರರನ್ನು ಗುರುತಿಸುವಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವ ಸರಕಾರದ ನಡೆಗೆ ಏನೆನ್ನಬೇಕು? ಎಂದರಲ್ಲದೇ ಕಲಬುರಗಿಯರ ಹತ್ಯೆಗೆ ನ್ಯಾಯ ಸಿಗುವಂತಾಗಬೇಕಾದರೆ ಕೂಡಲೇ ಸರಕಾರ ಹತ್ಯೆಕೋರರನ್ನು ಬಂಧಿಸಬೇಕಿದೆ ಎಂದು ಒತ್ತಾಯಿಸಿದರು.

SFI ರಾಜ್ಯಾಧ್ಯಕ್ಷರಾದ ವಿ ಅಂಬರೀಷ್, DYFI ಮುಖಂಡರಾದ ಬಸವರಾಜ ಪೂಜಾರ, ಜನವಾದಿ ಮಹಿಳಾ ಸಂಘಟನೆ JMS ರಾಜ್ಯ ಕಾರ್ಯದರ್ಶಿ ಕೆ. ಗೌರಮ್ಮ, ಸಮುದಾಯ ರಾಜ್ಯ ಉಪಾಧ್ಯಕ್ಷರಾದ ಟಿ ಸುರೇಂದ್ರರಾವ್, BGVS ಉಪಾಧ್ಯಕ್ಷರಾದ ಪುರುಷೋತ್ತಮ್ ಕಲಾಲಬಂಡಿ, DSF ರಾಜ್ಯ ಸಂಚಾಲಕರಾದ ರಾಜ್ ಗೋಪಾಲ್, ಸಾಮಾಜಿಕ ಕಾರ್ಯಕರ್ತರಾದ ನರಸಿಂಹ ಮೂರ್ತಿ ಮಾತನಾಡಿದರು.

ಉತ್ತರ ಕನ್ನಡ : ಚಿಂತಕ, ಸತ್ಯಶೋಧ ವೈಚಾರಿಕ ನಾಡೋಜ ಡಾ. ಎಂ. ಎಂ. ಕಲ್ಬುರ್ಗಿ ಯವರ ನೆನಪಿನಲ್ಲಿ ಕಾರವಾರದಲ್ಲಿ ಚಿಂತನ ಉತ್ತರ ಕನ್ನಡ, ಚಿಂತನ ರಂಗ ಅಧ್ಯಯನ ಕೇಂದ್ರ, ಸಿಐಟಿಯು, ಎಸ್.ಎಫ್.ಐ ಮತ್ತು ಸಮಾನ ಮನಸ್ಕ ಸ್ನೇಹಿತರು ಸೇರಿದ್ದರು. 115 ಕ್ಕೂ ಹೆಚ್ಚು ಪುಸ್ತಕಗಳನ್ನು ಸಹಸ್ರಾರು ವಿಚಾರ ಪ್ರಚೋದಕ ಭಾಷಣಗಳನ್ನು ನೂರಾರು ಸಂಶೋಧನಾ ಪ್ರಬಂಧಗಳನ್ನು ಹಾಗೂ ಉತ್ತಮ ಸಂಶೋಧನಾ ವಿದ್ಯಾರ್ಥಿ ಸಮೂಹವನ್ನು ನಾಡಿಗೆ ಅರ್ಪಿಸಿದ ಡಾ. ಕಲಬುರ್ಗಿಯವರು ಧರ್ಮಾಂಧತೆ ಅಂಧಶ್ರದ್ಧೆ ಸಹಿಸುತ್ತಿರಲಿಲ್ಲ. ನಾಡಿನಾದ್ಯಂತ ಜಾಗೃತಿಗೆ ಮುಂದಾದ ಇವರು ಲಿಂಗಾಯತ ಸ್ವತಂತ್ರ ಧರ್ಮ ಎಂಬುದನ್ನು ಆಧಾರ ಸಹಿತ ಪ್ರತಿಪಾದಿಸಿದ್ದರು. ಸರ್ವಸಮಾನತೆ ಬಯಸುವವರಾಗಿದ್ದರಿಂದಲೇ ಅವರ ಹತ್ಯೆಯಾಯಿತು. ಆದರೆ ವೈಚಾರಿಕ ಪರಂಪರೆಯನ್ನು ಹತ್ಯೆ ಮಾಡಿ ನಾಪತ್ತೆಯಾದ ಹಂತಕರನ್ನು ಬಂಧಿಸುವಲ್ಲಿ ವಿಳಂಬ ಧೋರಣೆ ವಿದ್ವತ್ ವಲಯಕ್ಕೆ ಆಘಾತಕಾರಿ ಎಂದು ಡಾ. ಕಲಬುರ್ಗಿ ಯವರ ವಿದ್ಯಾರ್ಥಿ ಪ್ರೊ. ಶ್ರೀಧರ ನಾಯಕರು ಹತ್ಯೆಯನ್ನು ಖಂಡಿಸಿದರು. ಅವರೊಂದಿಗೆ ತನ್ನ ವಿದ್ಯಾರ್ಥಿ ಜೀವನದ ಮೆಲುಕು ಹಾಕಿದರು.

ಪ್ರೊ. ಮನೋಜೆಯವರು ಮಾತನಾಡಿ ನಿರ್ಮಲ ಮನಸ್ಸೇ ಮಡಿ, ಉಳಿದಿದ್ದೆಲ್ಲ ಕಾಲ್ಮಡಿ ಎಂದು ಹೇಳಿದ ಕಲಬುರಗಿ ಯವರ ಬದುಕು ಬರಹ ಜೀವನ ಒಂದೇ ತೆರನಾಗಿತ್ತು. ಶ್ರಮಿಕರ ದೇಶ ಶ್ರಮದಲ್ಲಿಯೇ ಪಾವಿತ್ರ್ಯ ಕಂಡ ದೇಶದಲ್ಲಿ ಸತ್ಯ ಹೇಳಿದವರು ಹತ್ಯೆಗೀಡಾಗುತ್ತಾರೆ. ಆದರೆ ಮನುಷ್ಯ ಧರ್ಮದ ಚಿಂತಕರಾದ ಇವರನ್ನು ಕೊಲೆ ಮಾಡಿದ್ದು ದೇಶಕ್ಕೇ ಆದ ಅಪಮಾನ. ತನಿಖೆಗೆ ನಿರ್ಲಕ್ಷ್ಯ ಬೇಡ ತಕ್ಷಣ ಕಾನೂನು ಕ್ರಮವಾಗಲಿ ಎಂದು ಆಗ್ರಹಿಸಿದರು.

ಬಿ.ಎಸ್.ಎನ್.ಎಲ್ ಕಾರ್ಮಿಕ ಸಂಘಟನೆಯ ಕಾರ್ಯದರ್ಶಿ ಎಂ.ಎಂ. ಹೆಗಡೆ ಮಾತನಾಡಿ ಸಾಹಿತ್ಯ ಸಂಪತ್ತನ್ನು ಮಾತ್ರ ಹೊಂದಿದ ಇವರ ಖಚಿತ ವೈಚಾರಿಕತೆ ಇಂದಿನ ಅಗತ್ಯ ಎಂದರು. ಪ್ರಗತಿಪರ ಸಾಹಿತ್ಯ ಸಂಘಟಕ ರಾಮಾ ನಾಯ್ಕ ಹಂತಕರ ಬಂಧಿಸುವಲ್ಲಿ ಸರ್ಕಾರ ಸೋತಿದೆ, ಆ ಹತ್ಯಾಕೋರರು ಬಲವಾದ ಮುಷ್ಠಿಯಲ್ಲಿ ರಕ್ಷಿಸಲ್ಪಡುತ್ತಿದ್ದಾರೆ. ದೇಶದಲ್ಲಿ ಭಯೋತ್ಪಾದನೆ ಎಂದರೆ ಬೇರೆಡೆಗೆ ಬೊಟ್ಟು ಮಾಡಿ ತೋರಬೇಕಿಲ್ಲ. ಭಾರತದ ಅಂತರಂಗದೊಳಗೆ ಧಾರ್ಮಿಕ ಭಯೋತ್ಪಾದಕ ಜನರು ಇದ್ದಾರೆ. ಅಂದರೆ ನಾವೇನು ಪುಕ್ಕಲರಾಗಿ ಹೆದರಿ ಕೂತು ಧರ್ಮಾಂಧರಿಗೆ ಸೋಲುವುದಿಲ್ಲ ಎಂದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಚಿಂತನ ರಂಗ ಅಧ್ಯಯನ ಕೇಂದ್ರದ ಅಧ್ಯಕ್ಷರಾದ ಕಿರಣ ಭಟ್. ಅಸಹಿಷ್ಣುತೆಯು ಸತ್ಯದ ಮೇಲೆರಗಿದೆ. ಪ್ರಶ್ನೆ ಮಾಡುವ ಮನೋಭಾವವನ್ನು ದೇಶದ್ರೋಹದ ವ್ಯಾಖ್ಯಾನದಡಿಯಲ್ಲಿ ತರಲಾಗುತ್ತಿರುವುದು ಪ್ರಜಾಪ್ರಭುತ್ವಕ್ಕೆ ಅಪಚಾರ ಮಾಡಿದಂತೆ. ಡಾ. ಕಲಬುರ್ಗಿಯವರು ಉದಾರವಾದಿ ಯೋಚನೆಯ ಕೊಂಡಿಯಾಗಿದ್ದರು ಎಂದು ಸ್ಮರಿಸಿದರು. ಸಿಐಟಿಯು ರಾಜ್ಯ ಕಾರ್ಯದರ್ಶಿ ಯಮುನಾ ಗಾಂವ್ಕರ್ ಮಾತನಾಡಿ ಸಾಹಿತ್ಯ ಮತ್ತು ಹೋರಾಟದ ದಾ-ರಿಯ ಸಂಗಾತಿಗಳು ಡಾ. ಎಂ.ಎಂ. ಕಲಬುರ್ಗಿ, ದಾಭೋಲ್ಕರ್, ಪನ್ಸಾರೆಯವರು. ಆದರೆ ಸಂಚುರೂಪಿಸಿ ಹತ್ಯೆ ಮಾಡಿದವರನ್ನು ಬಂಧಿಸುತ್ತಿಲ್ಲ ಯಾಕೆ ಉತ್ತರ ಕೊಡಿ ಎಂದು ಸೌಮ್ಯ ಪ್ರತಿಭಟನೆ ನಮ್ಮದು. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರ ಮೂಢನಂಬಿಕೆ ನಿಷೇಧ ಕಾನೂನು ಜಾರಿ ಮಾಡಲಿ ಎಂದರು.

ಭಾರತ ವಿದ್ಯಾರ್ಥಿ ಪೆಡರೇಷನ್ ಎಸ್.ಎಫ್.ಐ ಜಿಲ್ಲಾ ಸಂಚಾಲಕ ಗಣೇಶ್ ರಾಠೋಡ್ ಪ್ರಾಸ್ತಾವಿಕ ಮಾತನಾಡಿದರು. ವಿಮಲಾ ಪ್ರಭು ಸ್ವಾಗತಿಸಿದರು. ಸಿಐಟಿಯು ತಾ. ಕಾರ್ಯದರ್ಶಿ ಮಂಜುಳಾ ವಂದಿಸಿದರು. ದಲಿತ ಸಂಘಟನೆಯ ಮುಂದಾಳು ಶ್ಯಾಮ ಸುಂದರ, ಸಿಐಟಿಯು ಮುಖಂಡರಾದ ಗೀತಾ ರಾಯ್ಕರ್, ಶುಷ್ಮಾ ಗುರವ್, ಮಾಯಾ ಕಾಣೇಕರ್ ತಾರಾ ನಾಯ್ಕ ಜಯಶ್ರೀ ಉಪಸ್ಥಿತರಿದ್ದರು.

ಎಪಿಎಂಸಿ ಇ-ಪಾವತಿ ವ್ಯಾಪಾರಸ್ಥರ ಮುಷ್ಕರ : ನಿರುದ್ಯೋಗಿಗಳಾದ ಹಮಾಲಿ ಕಾರ್ಮಿಕರ ಪ್ರತಿಭಟನೆ

ಧಾರವಾಡ ಮತ್ತು ಗದಗ ಜಿಲ್ಲೆಯಲ್ಲೆಗಳ ಎಪಿಎಂಸಿಗಳಲ್ಲಿ ಪ್ರಾಯೋಗಿಕವಾಗಿ ಜಾರಿಮಾಡಿರುವ ಇ-ಪಾವತಿ ವಿರೋಧಿಸಿ ಹುಬ್ಬಳ್ಳಿ ಎಪಿಎಂಸಿ ವ್ಯಾಪಾರಸ್ಥರು ಕಳೆದ ಜುಲೈ 24 ರಿಂದ ಮುಷ್ಕರ ನಡೆಸುತ್ತಿದ್ದು ದಿನದ ಕೂಲಿಯನ್ನೆ ನಂಬಿಕೊಂಡು ಬದುಕುತ್ತಿರುವ ಶ್ರಮಜೀವಿ ಹಮಾಲಿ ಕಾರ್ಮಿಕರು ನಿರುದ್ಯೋಗಿಗಳಾಗಿದ್ದು ತಮ್ಮ ಕುಟುಂಬವನ್ನು ಸಲುಹುವುದು ಕಷ್ಟಕರವಾಗಿದ್ದು ತಮಗೆ ಉದ್ಯೋಗ ಕೊಡಬೇಕು ಇಲ್ಲವಾದರೇ ಜೀವನ ನಡೆಸಲು ಭತ್ಯೆ ಕೊಡಬೇಕೆಂದು ಒತ್ತಾಯಿಸಿ ಅಗಸ್ಟ್ 17ರಂದು ಹುಬ್ಬಳ್ಳಿ ಎಪಿಎಂಸಿ ಆಡಳಿತ ಕಚೇರಿ ಎದುರು ಬೃಹತ್ ಪ್ರತಿಭಟನೆ ನಡೆಸಿದರು.

ಇದಕ್ಕೂ ಪೂರ್ವದಲ್ಲಿ ಮಾರುಕಟ್ಟೆ ಪ್ರಾಂಗಣದಲ್ಲಿರುವ ಬಸವೇಶ್ವರ ಪುತ್ಥಳಿಯಿಂದ ಮೆರವಣಿಗೆ ನಡೆಸಿದ ಹಮಾಲಿ ಕಾರ್ಮಿಕರು ಎಪಿಎಂಸಿ ಅಧಿಕಾರಿಗಳಿಗೆ ಮನವಿ ನೀಡಿದರು. ನಂತರ ಸುತ್ತಮುತ್ತಲಿನ ಜನರಿಂದ ಸಂಗ್ರಹಿಸಿದ ದಿನಸಿ ಮತ್ತು ತರಕಾರಿಗಳಿಂದ ಎಪಿಎಂಸಿ ಕಚೇರಿ ಮುಂದೆ ಅಡಿಗೆ ಮಾಡಿ ಊಟ ಮಾಡಿದರು.

ಹಮಾಲಿ ಫೆಡರೇಶನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿ "ಇ-ಪಾವತಿ ರೈತರು, ವ್ಯಾಪಾರಸ್ಥರು ಮತ್ತು ಕಾರ್ಮಿಕರಿಗೆ ಅನುಕೂಲವಾಗುವಂತೆ ಮಾರ್ಪಾಟು ಮಾಡಿ ಜಾರಿಮಾಡಬೇಕು. ಇ-ಪಾವತಿಯ ಮೂಲವಾಗಿರುವ ಇ-ಮಾರ್ಕೆಟಿಂಗ್ ನೀತಿಯ ಮುಖಾಂತರ ದೇಶಿಯ ಮತ್ತು ವಿದೇಶಿ ಬೃಹತ್ ಕಂಪನಿಗಳಿಗೆ ಕೃಷಿ ಮಾರುಕಟ್ಟೆಯನ್ನು ಮುಕ್ತಗೊಳಿಸಿದ್ದರಿಂದ ಮುಂದೆ ಸಣ್ಣ ವ್ಯಾಪಾರಸ್ಥರು, ರೈತರು ಮತ್ತು ಕಾರ್ಮಿಕರು ಸಂಕಷ್ಟಕ್ಕೀಡಾಗಲಿದ್ದಾರೆ. ಈ ಹಿಂದೆ ಕಾನೂನು ತಿದ್ದುಪಡಿ ಮಾಡುವಾಗ ಬಾಧಿತ ವಿಭಾಗಗಳ ಮಧ್ಯ ವ್ಯಾಪಕ ಚರ್ಚೆ ಮಾಡದೇ ಒತ್ತಾಯ ಪೂರ್ವಕವಾಗಿ ಈ ನೀತಿಯನ್ನು ಜಾರಿ ಮಾಡಲಾಗುತ್ತಿದೆ. ಈ ನೀತಿಯನ್ನು ಎಲ್ಲರೂ ಒಟ್ಟಾಗಿ ಹಿಮ್ಮೆಟ್ಟಿಸಬೇಕು ಎಂದರಲ್ಲದೇ ಮುಷ್ಕರದಿಂದ ದಿನದ ಕೂಲಿಯನ್ನೇ ನಂಬಿ ಬದುಕುತ್ತಿರುವ ಹಮಾಲಿ ಕಾರ್ಮಿಕರಿಗೆ ಜೀವನ ನಡೆಸಲು ಭತ್ಯೆ ನೀಡಬೇಕು ಮತ್ತು ರೈತರು, ಕಾರ್ಮಿಕರು ಮತ್ತು ವ್ಯಾಪಾರಸ್ಥರೊಂದಿಗೆ ಚರ್ಚೆ ನಡೆಸಿ ಸಮಸ್ಯೆಗೆ ಕೂಡಲೇ ಪರಿಹಾರ ಕಂಡುಕೊಳ್ಳಲು ಸರಕಾರ ಮುಂದಾಗಬೇಕೆಂದು ಒತ್ತಾಯಿಸಿದರು.

ಹಮಾಲಿ ಕಾರ್ಮಿಕ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಗುರುಸಿದ್ದಪ್ಪ ಅಂಬಿಗೇರ ಮಾತನಾಡಿ ಸರಕಾರ ಮತ್ತು ಎಪಿಎಂಸಿ ಆಡಳಿತ ನಮ್ಮ ಬೇಡಿಕೆಗೆ ಸ್ಪಂದಿಸದಿದ್ದರೇ ಇಡೀ ಮಾರುಕಟ್ಟೆ ಬಂದ್ ಮಾಡಿ ತೀವ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಹೋರಾಟವನ್ನು ಬೆಂಬಲಿಸಿ ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಬಿ.ಎಸ್. ಸೊಪ್ಪಿನ ಈ ನೀತಿ ರೈತರಿಗೆ ಅನುಕೂಲವಾಗಲಿದೆ ಎಂದು ಬಿಂಬಿಸಲಾಗುತ್ತಿದೆ. ಇ-ಪಾವತಿಯಲ್ಲಿ ಅನೇಕ ತಾಂತ್ರಿಕ ಸಮಸ್ಯೆಗಳು ಇವೆ ಅವುಗಳನ್ನು ಸರಳೀಕರಿಸಬೇಕು. ಆದರೇ ಇ-ಮಾರುಕಟ್ಟೆ ನೀತಿ ರೈತ ವಿರೋಧಿಯೂ ಆಗಿದೆ. ದೇಶದ ಅತೀ ದೊಡ್ಡ ಕೃಷಿ ಮಾರುಕಟ್ಟೆಯ ಲಾಭವನ್ನು ಕಬಳಿಸಲು ಸರಕಾರ ದೊಡ್ಡ ಕಂಪನಿಗಳಿಗೆ ಅವಕಾಶಮಾಡಿಕೊಡುವ ಹುನ್ನಾರ ಅಡಗಿದೆ ಎಂದರು.


ಹಮಾಲಿ ಕಾರ್ಮಿಕ ಮುಖಂಡರಾದ ದುರಗಪ್ಪ ಚಿಕ್ಕತುಂಬಳ, ಸಂಘದ ಅಧ್ಯಕ್ಷ ಬಸವಣ್ಣೆಪ್ಪ ನೀರಲಗಿ ಮಾತನಾಡಿದರು. ಕಾರ್ಯದರ್ಶಿ ಕರಿಯಪ್ಪ ಧಳವಾಯಿ, ಯಲ್ಲಪ್ಪ ಕುಶಮ್ಮನವರ, ಮುಡಿಯಪ್ಪ ಸಕ್ರಣ್ಣವರ, ನಾಗಮ್ಮ ಹಿರೇಮನಿ, ಅಜ್ಜೀರ ಸೊರಟೂರ, ಹನಮಂತ ಅಂಬಿಗೇರ, ಸರ್ದಾರಸಾಬ ಹಾಶೀಮನವರ, ಶಿವಬಸಪ್ಪ ಡೊಂಕನವರ, ಯಲ್ಲಮ್ಮ ಬಂಡಿವಡ್ಡರ, ತಿಮ್ಮವ್ವ ಬಂಡಿವಡ್ಡರ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಪಾವಗಡದಲ್ಲಿ ದಲಿತ ಯುವಕರ ಮೇಲೆ ಹಲ್ಲೆ

ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಮಂಗಳವಾಡ ಗ್ರಾಮದಲ್ಲಿ ಬರ್ಹಿದೆಸೆಗೆಂದು ತೆರಳಿದ್ದ ಐದು ಜನ ದಲಿತ ಯುವಕರ ಮೇಲೆ ಸವರ್ಣಿಯ ಯುವಕರು ಗುಂಪು ಕಟ್ಟಿಕೊಂಡು ಹಲ್ಲೆ ನಡೆಸಿದ್ದು ಅದರಲ್ಲಿ ಕುಮಾರ್ ಎಂಬ ಯುವಕನಿಗೆ ತೀವ್ರತರದ ಹಲ್ಲೆ ನಡೆದಿದ್ದು ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದಿರುತ್ತಾರೆ.

ಈ ಸಂಬಂಧ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದಿನಾಂಕ : 20-8-2017ರಂದು ಹಲ್ಲೆ ನಡೆಸಿರುವವರ ಮೇಲೆ ಕೇಸು ದಾಖಲಾಗಿದ್ದರೂ ಸಹ ಇದುವರೆಗೂ ಆ ಆರೋಪಿಗಳನ್ನು ಬಂಧಿಸಿಲ್ಲ. ದೂರ ಕೊಟ್ಟವರ ಮೇಲೆ ಕೇಸು ವಾಪಸು ಪಡೆಯುವಂತೆ ಒತ್ತಡ ಹೇರುತ್ತಿದ್ದು ಇದರಿಂದಾಗಿ ಹಲ್ಲೆಗೊಳಗಾಗಿರುವ ದಲಿತ ಕುಟುಂಬಗಳು ಭಯಭೀತರಾಗಿದ್ದು ಇವರಿಗೆ ಸೂಕ್ತ ರಕ್ಷಣೆಯನ್ನು ಒದಗಿಸಬೇಕಾಗಿದೆ ಹಾಗೂ ತಪ್ಪಿತಸ್ಥರನ್ನು ಕೂಡಲೇ ಬಂದಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಜನಪರ ಸಂಘಟನೆಗಳ ಒಕ್ಕೂಟದ ನಿಯೋಗ ಜಿಲ್ಲಾಧಿಕಾರಿಗಳಿಗೆ ಮನವಿ ಸಲಲಿಸಿತು.

ನಿಯೋಗದಲ್ಲಿ ಪ್ರಗತಿಪರ ಚಿಂತಕ ಪ್ರೊ. ಕೆ.ದೊರೈರಾಜ್, ದಲಿತ ಸಂಘಟನೆಯ ಜಿಲ್ಲಾ ಮುಖಂಡ ಕುಂದೂರು ತಿಮ್ಮಯ್ಯ, ಸಿಪಿಐ(ಎಂ) ಜಿಲ್ಲಾಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ, ಡಿ.ವೈ.ಎಫ್.ಐನ ರಾಘವೇಂದ್ರ, ದರ್ಶನ್.ಜಿ, ಗಣೇಶ್ ಇದ್ದರು.



ಕಾ. ದೇವಿ ಅವರಿಗೆ ಸಮಾಜಸೇವಾ ಪ್ರಶಸ್ತಿ

ಜನವಾದಿ ಮಹಿಳಾ ಸಂಘಟನೆ ಮತ್ತು ಸಿಪಿಐ(ಎಂ) ನಾಯಕಿ ಹೋರಾಟಗಾರ್ತಿ ಕಾ. ದೇವಿ ಅವರಿಗೆ ಜನದನಿ ಸಾಂಸ್ಕೃತಿಕ ಟ್ರಸ್ಟ್ ಸ್ಥಾಪಿಸಿರುವ ದೇವಮ್ಮ ಮತ್ತು ಇಂಡುವಾಳು ಎಚ್. ಹೊನ್ನಯ್ಯ ಸಮಾಜಸೇವಾ ಪ್ರಶಸ್ತಿಯನ್ನು ಅಗಸ್ಟ್ 31ರಂದು ಮಂಡ್ಯ ರೈತ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾ. ದೇವಿ ಅವರಿಗೆ ಜನಶಕ್ತಿಯ ಅಭಿನಂದನೆಗಳು

ಲಿಂಗಾಯತ ಸ್ವತಂತ್ರ ಧರ್ಮ : ಚರ್ಚೆ

ಜನಶಕ್ತಿಯ ಸಂಚಿಕೆ 33 (ಆಗಸ್ಟ್ 7–13, 2017) ಸಂಚಿಕೆಯಲ್ಲಿ ಅತಿಥಿ ಅಂಕಣದಲ್ಲಿ ಪ್ರೊ. ರಾಜೇಂದ್ರ ಚೆನ್ನಿ ಅವರು ಬರೆದ "ಲಿಂಗಾಯತ ಸ್ವತಂತ್ರ ಧರ್ಮ ವಚನಕಾರರ ಮೌಲ್ಯಗಳ ಪರವಿರುತ್ತಾ?" ಎಂಬ ಲೇಖನಕ್ಕೆ ಮತ್ತು ಈ ವಿಷಯದ ಚರ್ಚೆಯನ್ನು ಮುಂದೊಯ್ಯುವ ಎರಡು ಬರಹಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಈ ವಿಷಯದ ಬಗ್ಗೆ ಪ್ರತಿಕ್ರಿಯೆ ಮತ್ತು ಚರ್ಚೆಗೆ ಇನ್ನಷ್ಟು ಬರಹಗಳನ್ನು ಈ ಮೂಲಕ ಆಹ್ವಾನಿಸುತ್ತಿದ್ದೇವೆ.

ಜನ ಏನಂತಾರೆ? – ಲಿಂಗರಾಜು ಮಳವಳ್ಳಿ

'ಲಿಂಗಾಯತ ಸ್ವತಂತ್ರ ಧರ್ಮ' ಎಂಬ ಕೂಗು ಕೆಲ ಮಠಾಧೀಶರ ಅಥವಾ ಕೆಲ ರಾಜಕಾರಣಿಗಳ ಗಂಟಲು ಹರಿತದಿಂದಾಗಿ ಬಂದಿದೆಯೇ ವಿನಃ ಜನರಿಂದ ಬರುತ್ತಿರುವ ಕೂಗಲ್ಲ ಎಂಬ ತೇಪೆಯ ವಾದವೂ ಇದೆ. ಹಾಗಿದ್ದರೆ ವಾಸ್ತವವೇನು? ಎಂಬ ಪ್ರಶ್ನೆಗೆ ಈಚೆಗೆ ನಡೆದ ಒಂದೆರಡು ನಿದರ್ಶನಗಳು ಉತ್ತರವಾಗಬಲ್ಲವು.

ಹನ್ನೆರಡನೇ ಶತಮಾನ ಕರುನಾಡು ಕಂಡ ಸುವರ್ಣಯುಗ. ಅಂದು ಮನುಷ್ಯ ವಿರೋಧಿ ಹಿಂದೂ ಆಚರಣೆಗಳ ವಿರುದ್ಧ ಕ್ರಾಂತಿಕಿಡಿ ಹೊತ್ತಿಸಿದ 'ಬಸವತತ್ವ' ಕಾಲಾನಂತರದಲ್ಲಿ ವೈದಿಕದ ದಾಳಿಗೆ ಸಿಲುಕಿ 'ಬಸವ' ದೇವನಾಗಿ, ವಿರೂಪಗೊಂಡ 'ತತ್ವ' ಜಾತಿಯಾಗಿ ಪಲ್ಲಟಗೊಂಡಿದ್ದು ಈಗ ಇತಿಹಾಸ. ರಾಜ್ಯದಲ್ಲೀಗ ಲಿಂಗಾಯತ ಧರ್ಮ ಹಿಂದೂ ಧರ್ಮದ ಭಾಗವಲ್ಲ; ಅದೊಂದು ವೈಚಾರಿಕತೆ, ಮಾನವೀಯತೆ ಹಾಗು ಶ್ರಮಸಂಸ್ಕೃತಿ ಸಿದ್ಧಾಂತದ ಮೇಲೆ ನಿಂತ ಒಂದು ಸ್ವತಂತ್ರ ಧರ್ಮ ಎಂಬ ಚರ್ಚೆ ಸ್ಫೋಟಗೊಂಡು ಚಳವಳಿ ಸ್ವರೂಪ ಪಡೆಯುತ್ತಿರುವುದು ಸ್ಪಟಿಕದಷ್ಟೇ ಸತ್ಯ. ಬೆಳಗಾವಿಯಲ್ಲಿ ಸೇರಿದ ಜನಸ್ತೋಮವೇ ಇದಕ್ಕೆ ಸಾಕ್ಷಿ. ಸಂವಿಧಾನಕ್ಕೆ ತಿದ್ದಪಡಿ ತಂದು ಬಸವಧರ್ಮವನ್ನು ಸ್ವತಂತ್ರ ಧರ್ಮವನ್ನಾಗಿ ಘೋಷಿಸಬೇಕೆಂಬ ಕೂಗು ಕೇಳಿ ಬರುತ್ತಿದೆ. ಈ ಕೂಗು ಕೆಲ ಮಠಾಧೀಶರ ಅಥವಾ ಕೆಲ ರಾಜಕಾರಣಿಗಳ ಗಂಟಲು ಹರಿತದಿಂದಾಗಿ ಬಂದಿದೆಯೇ ವಿನಃ ಜನರಿಂದ ಬರುತ್ತಿರುವ ಕೂಗಲ್ಲ ಎಂಬ ತೇಪೆಯ ವಾದವೂ ಇದೆ. ಹಾಗಿದ್ದರೆ ವಾಸ್ತವವೇನು? ಎಂಬ ಪ್ರಶ್ನೆಗೆ ಈಚೆಗೆ ನಡೆದ ಒಂದೆ–ರಡು ನಿದರ್ಶನಗಳು ಉತ್ತರವಾಗಬಲ್ಲವು.

ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ಅರೆಕೆರೆ ಎಂಬಲ್ಲಿ 'ಅಖಿಲ ಭಾರತ ವೀರಶೈವ ಮಹಾಸಭಾ' ಬೊಮ್ಮನಹಳ್ಳಿ ವಿಧಾನಸಭಾ ಘಟಕ ಕಳೆದ ಎಂಟು ವರ್ಷಗಳಿಂದ 'ಆದಿ ಜಗದ್ಗುರು ರೇಣುಕಾರ್ಯರ ಯುಗಮಾನೋತ್ಸವ ಹಾಗು ಬಸವಜಯಂತಿ' ಕಾರ್ಯಕ್ರಮವನ್ನು ಆಯೋಜಿಸುತ್ತಾ ಬರುತ್ತಿದೆ. ಮಹಾಸಭಾದ ಪದಾಧಿಕಾರಿಗಳ ಪ್ರಕಾರ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು ಐವತ್ತು ಸಾವಿರಕ್ಕಿಂತಲೂ ಹೆಚ್ಚು ವೀರಶೈವ ಜನಸಂಖ್ಯೆ ಇದೆ. ಹೆಚ್ಚು ಕಡಿಮೆ ಇರಲೂಬಹುದು. ಪ್ರತಿವರ್ಷ ಈ ಕಾರ್ಯಕ್ರಮದಲ್ಲಿ ಎರಡರಿಂದ ಮೂರು ಸಾವಿರ ಜನ ಸೇರುತ್ತಿದ್ದ ದಾಖಲೆಯೂ ಇವರ ಬಳಿ ಇದೆ.

ಇತ್ತೀಚೆಗೆ 8ನೇ ವರ್ಷದ ಕಾರ್ಯಕ್ರಮ ಆಯೋಜಿಸಲಾಗಿತ್ತು. ರಾಜ್ಯದ ಪ್ರಮುಖ ಹಾಗು ಪ್ರಭಾವಿ ಮಠಗಳ ಸುತ್ತೂರು ಶ್ರೀ, ಮರಳೆಗವಿ ಮಠ ಹಾಗು ವಿಭೂತಿಪುರ ಮಠದ ಶ್ರೀಗಳು ಭಾಗವಹಿಸಿದ್ದರು. ಆಹ್ವಾನಪತ್ರಿಕೆಯಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ಕೇಂದ್ರ ಸಚಿವ ಅನಂತಕುಮಾರ್, ಮಾಜಿ ಸಚಿವ ಹಾಗು ವೀರಶೈವ ಸಮಾಜದ ಮುಖಂಡ ವಿ.ಸೋಮಣ್ಣ, ನಿವೃತ್ತ ಪೊಲೀಸ್ ಅಧಿಕಾರಿ ಹಾಗು ವಿಶ್ವ ವೀರಶೈವ ಲಿಂಗಾಯತ ಒಕ್ಕೂಟದ ಅಧ್ಯಕ್ಷ ಜ್ಯೋತಿಪ್ರಕಾಶ್ ಮಿರ್ಜಿ, ಇದೇ ಕ್ಷೇತ್ರ ಮತ್ತು ಪಕ್ಕದ ಕ್ಷೇತ್ರದ ಶಾಸಕರಾದ ಸತೀಶ್‌ರೆಡ್ಡಿ ಹಾಗು ಎಂ.ಕೃಷ್ಣಪ್ಪ ಸೇರಿದಂತೆ ಮೂರು ಜನ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು ಹೀಗೆ ಘಟನಾಘಟಿಗಳ ಹೆಸರುಗಳಿದ್ದವು. ಯಡಿಯೂರಪ್ಪ ಹಾಗು ಅನಂತಕುಮಾರ್ ಹೊರತುಪಡಿಸಿ ಉಳಿದೆಲ್ಲರೂ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇವರೆಲ್ಲ ಇದ್ದಾಗಿಯೂ ಅಲ್ಲಿ ನೆರೆದಿದ್ದ ಜನರ ಸಂಖ್ಯೆ 250 ಮೀರಿರಲಿಲ್ಲ ಎನ್ನುವುದು ವಾಸ್ತವ.

ಈ ಬಗ್ಗೆ ಸಂಘದ ಪದಾಧಿಕಾರಿಯೊಬ್ಬರನ್ನು ಮಾತನಾಡಿಸಿದಾಗ ಅವರು ಹೇಳಿದ್ದು 'ಪ್ರತಿವರ್ಷ ಎರಡರಿಂದ ಮೂರು ಸಾವಿರ ಜನ ಸೇರುತ್ತಿದುದು ಹೌದು. ಆದರೆ ಈ ಬಾರಿ ಸಂಖ್ಯೆ ತೀರ ಕಡಿಮೆ ಆಯ್ತು. ಲಿಂಗಾಯತ–ವೀರಶೈವ ಒಡಕೇ ಇದಕ್ಕೆ ಮೂಲ ಕಾರಣ' ಎನ್ನುತ್ತಾರೆ. ಹಾಗೆ ಅವರು ಮುಂದುವರಿದು ಮೊದಲಿಗೆ 'ನಮ್ಮ ಸಮಾಜ'ದ ಜನರನ್ನು ಸಭೆಗೆ ಆಮಂತ್ರಿಸುವುದು ಹೇಗೆಂಬ ಗೊಂದಲ ಮೂಡಿತು. ಅಂದರೆ ವೀರಶೈವರೋ ಅಥವಾ ಲಿಂಗಾಯತರೋ ಎಂದು ಕಂಡು ಹಿಡಿಯುವುದು ಹೇಗೆಂಬ ಚಿಂತೆ ನಮ್ಮನ್ನು ಕಾಡಿತು. ಈ ಬಗ್ಗೆ ಸಭೆಯಲ್ಲಿ ಸುದೀರ್ಘ ಚರ್ಚೆಯೂ ನಡೆಯಿತು. ಕೊನೆಗೊಂದು ಪರಿಹಾರ ಸೂತ್ರ ಕಂಡುಕೊಂಡು ಅದರಂತೆ ನಾವೇ ಮುಂದಾಗಿ "ನೀವು ಲಿಂಗಾಯತರೋ ಅಥವಾ ವೀರಶೈವರೋ" ಎಂದು ಪ್ರಶ್ನಿಸಿದೆವು. ಆದರೆ ಬಹುತೇಕರು 'ಅದೆಲ್ಲಾ ಯಾಕೆ?, ಕಾರ್ಯಕ್ರಮಕ್ಕೆ ಕರೀತ್ತಿದ್ದೀರಿ, ಬರ್ತೀವಿ' ಎಂದಷ್ಟೇ ಹೇಳಿ ಗುಟ್ಟು ಬಿಟ್ಟುಕೊಡಲಿಲ್ಲ, ಈಗ ನೋಡಿ ಸುತ್ತೂರು ಸ್ವಾಮಿಗಳು ಜನರಿಗಾಗಿ ಕಾಯುವ ಸ್ಥಿತಿ ಬಂತು' ಎಂದು ಬೇಸರಿಸಿದರು. ಇದಾದ ಮೂರು ದಿನಗಳ ನಂತರ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ವೀರಶೈವ ಸಮಾಜದ ಸಮಾವೇಶ ನಡೆಯಿತು. ಇಲ್ಲಿಗೆ ಪಂಚಪೀಠದ ರಂಭಾಪುರಿ ಶ್ರೀಗಳು ಸಾನಿಧ್ಯ ವಹಿಸಿದ್ದರೂ ಇಲ್ಲಿಯೂ ಜನರ ಸಂಖ್ಯೆ 250 ಮುಟ್ಟಲಿಲ್ಲ.


ಅಂದರೆ ಲಿಂಗಾಯತ–ವೀರಶೈವ ವಿಭಜನೆಯ ಚರ್ಚೆ ಕೇವಲ ಮೇಲ್ಪದರದ ಒಣ ಚರ್ಚೆಯಾಗುಳಿಯದೇ ವಾಸ್ತವದಲ್ಲಿ ಇಬ್ಭಾಗ ಆಗಿರುವುದನ್ನು ಅಲ್ಲಿ ಖಾಲಿ ಇದ್ದ ಖುರ್ಚಿಗಳೇ ಹೇಳುತ್ತಿದ್ದವು. ಹಾಗೆಯೇ ಸಮುದಾಯದ ಬಹುಸಂಖ್ಯಾತ ಜನ ವೀರಶೈವಕ್ಕೆ ವಿರುದ್ಧವಾಗಿರುವುದೂ ಇಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಜತೆಗೆ ಸಂಘಟಿತ ಪ್ರಯತ್ನ ಎಂಬುದು ಒತ್ತಟ್ಟಿಗಿದ್ದರೂ, ಬೆಳಗಾವಿಯಲ್ಲಿ ಸಂಘಟಿಸಲಾದ ಸಮಾವೇಶದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಜನ ಭಾಗವಹಿಸಿರುವುದು ಕಡ್ಡಿ ಮುರಿದಂತಿದೆ.

ಎಡಪಂಥೀಯರು ಲಿಂಗಾಯತ ಸ್ವತಂತ್ರ ಧರ್ಮ ಎಂಬುದಕ್ಕೆ ಒತ್ತಾಸೆಯಾಗಿ ನಿಲ್ಲಬೇಕು

(ಒಂದು ಪ್ರತಿಕ್ರಿಯೆ)

ಸ್ವತಂತ್ರ ಧರ್ಮವಾಗಿ ಲಿಂಗಾಯತವು ವಚನಕಾರರ ಮೌಲ್ಯಗಳ ಪರವಿರುತ್ತಾ? ಲೇಖನದಲ್ಲಿ ಡಾ. ರಾಜೇಂದ್ರ ಚೆನ್ನಿ ಅವರು ಕೆಲವು ಮೂಲಭೂತ ಪ್ರಶ್ನೆಗಳನ್ನು ತಮ್ಮ ಸ್ವಂತ ಅನುಭವದ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಲಿಂಗಾಯತವು ಇಂದಿಗೂ ತನ್ನೆಲ್ಲ ಮಿತಿಗಳಲ್ಲಿ ವಚನ ಮೌಲ್ಯಗಳನ್ನು ಬದುಕುತ್ತಿದೆ. ಸಮಸ್ಯೆಯಿರುವುದು ವೀರಶೈವದಲ್ಲಿ ಮತ್ತು ಅದ–ಕ್ಕೆ ತಲೆಬಾಗಿರುವ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ಎಂಬ ಸಂಸ್ಥೆಯಲ್ಲಿ. ಸರಳವಾದ ಸಂಗತಿಯೆಂದರೆ ವೀರಶೈವ ಮತ್ತು ಲಿಂಗಾಯತ ಎರಡೂ ಒಂದೆ ಎಂದು ಒಪ್ಪಿಕೊಂಡರೆ ಆಗ ಅದಕ್ಕೆ ಸ್ವತಂತ್ರ ಧರ್ಮದ ಸ್ಥಾನಮಾನ ದೊರೆ–ಯುತ್ತದೆಯೋ ಇಲ್ಲವೋ ಅನ್ನುವುದಕ್ಕಿಂತ ಅದನ್ನು ಮಂಡಿಸಲು ಸಾಧ್ಯವೆ ಎಂಬುದನ್ನು ಯೋಚಿಸಬೇಕು. ಸ್ವತಂತ್ರ ಧರ್ಮದ ಸ್ಥಾನವನ್ನು ತಪ್ಪಿಸಬೇಕು ಎಂಬುದೇ ಮಹಾಸಭೆಯ ಘನ ಉದ್ದೇಶವಾಗಿದೆ. ಸನಾತನ ಧರ್ಮವೆಂದು ಹೇಳಿಕೊಳ್ಳುತ್ತಿರುವ ವೀರಶೈವದ ಜೊತೆಗೂಡಿದರೆ ಸ್ವತಂತ್ರ ಧರ್ಮದ ಸ್ಥಾನವನ್ನು ಹೇಗೆ ಒತ್ತಾಯಿಸುತ್ತೀರಿ? ಇದು ಸಾಧ್ಯವಿಲ್ಲ. ಇಂದು ನಾವು ಯಾವುದನ್ನು ಎಡಪಂಥೀಯ ಚಿಂತನೆ ಎಂದು ಕರೆಯುತ್ತಿದ್ದೇವೆಯೋ ಅದರ ಎಳೆಗಳನ್ನು ಲಿಂಗಾತಯತದಲ್ಲಿ ಕಾಣಬಹುದು. ಆದ್ದರಿಂದಲೇ ನಾಡಿನ ಎಡಪಂಥೀಯರು ಲಿಂಗಾಯತ ಸ್ವತಂತ್ರ ಧರ್ಮ ಎಂಬುದಕ್ಕೆ ಒತ್ತಾಸೆಯಾಗಿ ನಿಂತಿದ್ದಾರೆ ಮತ್ತು ನಿಲ್ಲಬೇಕು.

– ಪ್ರೊ. ಟಿ. ಆರ್. ಚಂದ್ರಶೇಖರ.



ಸೆಪ್ಟೆಂಬರ್ 5 ರಂದು ಬೆಂಗಳೂರಿನ ಟೌನ್ ಹಾಲಿನಲ್ಲಿ ನಡೆಯಲಿರುವ "ಸೌಹಾರ್ದತೆಗಾಗಿ ಕರ್ನಾಟಕ" ಸಮಾವೇಶದಲ್ಲಿ ಜನಶಕ್ತಿ ಪ್ರಕಾಶನದ ""ಸೌಹಾರ್ದ ಕರ್ನಾಟಕದತ್ತ" ಪುಸ್ತಕ ಬಿಡುಗಡೆಯಾಗಲಿದೆ. ಪುಸ್ತಕದ ಮುಖಪುಟ, ಹಿಂಪುಟದ ಒಂದು ಭಾಗ ಇಲ್ಲಿದೆ

ಪುಸ್ತಕದ ಬ್ಲರ್ಬಿನಿಂದ :

ಕಳೆದ ಎರಡು ದಶಕಗಳಲ್ಲಿ ನಮ್ಮ ನಾಡಿನ ಶಕ್ತಿಯಾದ ಬಹುತ್ವಕ್ಕೆ, ಸೌಹಾರ್ದಕ್ಕೆ ದೊಡ್ಡ ಸವಾಲಾಗಿ ಬೆಳೆದಿರುವ ಕೋಮುವಾದದ ಪ್ರಕ್ರಿಯೆ ಬಗ್ಗೆ ಇಂದು ಚರ್ಚಿಸುವ ತುರ್ತು ಅಗತ್ಯ ಇದೆ. ಕರ್ನಾಟಕದಲ್ಲಿ ಕೋಮುವಾದದ ಕುಪ್ರಸಿದ್ಧ ಪ್ರಯೋಗಶಾಲೆಯಾಗಿರುವ ಕರಾವಳಿ ಕರ್ನಾಟಕದ ಬಗ್ಗೆ ವಿವರವಾಗಿ ನೋಡುವುದು ಇದಕ್ಕೆ ಸಹಾಯಕವಾಗಬಹುದು. ಪ್ರಯೋಗಶಾಲೆಯ ಪ್ರಯೋಗಗಳನ್ನು ವಿಶ್ಲೇಷಿಸಿದರೆ ಅದರ ವ್ಯಾಪಕ ಅನ್ವಯದ ಪ್ರತಿರೋಧಕ್ಕೆ ಅನುವಾಗಬಹುದು ಎಂಬ ಆಶಯ ಇಲ್ಲಿದೆ. ಈ ಬಗ್ಗೆ ನಾಡಿನ ಚಿಂತಕರ, ಚಳುವಳಿಗಾರರ ಲೇಖನಗಳನ್ನು ಒಳಗೊಂಡಿರುವ 'ಸೌಹಾರ್ದ ಕರ್ನಾಟಕದತ್ತ' ನಿಮ್ಮ ಕೈಯಲ್ಲಿದೆ.

ಇಲ್ಲಿ ಮೂರು ಬಗೆಯ ಬರಹಗಳಿವೆ. ಈ ಪ್ರದೇಶದ ಸೌಹಾರ್ದ ಪರಂಪರೆಗಳು ಯಾವುವು? ಅವುಗಳ ಮಹತ್ವ, ಪ್ರಸ್ತುತತೆ ಏನು? ಅವು ಏಕೆ ಕೋಮುವಾದದ ಪ್ರಕ್ರಿಯೆಗೆ ಪ್ರತಿರೋಧ ಒಡ್ಡಲು ಸಾಧ್ಯವಾಗಲಿಲ್ಲ? ಕೋಮುವಾದದ ಪ್ರಕ್ರಿಯೆಯ ವಿರುದ್ಧ ಪ್ರತಿರೋಧ ಇವನ್ನು ಸೃಜನಶೀಲವಾಗಿ ಈಗಲೂ ಬಳಸಬಹುದೆ? ಎಂಬ ಪ್ರಶ್ನೆಗಳನ್ನು ಉತ್ತರಿಸಲು ಮೊದಲ ಬಗೆಯ ಬರಹಗಳು ಪ್ರಯತ್ನಿಸುತ್ತವೆ.

ಕೋಮುವಾದ ಕರಾವಳಿ ಕರ್ನಾಟಕದಲ್ಲಿ ಪ್ರಕಟಗೊಳ್ಳುತ್ತಿರುವ ಇಂದಿನ ಹಲವು ನಿರ್ದಿಷ್ಟ ರೂಪಗಳ ನಿರೂಪಣೆ ಮತ್ತು ವಿಶ್ಲೇಷಣೆಯಲ್ಲಿ ಎರಡನೇ ಬಗೆಯ ಬರಹಗಳು ತೊಡಗಿಸಿಕೊಂಡಿವೆ.

ಕರಾವಳಿ ಕರ್ನಾಟಕವೇ ಕೋಮುವಾದದ ಪ್ರಯೋಗಶಾಲೆ ಏಕಾಯಿತು ಎಂಬ ಸಂಕೀರ್ಣ ಪ್ರಶ್ನೆಯ ಹಲವು ಮಗ್ಗುಲುಗಳನ್ನು ಹಲವು ದೃಷ್ಟಿಕೋಣಗಳಿಂದ ಮೂರನೇ ಬಗೆಯ ಬರಹಗಳು ವಿಶ್ಲೇಷಿಸುತ್ತವೆ.

ಲೇಖಕರು

ವಾಸುದೇವ ಉಚ್ಚಿಲ, ಜ್ಯೋತಿ ಚೇಳ್ಯಾರು ಮತ್ತು ವಾಸುದೇವ ಬೆಳ್ಳೆ ಅವರ ಲೇಖನಗಳು ಪುಸ್ತಕದಲ್ಲಿರುವ ಮೊದಲ ಬಗೆಯ ಲೇಖನಗಳು.

ಮುನೀರ್ ಕಾಟಿಪಳ್ಳ, ನವೀನ್ ಸೂರಿಂಜೆ ಮತ್ತು ಇಸ್ಮತ್ ಫಜೀರ್ ಅವರ ಲೇಖನಗಳು ಎರಡನೇಯ ಬಗೆಯವು.

ಮೂರನೇಯ ಬಗೆಯ ಲೇಖನಗಳನ್ನು ಜಿ.ಎನ್. ನಾಗರಾಜ್, ಚಂದ್ರ ಪೂಜಾರಿ, ಕೆ ಫಣಿರಾಜ್, ರಾಜೇಂದ್ರ ಉಡುಪ, ಕೃಷ್ಣಪ್ಪ ಕೊಂಚಾಡಿ ಅವರುಗಳು ಬರೆದಿದ್ದಾರೆ.

ಇವು ಜನಶಕ್ತಿಯ 2016ರ ರಾಜ್ಯೋತ್ಸವ ವಿಶೇಷಾಂಕದಿಂದ ಆಯ್ದ ಲೇಖನಗಳು.





ಬಯಲಾಯಿತು 'ದೇವಮಾನವ'ರೊಂದಿಗೆ ಬಿಜೆಪಿ ಸಂಬಂಧ

ಬಿಜೆಪಿ ಸರಕಾರಗಳು ಮತ್ತು ಆರ್‌ಎಸ್‌ಎಸ್ ಸಂಘಟನೆಗಳ ಕೃಪಾಪೋಷಣೆಯೊಂದಿಗೆ ಈ ದೇವಮಾನವರು ಧಾರ್ಮಿಕತೆಯನ್ನು ವಾಣಿಜ್ಯ-ವ್ಯಾಪಾರ ಉದ್ದೇಶಗಳಿಗೆ ತುಂಬಾ ಲಾಭದಾಯಕವಾಗಿ ಮಿಳಿತಗೊಳಿಸುತ್ತಾರೆ. ಅವರಿಗೆ ಸಿಗುವ ರಾಜಕೀಯ ಬೆಂಬಲವೇ ಅವರು ತಾವು ಕಾನೂನಿಗೆ ಅತೀತರಾದವರು ಎಂಬಂತೆ ವರ್ತಿಸಲು ಕಾರಣವಾಗಿದೆ.



ಎಲ್ಲಾ ಹೊಲಸು ಸನ್ನಿವೇಶಗಳ ಕಾರ್ಮೋಡಗಳ ನಡುವೆಯೂ, ಗುರ್ಮಿತ್ ಸಿಂಗ್-ಡೇರಾ ಸಚ್ಚಾ ಸೌದಾ ಪ್ರಕರಣದಿಂದ ಒಂದು ಬೆಳ್ಳಿರೇಖೆ ಹೊಮ್ಮಿದೆ - ಬಿಜೆಪಿ ಮತ್ತು ಢೋಂಗಿ ಗುರುಗಳು ಹಾಗೂ ಬಾಬಾಗಳ ನಡುವಿನ ವಂಚಕ ಸಂಬಂಧವನ್ನು ಬಯಲುಗೊಳಿಸಿದ್ದೇ ಆ ಉತ್ತಮ ಬೆಳವಣಿಗೆಯಾಗಿದೆ.

*** ಪ್ರಕಾಶ್ ಕಾರಟ್**

ಅತ್ಯಾಚಾರ ಆರೋಪಗಳ ಮೇಲೆ 'ದೇವಮಾನವ' ಗುರ್ಮಿತ್ ಸಿಂಗ್‌ಗೆ ಶಿಕ್ಷೆಯಾಗಿರುವುದು ಮತ್ತು ಆತನ ಬೆಂಬಲಿಗರು ಪಂಚಕುಲಾ ಮತ್ತಿತರರ ಸ್ಥಳಗಳಲ್ಲಿ ನಡೆಸಿರುವ ಹಿಂಸಾಚಾರಗಳು ಬಿಜೆಪಿ ಮತ್ತು ಈ ರೀತಿಯ ಆಧ್ಯಾತ್ಮಿಕ ಮುಕ್ತಿ ಕೊಡಿಸುವುದಾಗಿ ಹೇಳುವ ಢೋಂಗಿ ಬಾಬಾಗಳ ನಡುವಿನ ರಾಜಕೀಯ ಸಖ್ಯವನ್ನು ಅನಾವರಣಗೊಳಿಸಿದೆ.

2014ರ ಅಕ್ಟೋಬರ್‌ನಲ್ಲಿ ನಡೆದ ಅಸೆಂಬ್ಲಿ ಚುನಾವಣೆಗಳಲ್ಲಿ ಬಿಜೆಪಿಗೆ ಮತ ನೀಡುವಂತೆ ಡೇರಾ ಸಚ್ಚಾ ಸೌದಾದ ಮುಖ್ಯಸ್ಥ ತನ್ನ ಬೆಂಬಲಿಗರಿಗೆ ಕರೆ ನೀಡಿದ್ದ. ಇದಕ್ಕೆ ತಕ್ಕಂತೆ ಋಣಿಯಾಗಿದ್ದ ಬಿಜೆಪಿ, ಗುರ್ಮಿತ್ ಸಿಂಗ್ ಮತ್ತು ಡೇರಾವನ್ನು ಹಾಡಿ ಹೊಗಳಿತ್ತು. 47 ಬಿಜೆಪಿ ಶಾಸಕರ ಪೈಕಿ 19 ಮಂದಿ ಆತನನ್ನು ಭೇಟಿಯಾಗಿ ಕೃತಜ್ಞತೆ ಸಲ್ಲಿಸಿದ್ದರು. ಹರ್ಯಾಣದ ಮನೋಹರಲಾಲ್ ಖಟ್ಟರ್ ಸಂಪುಟದ ಇಬ್ಬರು ಸಚಿವರು ತಮ್ಮ ಶಾಸಕರ ನಿಧಿಯಿಂದ ಡೇರಾದ ಚಟುವಟಿಕೆಗಳಿಗೆ ಅನುದಾನಗಳನ್ನು ನೀಡಿದ್ದರು. ಚುನಾವಣೆ ಪ್ರಚಾರದ ವೇಳೆ ಸ್ವತಃ ಪ್ರಧಾನಿ ನರೇಂದ್ರ ಮೋದಿಯವರೇ ಬಾಬಾನನ್ನು ಹೊಗಳಿದ್ದರು.

ಆದ್ದರಿಂದ ದೇವಮಾನವನ ಜೊತೆಗಿನ ಈ ಮೈತ್ರಿಯ ಫಲವಾಗಿಯೇ ನ್ಯಾಯಾಧೀಶರ ಮೇಲೆ ಒತ್ತಡ ಹೇರುವ ನಿಟ್ಟಿನಲ್ಲಿ ಡೇರಾದ ಸಾವಿರಾರು ಜನರು ಪಂಚಕುಲಾದಲ್ಲಿ ಬಂದು ಸೇರಲು ಖಟ್ಟರ್ ಸರಕಾರ ಮಾನಮರ್ಯಾದೆಯಿಲ್ಲದೆ ಅವಕಾಶ ಕಲ್ಪಿಸಿತು. ಜನರು ಜಮಾಯಿಸುವುದನ್ನು ತಡೆಯಲು ಯಾವುದೇ ಕ್ರಮ ಕೈಗೊಳ್ಳಲು ಅದು ನಿರಾಕರಿಸಿತು.

ಅದರ ಈ ಕರ್ತವ್ಯಲೋಪದ ಫಲವಾಗಿ 38 ಜನರ ಪ್ರಾಣ ಬಲಿಯಾಯಿತು. ಅಪಾರ ಪ್ರಮಾಣದಲ್ಲಿ ಸರಕಾರಿ ಮತ್ತು ಖಾಸಗಿ ಆಸ್ತಿಪಾಸ್ತಿ ನಾಶವಾಯಿತು. ರಾಜಿನಾಮೆ ನೀಡುವಂತೆ ಬಿಜೆಪಿ ಖಟ್ಟರ್‌ಗೆ ಸೂಚಿಸುವುದಿಲ್ಲ, ಯಾಕೆಂದರೆ ಆ ಪಕ್ಷ ಚುನಾವಣೆಗಳಲ್ಲಿ ಬಾಬಾನ ಬೆಂಬಲ ಯಾಚಿಸಿತ್ತು.

ಅದೇನೇ ಇರಲಿ. ಗುರ್ಮಿತ್ ಸಿಂಗ್ ಜೊತೆಗಿನ ಸಂಬಂಧ ಒಂದು ಪ್ರತ್ಯೇಕ ಪ್ರಕರಣವಲ್ಲ. ಈ ಮೊದಲು ಅನೇಕ ಸಂದರ್ಭಗಳಲ್ಲಿ ಕಾಂಗ್ರೆಸ್ ಪಕ್ಷ ಕೂಡ ಬಾಬಾ ಬೆಂಬಲ ಕೋರಿತ್ತು ಎನ್ನುವುದು ಸತ್ಯ. ಆದರೆ ಇಂಥ ಹೊಸ ಯುಗದ ಗುರು ಮತ್ತು ಬಾಬಾಗಳೊಂದಿಗೆ ಬಿಜೆಪಿ-ಆರ್‌ಎಸ್‌ಎಸ್ ಕೂಟ ಸಾವಯವ ಸಂಪರ್ಕ ಹೊಂದಿದೆ. ಬಿಜೆಪಿ-ಆರ್‌ಎಸ್‌ಎಸ್ ಜೊತೆ ಸಂಪರ್ಕವಿರುವ ಇಂಥ ಅನೇಕ ದೇವಮಾನವರು ಮತ್ತು ಅವರ ಸಾಮ್ರಾಜ್ಯಗಳನ್ನು ದೇಶದಾದ್ಯಂತ ಕಾಣಬಹುದು.

ಗುಜರಾತ್‌ನಲ್ಲಿ ಬಿಜೆಪಿ ಬೆಂಬಲದೊಂದಿಗೆ ಪ್ರವರ್ಧಮಾನಕ್ಕೆ ಬಂದ ಇನ್ನೊಬ್ಬ ಕುಖ್ಯಾತ ದೇವಮಾನವ ಅಸಾರಾಮ್ ಬಾಪು. ಆತ ಮೊದಲು ಗುಜರಾತ್‌ನಲ್ಲಿ ಆಶ್ರಮ ಸ್ಥಾಪಿಸಿ ನಂತರ ತನ್ನ ಜಾಲವನ್ನು ದೇಶದಾದ್ಯಂತ ವಿಸ್ತರಿಸಿದ. ಆತ ಬಿಜೆಪಿಯ ಕಟ್ಟಾ ಬೆಂಬಲಿಗನಾಗಿದ್ದು ಅತ್ಯಾಚಾರ ಆರೋಪದ ಮೇಲೆ ತನ್ನ ಮಗನೊಂದಿಗೆ 2013ರಿಂದ ಜೈಲಿನಲ್ಲಿದ್ದಾನೆ.

ಬಿಜೆಪಿ ಆಡಳಿತದಡಿಯಲ್ಲಿ ಬೆಳೆಯುತ್ತಿರುವ ಇತರ ಪ್ರಮುಖ 'ಬಾಬಾಗಳು' ಮತ್ತು 'ಗುರುಗಳು' ಎಂದರೆ ರಾಮದೇವ್ ಮತ್ತು ಶ್ರೀ ಶ್ರೀ ರವಿಶಂಕರ್. ಯೋಗ ಗುರು ಎಂದು ಹೇಳಿಕೊಳ್ಳುವ ರಾಮದೇವ್ ಒಬ್ಬ ದೊಡ್ಡ ವಾಣಿಜ್ಯೋದ್ಯಮಿಯಾಗಿದ್ದಾನೆ. ಬಿಜೆಪಿ ಆಡಳಿತದ ರಾಜ್ಯ ಸರಕಾರಗಳು ಮತ್ತು ಕೆಲವು ಕಾಂಗ್ರೆಸ್ ಸರಕಾರಗಳ ಕೃಪಾಶೀರ್ವಾದದಿಂದ ಆತ ತನ್ನ ಆಶ್ರಮಗಳು, ಯೋಗ ಸಂಸ್ಥೆಗಳು ಮತ್ತು ಪತಂಜಲಿ ಉತ್ಪನ್ನಗಳಿಗಾಗಿ ಉತ್ತರಾಖಂಡ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಜಾರ್ಖಂಡ್, ರಾಜಸ್ತಾನ ಮತ್ತು ಅಸ್ಸಾಂನಲ್ಲಿ ಸಾವಿರಾರು ಎಕರೆ ಜಮೀನನ್ನು ಬಾಚಿಕೊಂಡಿದ್ದಾನೆ. ಸೌಂದರ್ಯವರ್ಧಕಗಳು ಮತ್ತು ಇತರ ವಸ್ತುಗಳನ್ನು ತಯಾರಿಸುವ ಆತನ ಪತಂಜಲಿ ಸಂಸ್ಥೆಯ ವಹಿವಾಟು 2016-17ರಲ್ಲಿ 10,561 ಕೋಟಿ ರೂಪಾಯಿ ಆಗಿತ್ತು. ನರೇಂದ್ರ ಮೋದಿಯ ಕಟ್ಟಾ ಬೆಂಬಲಿಗನಾದ ರಾಮದೇವ್ ತನ್ನ ಸತ್ಸಂಗಗಳಲ್ಲಿ ಹಿಂದೂತ್ವ ಮೌಲ್ಯಗಳನ್ನು ಪ್ರತಿಪಾದಿಸುತ್ತಾನೆ.

ಈ ಗುರುಗಳು ಮತ್ತು ದೇವಮಾನವರು ಕಾನೂನಿನ ಯಾವುದೇ ಭಯವಿಲ್ಲದೆ ಹೇಗೆ ವರ್ತಿಸುತ್ತಾರೆ ಎನ್ನುವುದಕ್ಕೆ ರವಿಶಂಕರ್‌ರ ಆರ್ಟ್ ಆಫ್ ಲಿವಿಂಗ್ 2016ರ ಮಾರ್ಚ್‌ನಲ್ಲಿ ನಡೆಸಿದ ವಿಶ್ವ ಸಂಸ್ಕೃತಿ ಉತ್ಸವದ ವೇಳೆ ಅವರು ನಡೆದುಕೊಂಡ ರೀತಿಯೇ ಸಾಕ್ಷಿಯಾಗಿದೆ. ಯಮುನಾ ನದಿ ದಡದ ಮೇಲೆ ನಡೆದ ಈ ಉತ್ಸವ ಪ್ರವಾಹ ಪ್ರಸ್ತಭೂಮಿಯಲ್ಲಿ ಜೀವ ಪರಿಸರ ಮತ್ತು ಜೀವ ವೈವಿಧ್ಯ ವ್ಯವಸ್ಥೆಗೆ ಇನ್ನಿಲ್ಲದಂತೆ ಹಾನಿ ಮಾಡಿತ್ತು. ಆರ್ಟ್ ಆಫ್ ಲಿವಿಂಗ್ ಫೌಂಡೇಶನ್ ಮೇಲೆ ಹಸಿರು ಪೀಠ ಐದು ಕೋಟಿ ರೂಪಾಯಿ ದಂಡ ವಿಧಿಸಿದರೂ ಆ ನಿರ್ಧಾರವನ್ನು ರವಿಶಂಕರ್ ಪ್ರಶ್ನಿಸಿದ ಹಾಗೂ ದಂಡ ಏನಾದರೂ ವಿಧಿಸಬೇಕಿದ್ದರೆ ಅದು ಹಸಿರು ಪೀಠದ ವಿರುದ್ಧ ಎಂದು ದುರಹಂಕಾರದಿಂದ ಹೇಳಿದ. ಸ್ವತಃ ನರೇಂದ್ರ ಮೋದಿಯೇ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರಿಂದ ತನಗೆ ಸರಕಾರದ ಬೆಂಬಲ ಸಿಕ್ಕೇ ಸಿಗುತ್ತದೆ ಇದೆ ಎಂಬುದು ಆತನ ಲೆಕ್ಕಾಚಾರವಾಗಿತ್ತು.

ಇತ್ತ ದಕ್ಷಿಣದಲ್ಲಿ, ಇಶಾ ಫೌಂಡೇಶನ್‌ನ ಜಗ್ಗಿ ವಾಸುದೇವ ಕೊಯಮತ್ತೂರಿನಲ್ಲಿ ಸುತ್ತಮುತ್ತಲ ಹಳ್ಳಿಗಳ ಜಮೀನನ್ನು ಅತಿಕ್ರಮಿಸಿ ಆಶ್ರಮವನ್ನು ಸ್ಥಾಪಿಸಿದ್ದ. ಆ ಜಮೀನನ್ನು ವಾಪಸ್ ಪಡೆಯಲು ದೊಡ್ಡ ಹೋರಾಟವೇ ನಡೆಯಿತು. ಆದರೆ ಹೋರಾಟದ ಬೆನ್ನಲ್ಲೇ ಆದಿಯೋಗಿ ಶಿವನ ಬೃಹತ್ ಮೂರ್ತಿ ಉದ್ಘಾಟನೆಗೆಂದು ಪ್ರಧಾನಿ ಆ ಆಶ್ರಮಕ್ಕೆ ಭೇಟಿ ನೀಡಿದರು. ಈ ಸಾಲಿನಲ್ಲಿ ಬರುವ ಇನ್ನೊಂದು ಹೆಸರು ಮಾತಾ ಅಮೃತಾನಂದಮಯಿ. ಆಕೆ ದೊಡ್ಡ ಸಾಮ್ರಾಜ್ಯವನ್ನೇ ಕಟ್ಟಿಕೊಂಡಿದ್ದು ಆಕೆಗೆ ಆರ್‌ಎಸ್‌ಎಸ್‌ನ ಪೂರ್ಣ ಬೆಂಬಲವಿದೆ.


ಬಿಜೆಪಿ ಸರಕಾರಗಳು ಮತ್ತು ಆರ್‌ಎಸ್‌ಎಸ್ ಸಂಘಟನೆಗಳ ಕೃಪಾಪೋಷಣೆಯೊಂದಿಗೆ ಈ ದೇವಮಾನವರು ಧಾರ್ಮಿಕತೆಯನ್ನು ವಾಣಿಜ್ಯ-ವ್ಯಾಪಾರ ಉದ್ದೇಶಗಳಿಗೆ ತುಂಬಾ ಲಾಭದಾಯಕವಾಗಿ ಮಿಳಿತಗೊಳಿಸುತ್ತಾರೆ. ಅವರಿಗೆ ಸಿಗುವ ರಾಜಕೀಯ ಬೆಂಬಲವೇ ಅವರು ತಾವು ಕಾನೂನಿಗೆ ಅತೀತರಾದವರು ಎಂಬಂತೆ ವರ್ತಿಸಲು ಕಾರಣವಾಗಿದೆ.

ಎಲ್ಲಾ ಹೊಲಸು ಸನ್ನಿವೇಶಗಳ ಕಾರ್ಮೋಡಗಳ ನಡುವೆಯೂ, ಗುರ್ಮಿತ್ ಸಿಂಗ್-ಡೇರಾ ಸಚ್ಚಾ ಸೌದಾ ಪ್ರಕರಣದಿಂದ ಒಂದು ಬೆಳ್ಳಿರೇಖೆ ಹೊಮ್ಮಿದೆ - ಬಿಜೆಪಿ ಮತ್ತು ಢೋಂಗಿ ಗುರುಗಳು ಹಾಗೂ ಬಾಬಾಗಳ ನಡುವಿನ ವಂಚಕ ಸಂಬಂಧವನ್ನು ಬಯಲುಗೊಳಿಸಿದ್ದೇ ಆ ಉತ್ತಮ ಬೆಳವಣಿಗೆಯಾಗಿದೆ.

-(ಅನು: ವಿಶ್ವ)







ಹರಿಯಾಣ ಮುಖ್ಯಮಂತ್ರಿಯನ್ನು ವಜಾ ಮಾಡಬೇಕು : ಪೊಲಿಟ್ ಬ್ಯುರೊ

ಹರಿಯಾಣ ರಾಜ್ಯವನ್ನು ತೀವ್ರವಾಗಿ ಬಾಧಿಸಿರುವ, 35 ಜನರ ಸಾವು ಮತು 250 ಜನ ತೀವ್ರವಾಗಿ ಗಾಯಗೊಳ್ಳಲು ಕಾರಣವಾದ ಹಿಂಸಾಚಾರದ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯುರೊ ತೀವ್ರ ಆತಂಕ ವ್ಯಕ್ತಪಡಿಸಿದೆ.

ದೇರಾ ಸಾಚಾ ಸೌದಾ ಪಂಥದ ಅನುಯಾಯಿಗಳು ತಮ್ಮ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಮ್ ಸಿಂಗ್ ಅತ್ಯಾಚಾರದ ಪ್ರಕರಣದಲ್ಲಿ ಅಪರಾಧಿ ಎಂದು ಘೋಷಿತವಾದ ಕೂಡಲೇ ಉದ್ವೇಗದಿಂದ ನುಗ್ಗಾಟ ಮಾಡಿದ್ದರು. ಈ ತೀರ್ಪಿನ ನಿರೀಕ್ಷೆಯಲ್ಲಿ ಈ ಅನುಯಾಯಿಗಳು ಸಿಬಿಐ ವಿಶೇಷ ಕೋರ್ಟ್ ಇರುವ ಪಂಚಕುಲಾದ ಬಳಿ ಕಳೆದ ಕೆಲವು ದಿನಗಳಿಂದ ಜಮಾಯಿಸಲು ಆರಂಭಿಸಿದ್ದರು.

ಗಲಭೆಗಳು ಹಾಗೂ ಹಿಂಸಾಚಾರದ ಸಾಧ್ಯತೆ ಬಗ್ಗೆ ಅರಿವು ಮತ್ತು ವ್ಯಾಪಕ ಆತಂಕ ಇದ್ದಾಗ್ಯೂ ಹರಿಯಾಣದ ಮುಖ್ಯಮಂತ್ರಿ ಮತ್ತು ಬಿಜೆಪಿ ಸರಕಾರ ಅಗತ್ಯ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಂಡಿರಲಿಲ್ಲ. ತನ್ನ ಕರ್ತವ್ಯಗಳ ಬಗ್ಗೆ ಗಂಭೀರ ನಿರ್ಲಕ್ಷ ಕಾನೂನು ಮತ್ತು ಸುವ್ಯವಸ್ಥೆ ಪೂರ್ಣವಾಗಿ ಮುರಿದು ಬೀಳುವುದಕ್ಕೆ ಕಾರಣವಾಗಿದೆ.

ಇದಕ್ಕೆ ಮುನ್ನ ಮುಖ್ಯಮಂತ್ರಿ ಮತ್ತು ಬಿಜೆಪಿ ಸಚಿವರುಗಳು ಈ 'ದೇವಮಾನವ'ನ ಭೇಟಿ ಮಾಡಿ ಆಶೀರ್ವಾದ ಕೋರಲು ಹೋಗಿದ್ದರೆಂದು ವರದಿಯಾಗಿದೆ. ದೇವಮಾನವನ ಬಗ್ಗೆ ಅನುಕಂಪದ ಧೋರಣೆಯಿಂದ ಪರಿಸ್ಥಿತಿ ನಿಭಾಯಿಸಲು ಸರಕಾರ ಮುಂದಾಗಿತ್ತು ಎಂದು ಇದರರಿಂದ ತಿಳಿಯುತ್ತದೆ.

ಹರಿಯಾಣ ಬಿಜೆಪಿ ರಾಜ್ಯ ಸರಕಾರ ಸಾರ್ವಜನಿಕ ಮತ್ತು ಖಾಸಗಿ ಆಸ್ತಿ ಪಾಸ್ತಿಗೆ ತೀವ್ರ ಹಾನಿ ಹಾಗೂ ಅಮಾಯಕರ ಪ್ರಾಣ ಕಾಪಾಡಲು ವಿಫಲವಾಗುತ್ತಿರುವುದು ಇದು ಸತತ ಮೂರನೇ ಬಾರಿ - ರಾಮ್ ಪಾಲ್ ಪ್ರಕರಣ, ಜಾಟ್ ಚಳುವಳಿ ಮತ್ತು ಈಗಿನ ಪ್ರಕರಣಗಳಲ್ಲಿ. ಹರಿಯಾಣ ರಾಜ್ಯ ಸರಕಾರ ಮುಂದುವರೆಯುವ ಹಕ್ಕನ್ನು ಕಳೆದುಕೊಂಡಿದೆ. ಹರಿಯಾಣ ಹೈ ಕೋರ್ಟು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡಿತ್ತು. ಸರಕಾರದ ಹಿಂದಿನ ಗಂಭೀರ ವೈಫಲ್ಯಗಳ ಹಿನ್ನೆಲೆಯಲ್ಲಿ ತೀವ್ರ ಆತಂಕ ವ್ಯಕ್ತಪಡಿಸಿತ್ತು. ಇದು ಈ ಬಾರಿ ಮರುಕಳಿಸಬಾರದು ಎಂದು ಎಚ್ಚರಿಸಿತ್ತು ಕೂಡಾ.

ಹರಿಯಾಣ ರಾಜ್ಯ ಸರಕಾರ ಮತ್ತು ಮುಖ್ಯಮಂತ್ರಿ ಅಧಿಕಾರದಲ್ಲಿ ಮುಂದುವರೆಯಲು ಸಾಧ್ಯವಿಲ್ಲ. ಈ ಮುಖ್ಯಮಂತ್ರಿಯನ್ನು ತಕ್ಷಣ ವಜಾ ಮಾಡಬೇಕು.

ಅತ್ಯಾಚಾರಿ ಅಪರಾಧಿಗಳಿಗೆ ಆಶ್ರಯದಿಂದ ನ್ಯಾಯದಲ್ಲಿ ವಿಳಂಬ

ಡೇರಾ ಸಚ್ಚಾ ಸೌದಾ ಮುಖ್ಯಸ್ಥ ಅತ್ಯಾಚಾರ ಅಪರಾಧಿ ಎಂಬ ಕೋರ್ಟಿನ ತೀರ್ಪಿನ ಬಗ್ಗೆ ಜನವಾದಿ ಮಹಿಳಾ ಸಂಘಟನೆ ಹೇಳಿಕೆಯಲ್ಲಿ 15 ವರ್ಷಗಳ ಕಾಲ ಭಾರಿ ಬೆದರಿಕೆ ಅಡೆತಡೆಗಳಿಗೆ ಜಗ್ಗದೆ ನ್ಯಾಯಕ್ಕಾಗಿ ಹೋರಾಡಿದ ಇಬ್ಬರು ಮಹಿಳೆಯರನ್ನು ಅಭಿನಂದಿಸಿದೆ. ಅವರ ಬೆಂಗಾವಲಾಗಿ ಜನವಾದಿ ಮಹಿಳಾ ಸಂಘಟನೆ ದೃಢವಾಗಿ ನಿಂತಿತ್ತು. ಈ ಇಬ್ಬರು ಮಹಿಳೆಯರಿಗೆ ಸರಕಾರ ಪೂರ್ಣ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿದೆ

ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ವಿಫಲವಾದ ಕೇಂದ್ರ ಮತ್ತು ರಾಜ್ಯ ಸರಕಾರಗಳ ವೈಫಲ್ಯಗಳನ್ನು ಖಂಡಿಸಿ, ಶಾಂತಿ ಕಾಪಾಡಲು ವಿನಂತಿಸಿದೆ. ಅತ್ಯಾಚಾರ ಅಪರಾಧಿಗೆ ಬಿಜೆಪಿ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ರಾಜಕೀಯ ಆಶ್ರಯದಿಂದಾಗಿ ಮಹಿಳೆಯರಿಗೆ ನ್ಯಾಯ ದೊರಕುವಲ್ಲಿ ವಿಳಂಬವಾಗಿದೆ ಎಂದಿದೆ.


ದೊಡ್ಡಬಳ್ಳಾಪುರ


ಬೆಂಗಳೂರು


ಉಡುಪಿ

ಸ್ಫೂರ್ತಿದಾಯಕ ಅಹೋರಾತ್ರಿ ಸ್ವಾತಂತ್ರೋತ್ಸವ ಸತ್ಯಾಗ್ರಹ

ಸೆಪ್ಟಂಬರ್ 14ರ ಕಾರ್ಮಿಕರ ಮಹಾನಡಿಗೆ ಪೂರಕವಾಗಿ ಜಾಥಾಗಳ ನಂತರ ಆಗಸ್ಟ್ 14ರ ಸಂಜೆ 6 ಗಂಟೆಯಿಂದ ಬೆಳಿಗ್ಗೆ ಆಗಸ್ಟ್ 15ರ 6 ಗಂಟೆಯವರೆಗೆ ಆಹೋರಾತ್ರಿ ಸ್ವಾತಂತ್ರೋತ್ಸವ ಸತ್ಯಾಗ್ರಹವು ಕಾರ್ಮಿಕರಲ್ಲಿ ಸ್ಫೂರ್ತಿಯನ್ನು ತುಂಬಿದೆ. ಸ್ವಾತಂತ್ರ್ಯ ಬಂದು 70 ವರ್ಷಗಳಾದರೂ ಕಾರ್ಮಿಕರ ಬದುಕಿಗೆ ಬರದ ಸ್ವಾತಂತ್ರ್ಯಕ್ಕಾಗಿ ಈ ಸತ್ಯಾಗ್ರಹವನ್ನು ನಡೆಸಲಾಗಿತ್ತು. ಮೊದಲ ಬಾರಿಗೆ ರಾಜ್ಯದ 85 ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ನಡೆದಿರುವ ಈ ಸ್ವಾತಂತ್ರೋತ್ಸವ ಸತ್ಯಾಗ್ರಹದಲ್ಲಿ ಒಟ್ಟು 19 ಸಾವಿರ ಕಾರ್ಮಿಕರು ಭಾಗವಹಿಸಿದ್ದರು.

ಈ ಅಹೋರಾತ್ರಿ ಸತ್ಯಾಗ್ರಹದಲ್ಲಿ ಬೆಂಗಳೂರು ಸೇರಿದಂತೆ ಬುದ್ಧಿಜೀವಿಗಳು ಪ್ರಗತಿಪರರು, ಕಲಾವಿದರು ಪಾಲ್ಗೊಂಡಿದ್ದರು. ತುಮಕೂರು, ಮೈಸೂರು, ಹಾಸನ, ಬಳ್ಳಾರಿಗಳಲ್ಲಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿಯೂ ಅಲ್ಲಿಯ ಪ್ರಗತಿಪರರು, ಕಲಾವಿದರು ಪಾಲ್ಗೊಂಡಿದ್ದಾರೆ.


ಕಲಬುರಗಿ


ವಿಜಯಪುರ


ಬೆಂಗಳೂರು

ಸತ್ಯಾಗ್ರಹದಲ್ಲಿ ಗಮನಿಸಬೇಕಾದ ಪ್ರಮುಖ ಅಂಶಗಳೆಂದರೆ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದು, ಮತ್ತು ಮಹಿಳೆಯರು ಸೇರಿದಂತೆ ರಾತ್ರಿಯಿಡೀ ಎಲ್ಲಾ ವಿಭಾಗಗಳ ಕಾರ್ಮಿಕರು ಭಾಗವಹಿಸಿದ್ದು. ಪ್ರತಿ ವರ್ಷ ಕೋಮುಗಲಭೆ ಸೃಷ್ಟಿಸುವ ಸಿಂಧಗಿ ಮತ್ತು ಇಂಡಿಗಳಲ್ಲಿ; ಕೋಮುವಾದಿ, ಭಾಷೆ, ಗಡಿ ಸಮಸ್ಯೆಗಳಿರುವ ಬೆಳಗಾಂನ ಗೋಕಾಕ, ಚಿಕ್ಕೋಡಿ, ರಾಯಬಾಗ, ಸವದತ್ತಿ, ರಾಮದುರ್ಗಾ ಮತ್ತು ನಿಪ್ಪಾಣಿ ಮತ್ತು ಕೊಡಗಿನಲ್ಲಿ; ಕಲಾವಳಿ ಪ್ರದೇಶಗಳಲ್ಲೊಂದಾದ ಉತ್ತರ ಕನ್ನಡ ಜಿಲ್ಲೆಯ 10 ತಾಲ್ಲೂಕುಗಳಲ್ಲಿ; ಹೊಸ ಪ್ರದೇಶಗಳಾದ ಶಿವಮೊಗ್ಗ, ಚಾಮರಾಜನಗರ, ಹಾವೇರಿ, ದಾವಣಗೆರೆ ಜಿಲ್ಲಾ ಕೇಂದ್ರಗಳಲ್ಲಿ; ಹೈದ್ರಾಬಾದ್ ಕರ್ನಾಟಕದ ಜಿಲ್ಲೆಗಳಾದ ಕೊಪ್ಪಳ, ರಾಯಚೂರು, ಬಳ್ಳಾರಿ ಮತ್ತು ಯಾದಗಿರಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ – ಕಾರ್ಯಕ್ರಮ ನಡೆದಿದೆ. ಹಾಗೆಯೇ ಮೈಸೂರು, ಮಂಡ್ಯ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯ ಹಲವು ತಾಲ್ಲೂಕು ಕೇಂದ್ರಗಳಲ್ಲಿ ರಾತ್ರಿಯಿಡೀ ಕಾರ್ಯಕ್ರಮ ನಡೆದಿದೆ. ಸುರಿವ ಮಳೆಯಲ್ಲೂ ಮೈಸೂರು, ಹುಣಸೂರುಗಳಲ್ಲಿ ಸತ್ಯಾಗ್ರಹ ನಡೆದಿದೆ.

ವಿವಿಧ ಕೇಂದ್ರಗಳಲ್ಲಿ ವೈವಿಧ್ಯಮಯವಾಗಿ ಕಾರ್ಯಕ್ರಮಗಳು ನಡೆದಿವೆ. ಬೆಂಗಳೂರಿನ ಮುಖ್ಯ ಕಾರ್ಯಕ್ರಮದಲ್ಲಿ ನಾಟಕ, ಹಾಡುಗಳು, ಪವಾಡ ರಹಸ್ಯ ಬಯಲು ಇತ್ಯಾದಿ; ತುಮಕೂರಿನಲ್ಲಿ ವಿಚಾರ ಗೋಷ್ಠಿ, ಕವಿಗೋಷ್ಠಿ; ಮಂಡ್ಯದಲ್ಲಿ ಸಂಜೆ ಪಂಜಿನ ಮೆರವಣಿಗೆ, ಕಲಬುರ್ಗಿಯಲ್ಲಿ ಮಧ್ಯರಾತ್ರಿ ಪಂಜಿನ ಮೆರವಣಿಗೆ, ಹೊಸಪೇಟೆಯಲ್ಲಿ ರಾತ್ರಿಯಿಡೀ ಸಂಗೀತ, ನೃತ್ಯ, ಕರಾಟೆ ಪ್ರದರ್ಶನ ಇತ್ಯಾದಿ – ಹೀಗೆ ವೈವಿಧ್ಯಮಯವಾಗಿ ನಡೆದಿವೆ. ಹೆಚ್ಚಿನ ಕೇಂದ್ರಗಳಲ್ಲಿ ಗೋರಖಪುರದ ಆಸ್ಪತ್ರೆಯಲ್ಲಿ ಕ್ರಿಮಿನಲ್ ನಿರ್ಲಕ್ಷದಿಂದ ಸಾವನ್ನಪ್ಪಿದ ಮಕ್ಕಳಿಗೆ ಸಂತಾಪಸೂಚಕವಾಗಿ ಮೌನ ಆಚರಿಸಲಾಯಿತು. ಹಲವು ಕಡೆ ಸುರಿದ ಮಳೆಯನ್ನು, ಜಿಲ್ಲಾಧಿಕಾರಿಗಳ ಪೋಲಿಸ್ ಅಧಿಕಾರಿಗಳ ಅನುಮತಿ ನಿರಾಕರಣೆಯನ್ನು ಲೆಕ್ಕಿಸದೆ ಕಾರ್ಯಕ್ರಮ ನಡೆದಿದೆ. ಕೆಲವು ಕೇಂದ್ರಗಳಿಂದ ಬಂದ ವಿವರವಾದ ವರದಿಗಳು ಇಲ್ಲಿವೆ :

ಬೆಂಗಳೂರು: ಬೆಂಗಳೂರಿನ ಟೌನ್‌ಹಾಲ್ ಮುಂದೆ ಜಮಾವಣೆಗೊಂಡ ಸಾವಿರಾರು ಕಾರ್ಮಿಕರು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ


ದಾವಣಗೆರೆ


ಉತ್ತರ ಕನ್ನಡ


ಮಂಡ್ಯ

ಅವರು ಸತ್ಯಾಗ್ರಹವನ್ನು ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಸಿಐಟಿಯು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತಪನ್‌ಸೇನ್, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರಾದ ಕೆ.ಮರುಳಸಿದ್ದಪ್ಪ, ಚಿಂತಕರಾದ ಜಿ.ಕೆ.ಗೋವಿಂದರಾವ್, ಜಿ.ರಾಮಕೃಷ್ಣ, ಬರಹಗಾರ್ತಿ ಡಾ.ವಿಜಯಾ, ಎನ್‌ಎಸ್‌ಡಿ ಬೆಂಗಳೂರು ನಿರ್ದೇಶಕರಾದ ಸಿ,ಬಸವಲಿಂಗಯ್ಯ, ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ.ವಸುಂಧರಾ ಭೂಪತಿ, ಕಾತ್ಯಾಯನಿ ಚಾಮರಾಜ್‌ರವರು ಮಾತನಾಡಿದರು.

ಮಧ್ಯರಾತ್ರಿ 12 ಗಂಟೆಗೆ ಸಿಐಟಿಯುವಿನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳಾದ ತಪನ್‌ಸೇನ್‌ರವರು ಧ್ವಜಾರೋಹಣ ನೆರವೇರಿಸಿದರು.

ಚಿತ್ರ ನಿರ್ದೇಶಕ ಬಿ.ಸುರೇಶ, ಪ್ರೋ.ಚಂದ್ರಪ್ಪ, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಜಿ.ಸಿ.ಬಯ್ಯಾರೆಡ್ಡಿ, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ರಾಜ್ಯ ಪದಾಧಿಕಾರಿಗಳಾದ ವಿಜೆಕೆ ನಾಯರ್, ಆರ್.ಶ್ರೀನಿವಾಸ್, ಪಿ.ಕೆ.ಪರಮೇಶ್ವರ್, ಕೆ.ಎನ್. ಉಮೇಶ್, ಎನ್.ಪ್ರತಾಪ್‌ಸಿಂಹ, ಹೆಚ್.ಎನ್.ಗೋಪಾಲಗೌಡ, ಬಿ.ವಿ.ರಾಘವೇಂದ್ರ, ಜಿಲ್ಲಾ ಮುಖಂಡರಾದ ಬಿ.ಎನ್.ಮಂಜುನಾಥ್,


ಹೊಸಪೇಟೆ

ಯಶಸ್ವಿ ಕಾರ್ಮಿಕ ಜಾಗೃತಿ ಜಾಥಾ–ಕೆಲವು ಅನುಭವಗಳು



ಎಸ್.ವರಲಕ್ಷ್ಮಿ

ಕರ್ನಾಟಕದ ಜಲಿಯಾನ್ ವಾಲಾಬಾಗ್ ಎಂದು ಪ್ರಸಿದ್ಧವಾದ ಚಿಕ್ಕಬಳ್ಳಾಪುರ ಜಿಲ್ಲೆಯ ವಿದುರಾಶ್ವತ್ಥದಲ್ಲಿ ಸರಳವಾಗಿ, ಅಲ್ಲಿಯ ಹುತಾತ್ಮರ ಸ್ಫೂರ್ತಿಯೊಂದಿಗೆ ಆರಂಭವಾಗಿ ಅಗಸ್ಟ್ 13 ರಂದು ಕೊನೆಗೊಂಡ ರಾಜ್ಯವ್ಯಾಪಿ ಕಾರ್ಮಿಕ ಜಾಗೃತಿ ಜಾಥಾ ಸುಮಾರು 4200 ಕಿ.ಮೀ.ಗಳನ್ನು ಕ್ರಮಿಸಿ, 15 ದಿನಗಳಲ್ಲಿ ಒಟ್ಟು 29 ಜಿಲ್ಲೆಗಳಲ್ಲಿ 52 ಸ್ಥಳಗಳನ್ನು ಮತ್ತು 15 ಸಾವಿರ ಕಾರ್ಮಿಕರನ್ನು ಮುಟ್ಟಿತ್ತು. 52 ಸ್ಥಳಗಳಲ್ಲಿ ಸಭೆಗಳನ್ನು ನಡೆಸಲು ಸಾಧ್ಯವಾಯಿತು. 29 ಸ್ಥಳಗಳಲ್ಲಿ ನಾಟಕವನ್ನು ಪ್ರದರ್ಶಿಸಲಾಯಿತು. ಕರ್ನಾಟಕ ವ್ಯವಸ್ಥೆಯನ್ನು ತಿಳಿದುಕೊಳ್ಳಲು ಮತ್ತು ಹೋರಾಟಗಳನ್ನು ನೆನಪಿಸಿಕೊಳ್ಳುತ್ತಾ ಮುಂದಿನ ಹೋರಾಟಕ್ಕೆ ಸಜ್ಜುಗೊಳಿಸಲು ಇದರಿಂದ ನೆರವಾಗಿದೆ. ಜಾಥಾದ ಕೆಲವು ಮರೆಯಲಾರದ ಅನುಭವಗಳು:

* ಚಾಮರಾಜನಗರದಲ್ಲಿ 10–15 ವರ್ಷಗಳಿಂದೀಚಿಗೆ ಬಂದ ಅಂಗನವಾಡಿ, ಬಿಸಿಯೂಟ ಮಹಿಳೆಯರು ವಾಹನ ಇಳಿಯುತ್ತಿದ್ದಂತೆ ಮುಗಿಲು ಮುಟ್ಟುವ ಘೋಷಣೆಗಳು. ಹೂವಿನ ಸುರಿಮಳೆ ಮತ್ತು ಸಂಗಾತಿಗಳ ಅಪ್ಪುಗೆ ಎಲ್ಲವೂ ರೋಮಾಂಚನಕಾರಿಯಾಗಿತ್ತು. ಬೆಳಿಗ್ಗೆ 10–00ಗಂಟೆಗೆ ಆ ಮಹಿಳೆಯರು ದೂರ ದೂರ ತಾಲ್ಲೂಕು ಮತ್ತು ಹಳ್ಳಿಗಳಿಂದ ಬರಬೇಕೆಂದರೆ ಎಷ್ಟೊತ್ತಿಗೆ ಅವರ ಮನೆ ಬಿಟ್ಟಿರಬಹುದು?
* "ನಿದ್ದೆಯು ನಮಗಿಲ್ಲ ಎದ್ದೇಳಿ" ಎಂಬ ನಾಟಕವನ್ನು ಹನುಮಂತು, ಶೃತಿ, ಮೋನಿಷಾ, ಬಸವರಾಜಕಮ್ಮಾರ, ವಿಜಿ ಮತ್ತು ಈರಪ್ಪರವರು ಅಚ್ಯುತರವರ ನಿರ್ದೇಶನದಲ್ಲಿ 2 ದಿನದಲ್ಲಿ ನಾಟಕ ಕಲಿತ ವಿದ್ಯಾರ್ಥಿಗಳು. ಎಲ್ಲರೂ ಉನ್ನತ ಪದವಿಗಳನ್ನು ಓದುತ್ತಿದ್ದವರು. 20 ದಿನಗಳ ಕಾಲ ಮನೆ ಬಿಟ್ಟು ನಮ್ಮೊಟ್ಟಿಗಿದ್ದ ಸಂಗಾತಿಗಳು. ಇವರ ನಾಯಕ ಬಸವರಾಜ ಪೂಜಾರ. ಇವರದ್ದು ಒಂದೆಡೆ ನಾಟಕ ಮತ್ತೊಂದೆಡೆ ಸಾಮಾಜಿಕ ಜಾಲತಾಣ ನಿರ್ವಹಣೆಯ ಕೆಲಸ. ಇಡೀ ಜಾಥಾವನ್ನು ಪ್ರಪಂಚಕ್ಕೆ ಪರಿಚಯಿಸಿದ ಕೀರ್ತಿ.
* ಈ ನಾಟಕ ಹಾಸನದಲ್ಲಿ ಮಾಡುವಾಗ ಗುತ್ತಿಗೆ ಕಾರ್ಮಿಕನಿಗೆ ಮಗಳನ್ನು ಕೊಡುವುದಿಲ್ಲವೆಂದು ಅವನನ್ನು ಹೀನಾಯಿಸಿದ ದೃಶ್ಯದಿಂದ ಒಬ್ಬ ಮಹಿಳೆ ಅತ್ತುಕೊಂಡು ನನ್ನ ಮಗಳನ್ನು ಹೀಗೇ ಸಾಯಿಸಿದರು. ಅವನನ್ನು ಸಾಯಿಸಬೇಡಿ ಎಂದು ಕಣ್ಣೀರು ಹಾಕಿದ್ದು, ಇದೇ ದೃಶ್ಯದಲ್ಲಿ ಚಪ್ಪಲಿಯಿಂದ ಹೊಡೆಯುತ್ತಿದ್ದವನಿಗೆ ಒಂದು ಮಗು ಅದನ್ನು ತಡೆಯಲು ಕುಳಿತಲ್ಲಿಂದಲೇ ಪ್ರಯತ್ನ ಮಾಡಿದ್ದು, ಗಂಗಾವತಿಯಲ್ಲಿ ಕಡು ಬಡವಿ ಮುಸ್ಲಿಂ ಮಹಿಳೆ ತನ್ನ ಹರಿದ ಬುರ್ಕಾ ತೊಟ್ಟಿದ್ದರೂ 50 ರೂ.ಗಳ ದೇಣಿಗೆ ನೀಡಿದ್ದು, ಹೆಚ್ಚು ಕಡಿಮೆ ಹುಮ್ನಾಬಾದ್ ಪ್ರದೇಶದ ಎಲ್ಲಾ ಜಿಲ್ಲೆಗಳ ನೌಕರರು ಭಾವನಾತ್ಮಕವಾಗಿ ಆ ನಾಟಕಕ್ಕೆ ಸ್ಪಂಧಿಸಿ ಅವರೊಟ್ಟಿಗೆ ಘೋಷಣೆಗಳನ್ನು ಕೂಗುತ್ತಾ ಇದ್ದದ್ದು ನಾಟಕವನ್ನು ಜೀವಂತವಾಗಿಡುವಲ್ಲಿ ಯಶಸ್ವಿಯಾಯಿತು.
* ಅಂದು ರಾತ್ರಿ ಸಿಂಧಗಿಯಲ್ಲಿ ರಾತ್ರಿಯೂಟ. ಸಿಂಧಗಿ ಪ್ರವಾಸಿ ಮಂದಿರ ತಲುಪಿದಾಗ ರಾತ್ರಿ 10 ಗಂಟೆ. ಆ ರಾತ್ರಿಯಲ್ಲೂ ಅಂಗನವಾಡಿ, ಬಿಸಿಯೂಟ, ಗ್ರಾಮ ಪಂಚಾಯತಿ ನೌಕರರು 7.30ಕ್ಕೆ ಅಡುಗೆ ತಯಾರಿಸಿ ಕಾದು ಸುಣ್ಣವಾಗಿದ್ದರು. ನಮ್ಮನ್ನು ಕಂಡ ಕೂಡಲೇ ಸಂಭ್ರಮ ಎದ್ದು ಕಾಣುತ್ತಿತ್ತು. ಸಿಂಧಗಿಯಂತಹ ಹಿಂದುಳಿದ ತಾಲ್ಲೂಕಿನಲ್ಲಿ ಅದು ಪ್ರವಾಸಿ ಮಂದಿರ ಬಳಿ, ನಡುರಾತ್ರಿಯ ಮಳೆ, ಮಹಿಳೆಯರು ಈ ಎಲ್ಲಾ ಸಂಪ್ರಾದಾಯಗಳನ್ನು ಕಿತ್ತೆಸೆದಿದ್ದರು.
* ವಿಜಯಪುರ, ಜಿಲ್ಲೆಯ ಪೊಲೀಸರು ಸಭೆಗೆ ಹಾಕಿದ ಕುರ್ಚಿಗಳನ್ನು ಎತ್ತಲು ಮುಂದಾದಾಗ ಅದನ್ನು ಖಂಡಿಸಿ ರಸ್ತೆಯಲ್ಲಿ ಕುಳಿತು ನಾಟಕ, ಭಾಷಣಗಳನ್ನು ಮಾಡಲಾಯಿತು.
* ಪ್ಲಾಂಟೇಶನ್ ಕಾರ್ಮಿಕರೇ ವಾಸಿಸುವ ಸಂತವೇರಿ ಗ್ರಾಮದಲ್ಲಿ ಸಭೆ. ಊರಿಗೆ ಊರೇ ಈ ಸಭೆಯನ್ನು ಯಶಸ್ಸು ಮಾಡಲು ಶೃಂಗಾರಗೊಂಡಿತ್ತು. ಅಲ್ಲಿಯ ಗ್ರಾಮ ಪಂಚಾಯತಿ ಅಧ್ಯಕ್ಷರಿಂದ ಹಿಡಿದು ಊರಿನ ಸಮಸ್ತ ಜನತೆ ಪಾಲ್ಗೊಂಡಿದ್ದು ನಮ್ಮ ಜಾಥಾಕ್ಕೆ ಹೆಚ್ಚಿನ ಪ್ರೇರಣೆ ಕೊಟ್ಟಿದ್ದು ಮಾತ್ರವಲ್ಲ ಅವರು ಈ ಜಾಥಾವನ್ನು ಸ್ವೀಕರಿಸಿದ್ದು "ನಮ್ಮ ಬದುಕನ್ನು ಹಸನು ಮಾಡುವ ಜಾಥಾ" ಆಗಿ.
* ಕುಂದಾಪುರ ನಗರ ಪ್ರಾರಂಭದ ಸ್ಥಳದಿಂದ ನೂರಾರು ಬೈಕ್‌ಗಳು, ಘೋಷಣೆಗಳು ವರ್ಣರಂಜಿತವಾಗಿತ್ತು. ಸುಮಾರು 2 ಕಿ.ಮೀ. ಬೈಕ್ ಜಾಥಾ ಮಾಡಿ ಬಹಿರಂಗ ಸಭೆಯನ್ನು ನಡೆಸಲಾಯಿತು. ಈ ಸಭೆ ಜಾಥಾದ ಸಮಾರೋಪ ಸಭೆಯಾದ್ದರಿಂದ ಮಾರನೇ ದಿನ ಆಗಸ್ಟ್ 14 ರ ಕಾರ್ಯಕ್ರಮ, ಕೃಷ್ಣಾಷ್ಟಮಿಯಿದ್ದರೂ ಕೂಡಾ ಸಂಗಾತಿಗಳು ಟೈಲ್ಸ್, ಕಟ್ಟಡ, ಬೀಡಿ, ಬಿಸಿಯೂಟ, ಅಂಗನವಾಡಿ, ಆಶಾ, ಗೋಡಂಬಿ, ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರು, ಕೆಪಿಟಿಸಿಎಲ್, ಆಟೋಚಾಲಕರು ಇನ್ನೂ ಮುಂತಾದ ಕಾರ್ಮಿಕರು ಸೇರಿದ್ದರು.



ಪಿ.ಮುನಿರಾಜು, ಟಿ.ಲೀಲಾವತಿ, ಮತ್ತಿತರರು ಭಾಗವಹಿಸಿದ್ದರು.

ಅಂದಿನ ದಾಖಲೆ ಧಾರಾಕಾರ ಮಳೆಯಲ್ಲೂ ಸಹ ಕಾರ್ಮಿಕರು ಉತ್ಸಾಹದಿಂದ ಭಾಗವಹಿಸಿದ್ದರು. ಭೂಮ್ತಾಯಿ ಬಳಗವು ಹೋರಾಟದ ಹಾಡುಗಳು, ಬಿಜಿವಿಎಸ್‌ನಿಂದ ಪವಾಡ ರಹಸ್ಯ ಬಯಲು ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಸತತ 16 ದಿನಗಳ ಕಾಲ ಇಡೀ ರಾಜ್ಯವ್ಯಾಪಿ ಜಾಥಾದಲ್ಲಿ ಭಾಗವಹಿಸಿದ್ದ ನಾಟಕ ತಂಡವು 'ನಿದ್ದೆಯು ನಮಗಿಲ್ಲ ಎದ್ದೇಳಿ' ಎಂಬ ನಾಟಕವನ್ನು ಪ್ರದರ್ಶಿಸಿದರು.

ತುಮಕೂರು: ಸತ್ಯಾಗ್ರಹದ ಭಾಗವಾಗಿ ಸ್ವಾತಂತ್ರ ಭಾರತದ 70 ವರ್ಷಗಳ ಸಾಧನೆ 4 ಸವಾಲುಗಳು ಎಂಬ ವಿಚಾರ ಮಂಥನ ಗೋಷ್ಠಿ ನಡೆಯಿತು. ಪ್ರೋ.ಕೆ.ದೊರೈರಾಜು, ಸಿ.ಯತಿರಾಜು, ಪ್ರೋ.ಜಿ.ಎಂ.ಶ್ರೀನಿವಾಸ್, ಡಾ.ಓ.ನಾಗರಾಜು, ಕೊಟ್ಟೂರು ಶಂಕರ್, ಜಿ.ಕಮಲ ವಿಚಾರಗಳನ್ನು ಮಂಡಿಸಿದರು. ಅಧ್ಯಕ್ಷತೆ ಸೈಯದ್ ಮುಜೀಬ್ ವಹಿಸಿದ್ದರು.

ನಂತರ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷರಾದ ಬಾ.ಹ. ರಮಾಕುಮಾರಿ ಅವರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಿತು. ಡಾ.ಸೊ. ಮು.ಭಾಸ್ಕರಾಚಾರ್ಯ, ಈಚನೂರು ಇಸ್ಮಾಯಿಲ್, ಬಿಳಿಗೆರೆ ಕೃಷ್ಣಮೂರ್ತಿ, ರಿಜ್ವಾನ್ ಷಾ ಹೊರಕೆರೆ, ನಿತ್ಯಾತೀತಾ, ಕೆ.ಇ.ಸಿದ್ಧಯ್ಯ, ಡಾ. ಅರುಂತಿ, ಸಂತೋಷ ಮಡೆನೂರ ಕವನ ವಾಚಿಸಿದರು. ಈ ಮಧ್ಯೆ ಸತ್ಯಾಗ್ರಹದ ಸ್ಥಳಕ್ಕೆ ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳಾದ ತಪನ್‌ಸೇನ್ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿಸುಂದರಂ ಅವರು ಆಗಮಿಸಿ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದರು. •

ಕೇಳಿ ಬಂದ ಮಾತುಗಳು

"ಸಂವಿಧಾನದ ಆಶಯಗಳಾದ ಸಮಾನತೆ, ಸಹಬಾಳ್ವೆಯ ತತ್ವಗಳು ಇಂದಿಗೂ ಸಮರ್ಪಕವಾಗಿ ಜಾರಿಗೆ ಬಂದಿಲ್ಲ. ಸ್ವಾತಂತ್ರ್ಯ ನಂತರದ 70 ವರ್ಷಗಳಲ್ಲಿ ಆಳಿದ ಸರ್ಕಾರಗಳು ಸಂವಿಧಾನದಲ್ಲಿ ಅಡಕವಾಗಿರುವ ಜನರಿಂದ, ಜನರಿಗಾಗಿ, ಜನರಿಗೋಸ್ಕರ ಇರುವ ಪ್ರಜಾಪ್ರಭುತ್ವ ದೇಶದ ಎಂಬ ಆಶಯವನ್ನು ಬಾಯಿಬಡಿಕೆಗೆ ಸೀಮಿತಗೊಳಿಸಿದ್ದಾರೆ. ಚುನಾಯಿತ ಜನಪ್ರತಿನಿಧಿಗಳು ಜನರಿಗಾಗಿ ಕೆಲಸ ಮಾಡದೇ, ದೊಡ್ಡ ಬಂಡವಾಳದಾರರ ಚೇಲಾಗಳಾಗಿದ್ದಾರೆ."

– ನ್ಯಾಯಮೂರ್ತಿ ವಿ. ಗೋಪಾಲಗೌಡ (ಬೆಂಗಳೂರಿನಲ್ಲಿ)

"ಭಾರತದ ಎಪ್ಪತ್ತನೇ ಸ್ವಾತಂತ್ರ್ಯೋತ್ಸವದ ಮೇಲೆ ಗೋರಖಪುರದ ಮಕ್ಕಳ ಸಾವಿನ ಸೂತಕದ ನೆರಳು ಬಿದ್ದಿದೆ"

– ಜಿ. ರಾಜಶೇಖರ, ಲೇಖಕರು–ಚಿಂತಕರು (ಉಡುಪಿಯಲ್ಲಿ)

"ಮೋದಿ 2019ರಲ್ಲಿ ಮತ್ತೆ ಅಧಿಕಾರ ಹಿಡಿಯುವೆ ಎನ್ನುವುದೇ ಒಂದು ದೊಡ್ಡ ಪವಾಡವಾಗಿದೆ. ಅಂತಹ ಪವಾಡವನ್ನು ಬಯಲು ಮಾಡುವ ಕೆಲಸ ನಮ್ಮ ಮುಂದಿದೆ. ದೇಶದಲ್ಲಿ ವಿರೋಧಿ ಶಕ್ತಿಗಳ ಹೋರಾಟದ ಅಸ್ತ್ರವನ್ನು ಮರೆತಂತಿದೆ. ಎಡಪಕ್ಷಗಳನ್ನು ಹೊರತುಪಡಿಸಿ. ಅದೇ ಕೆಟ್ಟ ರಾಜಕಾರಣ ಮಾಡಲು ಮುಂದಾಗುತ್ತಿದ್ದಾರೆ. ಮತ್ತೊಂದು ಸ್ವಾತಂತ್ರ್ಯ ಹೋರಾಟದ ಕಾಲ ಸನ್ನಿಹಿತವಾಗುತ್ತಿದೆ. ಹಿಂದೆ ಹೇಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಕಾರ್ಮಿಕರು ಮತ್ತು ವಿದ್ಯಾರ್ಥಿಗಳ ದೊಡ್ಡ ಪಡೆ ಹೋರಾಟದಲ್ಲಿ ಧುಮಕಿತೋ ಹಾಗೇಯೇ ಇಂದು ಸಹ ಕಾರ್ಮಿಕರು–ವಿದ್ಯಾರ್ಥಿಗಳು ಮಾಡುವುದು ಅಗತ್ಯವಾಗಿದೆ."

– ಕೆ..ಮರುಳಸಿದ್ದಪ್ಪ, ,
ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರು (ಬೆಂಗಳೂರಿನಲ್ಲಿ)
(ವಿವಿಧ ಮೂಲಗಳಿಂದ)



ತುಮಕೂರು

ಧಮಕಿಗೆ ಜಗ್ಗದ ಕಾರ್ಮಿಕರು

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆಯಲ್ಲಿ ಸತ್ಯಾಗ್ರಹದ ಸ್ಥಳಕ್ಕೆ ಬಂದ ತಾಲ್ಲೂಕು ದಂಡಾಧಿಕಾರಿಯ ಧಮಕಿ ಹಾಕಿ ಕಾರ್ಯಕ್ರಮವನ್ನು ಅಡ್ಡಿ ಮಾಡಿದರು. ಇದ್ಯಾವುದಕ್ಕೂ ಜಗ್ಗದ ಕಾರ್ಮಿಕರು ಮೈಕ್ ಕಿತ್ತು ಹಾಕಿದರೂ ಸಹ ಸತ್ಯಾಗ್ರಹವನ್ನು ಮುಂದುವರಿಸಿದರು. ತಿಪ್ಪೇಸ್ವಾಮಿ, ನಿಂಗಣ್ಣ, ಮತ್ತಿತರರು ಭಾಗವಹಿಸಿದ್ದರು.



ಹಾಸನ

ಸಾಲ ಮನ್ನಾ ಕೂಡಲೇ ಮಾಡಿ: ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ


ಚಿಕ್ಕಬಳ್ಳಾಪುರ
ಜಿ.ವಿ. ಶ್ರೀರಾಮರೆಡ್ಡಿ ಮಾತನಾಡುತ್ತಿರುವುದು


ಮಂಡ್ಯ

ರೈತರ–ಕೃಷಿ ಕಾರ್ಮಿಕರ ಮತ್ತು ದಲಿತರ ಎಲ್ಲ ರೀತಿಯ ಸಾಂಸ್ಥಿಕ ಸಾಲಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು "ಒಂದು ಬಾರಿ"ಯೆಂಬಂತೆ ಮನ್ನಾ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲು, ಅಗಸ್ಟ್ 21ರಂದು ಕರ್ನಾಟಕ ರಾಜ್ಯಾದ್ಯಂತ ರೈತರ, ಕೃಷಿ ಕಾರ್ಮಿಕರ ಹಾಗೂ ರಾಜ್ಯದ ದಲಿತ ಸಂಘಟನೆಗಳ ಒಕ್ಕೂಟವು ಜಂಟಿಯಾಗಿ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆಯನ್ನು ಆಯೋಜಿಸಿದ್ದವು. ಕಾರಣಾಂತರಗಳಿಂದ ಹೆಚ್ಚಿನ ಕಡೆ ಅಗಸ್ಟ್ 22ರಂದು ಮತ್ತು ಕೆಲವು ಕಡೆ ಅಗಸ್ಟ್ 21 ಮತ್ತು 23ರಂದು ಹೆಚ್ಚಿನ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆಗಳು ನಡೆದಿರುವ ವರದಿಗಳು ಬಂದಿವೆ. ದಕ್ಷಿಣ ಕನ್ನಡ, ಚಿಕ್ಕಬಳ್ಳಾಪುರ, ತುಮಕೂರು, ಮಂಡ್ಯ, ಕೋಲಾರ, ಬಿಜಾಪುರ, ಕಲಬುರ್ಗಿ, ಬಳ್ಳಾರಿ, ಯಾದಗೀರ, ಮೈಸೂರು, ಹಾಸನ, ಬೆಂಗಳೂರುಗಳಲ್ಲಿ ಮುಂತಾದ ಕೇಂದ್ರಗಳಲ್ಲಿ ಪ್ರತಿಭಟನೆಗಳು ನಡೆಸಿದ ವರದಿಗಳು ಬಂದಿವೆ.

ಡಾ. ಸ್ವಾಮಿನಾಥನ್ ಕೃಷಿ ಆಯೋಗದ ಸಲಹೆಯಂತೆ ರೈತರ ಬೆಳೆಗೆ ಬೆಂಬಲ ಬೆಲೆ ನಿಗದಿಯಾಗಬೇಕು; ರೈತರ, ಕೃಷಿ ಕಾರ್ಮಿಕರ ಹಾಗೂ ದಲಿತರ ಎಲ್ಲ ರೀತಿಯ ಸಾಲಗಳನ್ನು ಮನ್ನಾ ಮಾಡಬೇಕು; ಕೃಷಿಕರ ಪರವಾದ ಬೆಳೆವಿಮೆ ಜಾರಿ ಗೊಳಿಸಬೇಕು ಹಾಗೂ ಹತ್ಯೆಗಾಗಿ ಜಾನುವಾರು ಮಾರಾಟ ನಿಷೇಧದ ನಿಯಮಾವಳಿ ವಾಪಾಸ್ಸು ಪಡೆಯಬೇಕು – ಎಂಬ ನಾಲ್ಕು ಪ್ರಮುಖ ಬೇಡಿಕೆಗಳನ್ನು ಒತ್ತಾಯಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ನೂರಾರು ರೈತರು, ದಲಿತರು, ಕೃಷಿ ಕೂಲಿಕಾರರು ಪ್ರತಿಭಟನೆ ಭಾಗವಹಿಸಿರುವ ಬಗ್ಗೆ ವರದಿಗಳು ಬಂದಿವೆ.


ಬಳ್ಳಾರಿ





ಕಲಬುರ್ಗಿ



ತುಮಕೂರ

ರೇಗಾ ಉಳಿಸಿ ಬಲಪಡಿಸಿ: ಕೃಷಿ ಕೂಲಿಕಾರರ ಪಾರ್ಲಿಮೆಂಟ್ ಚಲೊ

ರೇಗಾ ಯೋಜನೆಯನ್ನು ಉಳಿಸಿ ಬಲಪಡಿಸಬೇಕು ಮತ್ತು ಇತರ ಹಲವು ಹಕ್ಕೊತ್ತಾಯಗಳಿಗೆ ಕೇಂದ್ರ ಸರಕಾರದ ಗಮನ ಸೆಳೆಯಲು ಅಗಸ್ಟ್ 9 ರಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ "ಪಾರ್ಲಿಮೆಂಟ್ ಚಲೋ" ಏರ್ಪಡಿಸಿತ್ತು. ಕೇರಳ, ಬಂಗಾಳ, ಆಂಧ್ರ, ತೆಲಂಗಾಣ, ತಮಿಳುನಾಡು, ಕರ್ನಾಟಕ, ತ್ರಿಪುರಾ, ಬಿಹಾರ, ಉತ್ತರ ಪ್ರದೇಶ, ಪಂಜಾಬ, ಹರಿಯಾಣ, ಮಹಾರಾಷ್ಟ್ರ ಮತ್ತು ರಾಜಸ್ಥಾನಗಳಿಂದ ಒಟ್ಟು ಸುಮಾರು 20 ಸಾವಿರ ಕೃಷಿ ಕೂಲಿಕಾರರು ನೆರೆದಿದ್ದರು. ಕರ್ನಾಟಕದಿಂದ ಕಾ. ನಿತ್ಯಾನಂದಸ್ವಾಮಿ ಮತ್ತು ಹನುಮೇಗೌಡರ ನೇತೃತ್ವದಲ್ಲಿ ಸುಮಾರು 150 ಜನ ಭಾಗವಹಿಸಿದ್ದರು. ಸುರಿಯುತ್ತಿದ್ದ ಮಳೆಯಲ್ಲಿಯೇ ಸಾವಿರಾರು ಕೃಷಿ ಕೂಲಿಕಾರರು ರಾಮಲೀಲಾ ಮೈದಾನದಿಂದ ಪಾರ್ಲಿಮೆಂಟ್ ನತ್ತ ನಡೆದರು. ಪಾರ್ಲಿಮೆಂಟ್ ಬೀದಿಯಲ್ಲೇ ರ್‍ಯಾಲಿ ನಡೆಸಲಾಯಿತು.

ರ್‍ಯಾಲಿಯನ್ನು ಉದ್ದೇಶಿಸಿ ಸಂಘದ ಪ್ರಧಾನ ಕಾರ್ಯದರ್ಶಿ ವಿಜಯರಾಘವನ್ ಮತ್ತು ಜಂಟಿ ಕಾರ್ಯದರ್ಶಿ ಸುನೀತ್ ಚೋಪ್ರಾ ಮಾತನಾಡಿದರು. ಹಲವು ಎಂ.ಪಿ.ಗಳು, ಕಿಸಾನ್ ಸಭಾ ಮತ್ತು ಸಿಐಟಿಯು ನಾಯಕರೂ ಮಾತನಾಡಿ ಸೌಹಾರ್ದ ಬೆಂಭಲ ಸೂಚಿಸಿದರು. ಸಭೆ ಸಂಘದ ಅಧ್ಯಕ್ಷತೆಯನ್ನು ತಿರುವಾಕ್ಕರಸು ವಹಿಸಿದ್ದರು. ರೇಗಾ ಯೋಜನೆಯನ್ನು ವಿಸ್ತರಿಸುವ ಬದಲು ಮೋದಿ ಸರಕಾರ ಮೊದಲಿನಿಂದಲೂ ಅದನ್ನು ಕಡಿತಗೊಳಿಸುವ ನಿಲ್ಲಿಸುವ ಶತಪ್ರಯತ್ನ ಮಾಡುತ್ತಿದೆ. ಆದರೆ ಕೃಷಿ ಕೂಲಿಕಾರರ ಸಂಘ ಮತ್ತು ಪ್ರಜಾಸತ್ತಾತ್ಮಕ ಚಳುವಳಿಯ ಒತ್ತಡದಿಂದಾಗಿ ಅದು ಸಾಧ್ಯವಾಗಿಲ್ಲ. ಆದರೂ ಕೂಲಿ ದರ, ಕೆಲಸದ ದಿನಗಳು, ಅನುದಾನ ಕಡಿತ, ಕೂಲಿಯ ಪಾವತಿಯಲ್ಲಿ ವಿಳಂಬ ಮೊದಲಾದವುಗಳಿಂದ ಜಾರಿಯನ್ನು ಕುಂಠಿತಗೊಳಿಸುತ್ತಿದೆ. ಇದರ ವಿರುದ್ಧ ಸಂಘಟಿತ ದನಿ ಎಬ್ಬಿಸಬೇಕು ಎಂದು ಕರೆ ನೀಡಲಾಯಿತು. ಮಹಿಳೆಯರಿಗೆ ಸಮಾನ ಕೂಲಿ, ಕೆಲಸ ಒದಗಿಸದಿದ್ದರೆ ನಿರುದ್ಯೋಗ ಭತ್ಯೆ, ಕೃಷಿ ಕೂಲಿಕಾರರಿಗೆ ಸಾಮಾಜಿಕ ಭದ್ರತೆಯ ಕ್ರಮಗಳು ಹಕ್ಕೊತ್ತಾಯಗಳಲ್ಲಿ ಸೇರಿವೆ.



ಕರ್ನಾಟಕದ ಪ್ರತಿನಿಧಿಗಳು





ಸ್ವಾತಂತ್ರ್ಯ ದಿನದ ಭಾಷಣ: ಬೂಟಾಟಿಕೆಯ ಭವ್ಯ ಪ್ರದರ್ಶನ



ಕಳಚಿ ಬೀಳುವಂತಾದ 'ಸತ್ಯಮೇವ ಜಯತೆ' –ವ್ಯಂಗ್ಯಚಿತ್ರ; ಮಂಜುಲ್

ಸ್ವಾತಂತ್ರ್ಯ ದಿನ ಪ್ರಧಾನ ಮಂತ್ರಿಗಳು ಕೆಂಪು ಕೋಟೆಯಿಂದ ನೀಡಿದ ಉಪದೇಶಗಳಲ್ಲಿ ಬೂಟಾಟಿಕೆಯೇ ತುಂಬಿತ್ತು. ಅವರ ಭಾಷಣ ಈ ಉಪದೇಶಗಳು ಮತ್ತು ಅವುಗಳ ವಾಸ್ತವ ಆಚರಣೆಗಳ ನಡುವೆ ಅಗಾಧ ಅಂತರವಿದೆ ಎಂಬುದನ್ನು ತೋರಿಸುತ್ತದೆ. ಮೇ 2014ರಲ್ಲಿ ಅವರು ಮತ್ತು ಅವರ ಪಕ್ಷ ನೀಡಿದ ವಿವಿಧ ಭರವಸೆಗಳ ಈಡೇರಿಕೆಯ ಬಗ್ಗೆ ಚಕಾರವಿಲ್ಲ. ನಿಜ ಹೇಳಬೇಕೆಂದರೆ, ಅಚ್ಛೇ ದಿನ್' ಮಂತ್ರವನ್ನು ಹೊರಗೆಸೆದು 2019 ಲೋಕಸಭಾ ಚುನಾವಣೆಯ ಮೇಲೆ ಕಣ್ಣಿಟ್ಟ '2022ರ ವೇಳೆಗೆ 'ನವಭಾರತ'ದ ಮತ್ರೋಚ್ಚಾರಣೆ ಆರಂಭವಾಗಿದೆ.




ಪ್ರಕಾಶ್ ಕಾರಟ್

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಸ್ವಾತಂತ್ರ್ಯ ದಿನದ ಭಾಷಣ ಒಂದು ಪಕ್ಕಾ ಪ್ರಚಾರದ ತುಣುಕು– ವಾಸ್ತವದೊಂದಿಗೆ ಕೊಂಡಿ ಕಳಚಿಕೊಂಡಿರುವುದು ಮತ್ತು ಕೆಲವು ವಿಷಯಗಳಲ್ಲಿ ಬೂಟಾಟಿಕೆ ತುಂಬಿ ಕೊಂಡಿರುವುದೇ ಅದರ ವಿಶಿಷ್ಟತೆ.

ಕಾಶ್ಮೀರದ ವಿಷಯದಲ್ಲಿ ಇದು ಎದ್ದು ಕಾಣುತ್ತದೆ. 'ಗಾಲಿ' ಅಥವ 'ಗೋಲಿ'(ದೂಷಣೆ ಅಥವ ಬಂದೂಕು) ಗಳಿಂದ ಆ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲ, ಬದಲಿಗೆ ಕಾಶ್ಮೀರಿಗಳನ್ನು ಆಲಿಂಗಿಸಿಕೊಳ್ಳುವುದರಿಂದ ಮಾತ್ರ ಸಾಧ್ಯ ಎಂಬ ಅವರ ಬುದ್ಧಿವಾದವಂತೂ ಬೂಟಾಟಿಕೆಯ ಪರಾಕಾಷ್ಠೆ. ಕಾಶ್ಮೀರ ಕಣಿವೆ ಕ್ಷೋಭೆಯಿಂದ ತುಂಬಿದೆ. ಜನತೆಯ ನಡುವಿನ ಅಸಂತುಷ್ಟಿಯನ್ನು ಎದುರಿಸಲು ಕೇಂದ್ರ ಸರಕಾರದ ಏಕೈಕ ನಿಲುವು ಎಂದರೆ ಬಲಪ್ರಯೋಗ ಮಾತ್ರ. ರಾಜಕೀಯ ಸಂವಾದ ಆರಂಭಿಸುವ ಒಂದಾದರೂ ಮುತುವರ್ಜಿ ಮೋದಿ ಸರಕಾರದ ಕಡೆಯಿಂದ ಬರಲಿಲ್ಲ. ತದ್ವಿರುದ್ಧವಾಗಿ ಕಾಶ್ಮೀರಿ ಜನಗಳ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ದಾಳಿ ನಡೆಸುವ, ಜಮ್ಮು ಮತ್ತು ಕಾಶ್ಮೀರಕ್ಕೆ ಕೊಟ್ಟ ವಿಶೇಷ ಸ್ಥಾನಮಾನವನ್ನು ಅಳಿಸಿ ಹಾಕುವ ಕ್ರಮಗಳನ್ನೇ ಒಂದಾದ ಮೇಲೊಂದರಂತೆ ಕೈಗೊಳ್ಳಲಾಗಿದೆ. ಖಾಯಂ ನಿವಾಸಿಗಳನ್ನು ಕುರಿತಂತೆ ಶಾಸನ ಮಾಡುವ ಹಕ್ಕನ್ನು ರಾಜ್ಯ ಶಾಸನಸಭೆಗೆ ಕೊಟ್ಟಿರುವ ಸಂವಿಧಾನದ ಕಲಮು 35ಎ ಗೆ ಸುಪ್ರಿಂ ಕೋರ್ಟಿನಲ್ಲಿ ಸವಾಲು ಇದಕ್ಕೊಂದು ಉದಾಹರಣೆ. ವಾಸ್ತವದಲ್ಲಿ ದಮನಚಕ್ರ ನಡೆಸುತ್ತಲೇ ಸೋದರತ್ವದ ಮತ್ತು ಪ್ರೀತಿಯ ಉಪದೇಶ ನೀಡುವುದು ಆರೆಸ್ಸೆಸ್ ಕುರುಹಾಗಿರುವ ಇಬ್ಬಂದಿತನದ ಎಂದಿನ ಮಾದರಿಯಲ್ಲೇ ಇದೆ.

ಪ್ರಧಾನ ಮಂತ್ರಿಗಳು ತನ್ನ ನೋಟುರದ್ದತಿ ಕ್ರಮವನ್ನು ಅಲಂಕರಿಸಿ ತೋರಿಸುವ ಪ್ರಯತ್ನವನ್ನು ನಡೆಸಿದ್ದಾರೆ, ಅದರ ಮೂಲಕ ಕಪ್ಪು ಹಣವನ್ನು ಹೊರಗೆಳೆಯಲು ಭಾರೀ ಯಶಸ್ಸು ಸಿಕ್ಕಿದೆ ಎಂಬ ದಾವೆ ಹೂಡಿದ್ದಾರೆ. ಅವರ ಪ್ರಕಾರ ಬ್ಯಾಂಕಿಂಗ್ ವ್ಯವಸ್ಥೆಯ ಹೊರಗಿದ್ದ 3ಲಕ್ಷ ಕೋಟಿ ರೂ. ಈಗ ನೋಟು ರದ್ಧತಿಯಿಂದಾಗಿ ಬ್ಯಾಂಕಿಂಗ್ ವ್ಯವಸ್ಥೆಯೊಳಕ್ಕೆ ಬಂದಿದೆ. ಬ್ಯಾಂಕ್‌ಗಳಲ್ಲಿ ಠೇವಣಿಯಾಗಿರುವ 1.75ಲಕ್ಷ ಕೋಟಿ ರೂ.ಗಳು ಮತ್ತು 18 ಲಕ್ಷ ಮಂದಿಯ ಮೇಲೆ ಸರಕಾರ ಕಣ್ಣಿಟ್ಟಿದೆಯಂತೆ. ಈ ಎಲ್ಲ ಅಂದಾಜುಗಳಿಗೆ ಆಧಾರ ಏನು ಎಂದೇನೂ ಅವರು ಹೇಳಿಲ್ಲ.

ಇವೆಲ್ಲ ಸಂದೇಹಾಸ್ಪದ ದಾವೆಗಳು. ಇದುವರೆಗೂ ರಿಝರ್ವ್ ಬ್ಯಾಂಕ್ ಬ್ಯಾಂಕುಗಳಿಗೆ ನೋಟುರದ್ಧತಿಯಿಂದ ಬಂದ ಕರೆನ್ಸಿ ನೋಟುಗಳ ಒಟ್ಟು ಮೊತ್ತ ಎಷ್ಟು ಎಂದು ಹೇಳಲು ನಿರಾಕರಿಸಿದೆ. ಇದರ ಫಲಿತಾಂಶವಾಗಿ ಎಷ್ಟು ಕಪ್ಪು ಹಣವನ್ನು ಹೊರಗೆಳೆಯಲಾಗಿದೆ3 ಎಂಬುದರ ಯಾವುದೇ ಅಂದಾಜನ್ನು ರಿಝರ್ವ್ ಬ್ಯಾಂಕ್ ಆಗಲೀ, ಹಣಕಾಸು ಇಲಾಖೆಯಾಗಲೀ ಕೊಟ್ಟಿಲ್ಲ. ಪ್ರಧಾನ ಮಂತ್ರಿಗಳು 1.25 ಕೋಟಿ ರೂ. ಕಪ್ಪು ಹಣ ಪತ್ತೆ ಮಾಡಲಾಗಿದೆ ಎಂದು ಕೊಟ್ಟಿರುವ ಮೊತ್ತ ನೋಟುರದ್ಧತಿಯ ನಂತರದ್ದಲ್ಲ, ಬದಲಿಗೆ ಕಳೆದ ಮೂರುವರ್ಷಗಳಲ್ಲಿ ಸರಕಾರ ಹೊರತಂದಿದ್ದೇನೆ ಎಂದು ಹೇಳಿಕೊಂಡ ಮೊತ್ತವಷ್ಟೇ. ವಾಸ್ತವ ಸಂಗತಿಯೆಂದರೆ, ಚಲಾವಣೆಯಲ್ಲಿದ್ದ 86% ಕರೆನ್ಸಿ ನೋಟುಗಳನ್ನು ಇದ್ದಕ್ಕಿದ್ದಂತೆ ರದ್ದು ಮಾಡಿದ್ದು ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಅತ್ಯಂತ ಹಾನಿಕಾರಕ ಪರಿಣಾಮ ಬೀರಿದೆ. ಇತ್ತೀಚೆಗೆ ಬಿಡುಗಡೆ ಮಾಡಿದ ಆರ್ಥಿಕ ಸರ್ವೆಯ ಎರಡನೇ ಸಂಪುಟ ದೇಶದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಒಂದು ಅತ್ಯಂತ ನಿರುತ್ತೇಜಕರ ಚಿತ್ರವನ್ನು ಕೊಡುತ್ತದೆ.



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಪ್ರಧಾನ ಮಂತ್ರಿಗಳು ನಂಬಿಕೆಯ ಹೆಸರಲ್ಲಿ ಹಿಂಸಾಚಾರದ ವಿರುದ್ಧ ಮಾತಾಡಿದರು. ಇದು 'ಗೋರಕ್ಷಕರು' ಹಲವರನ್ನು ಬಡಿದು ಸಾಯಿಸಿರುವ ಬಗ್ಗೆ ಹೇಳಿರುವಂತದ್ದು ಎಂಬುದು ವೇದ್ಯ. ಆದರೆ ಇಲ್ಲಿಯೂ ಈ ಮಾತು ವಾಸ್ತವವಾಗಿ ಏನೇನೂ ಕ್ರಿಯೆಗಳಿದಿಲ್ಲ. ಸ್ವಾತಂತ್ರ್ಯ ದಿನದ ಕೆಲವೇ ದಿನಗಳ ಹಿಂದೆ ಗುಜರಾತಿನ ವಡೋದರಾದಲ್ಲಿ ಒಂದು ಸತ್ತ ದನದ ಚರ್ಮ ತೆಗೆದದ್ದಕ್ಕೆ ಒಬ್ಬ ತಾಯಿ ಮತ್ತು ಮಗನನ್ನು ಅಮಾನುಷವಾಗಿ ಥಳಿಸಲಾಯಿತು. ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಪೋಲೀಸ್ ಮತ್ತು ಆಡಳಿತ ಕಾನೂನುಬದ್ಧ ಜಾನುವಾರು ವ್ಯವಹಾರದಲ್ಲಿ ಅಥವ ಮಾಂಸ ಮಾರಾಟದಲ್ಲಿ ತೊಡಗಿರುವವರ ವಿರುದ್ಧ ವರ್ತಿಸುತ್ತವೆ, ಆದರೆ ಕಾವಲುಕೋರ ಹಿಂಸಾಚಾರಿಗಳನ್ನು ರಕ್ಷಿಸಲು ಸಾಧ್ಯವಾದದನ್ನೆಲ್ಲ ಮಾಡುತ್ತವೆ.

ನರೇಂದ್ರ ಮೋದಿಯವರಿಗೆ ಮೇ 2014ರಲ್ಲಿ ಅವರು ಮತ್ತು ಅವರ ಪಕ್ಷ ನೀಡಿದ ವಿವಿಧ ಭರವಸೆಗಳ ಈಡೇರಿಕೆಯ– ಪ್ರತಿವರ್ಷ ಎರಡು ಕೋಟಿ ಉದ್ಯೋಗ ನಿರ್ಮಾಣ ಮತ್ತು ರೈತರಿಗೆ ಉತ್ಪಾದನಾ ಖರ್ಚಿನ ಒಂದೂವರೆ ಪಟ್ಟಿಗೆ ಕಡಿಮೆಯಿಲ್ಲದಂತೆ ಫಲದಾಯಕ ಬೆಲೆ ನೀಡುವುದರ– ಬಗ್ಗೆ ಹೇಳಲು ಏನೂ ಇರಲಿಲ್ಲ.

ನಿಜ ಹೇಳಬೇಕೆಂದರೆ, ಅ'ಚ್ಛೇ ದಿನ್' ಮಂತ್ರವನ್ನು ಹೊರಗೆಸೆದು 2019 ಲೋಕಸಭಾ ಚುನಾವಣೆಯ ಮೇಲೆ ಕಣ್ಣಿಟ್ಟು ಹೊಸದೊಂದು ಮಂತ್ರೋಚ್ಚಾರಣೆ ಆರಂಭ ಮಾಡಲಾಗಿದೆ. 2022ರೊಳಗೆ, ಅಂ–ದರೆ ಸ್ವಾತಂತ್ರ್ಯದ 75ನೇ ವಾರ್ಷಿಕೋತ್ಸವದ ವೇಳೆಗೆ 'ನವಭಾರತ'ದ ಭರವಸೆಯನ್ನು ಜನಗಳಿಗೆ ತೋರಿಸಲಾಗುತ್ತಿದೆ. ಐದು ವರ್ಷಗಳಲ್ಲಿ ಒಂದು 'ನವಭಾರತ'ದ ದಾವೆ ಈಡೇರುತ್ತದೆ ಎಂದು ಹೇಳಲು ಸಾಧ್ಯವಾಗಬೇಕಾದರೆ ಅತ್ಯುನ್ನತ ಮಟ್ಟದ ಹುಸಿ ಆತ್ಮವಿಶ್ವಾಸವೇ ಬೇಕು. ಇದು ವಾಸ್ತವದಿಂದ ಬಹಳ ದೂರವಿದ್ದಾಗ ಮಾತ್ರ ಸಾಧ್ಯ.

ಸ್ವಾತಂತ್ರ್ಯದ 70ನೇ ವಾರ್ಷಿಕೋತ್ಸವದ ಆಚರಣೆ ಗೋರಖಪುರದ ಬಿಆರ್‌ಡಿ ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಿ 65 ಮಕ್ಕಳ ಸಾವಿನ ದುರಂತದ ಕರಿನೆರಳಿನಲ್ಲಿ ನಡೆದಿದೆ. ಆಗಸ್ಟ್ 15 ರ ಹಿಂದಿನ ವಾರದಲ್ಲಿ ಈ ದುರಂತ ಸಂಭವಿಸಿತು. ಪ್ರಧಾನ ಮಂತ್ರಿಗಳು ದುಃಖತಪ್ತ ಕುಟುಂಬಗಳಿಗಾದ ನಷ್ಟಕ್ಕೆ ಸಂತಾಪವನ್ನೇನೋ ವ್ಯಕ್ತಪಡಿಸಿದರು. ಆದರೆ ಉತ್ತರಪ್ರದೇಶದಲ್ಲಿ ಮತ್ತು ದೇಶದಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ದುಸ್ಥಿತಿ ಐದು ವರ್ಷಗಳಲ್ಲಿ 'ನವಭಾರತ'ದ ನಿರೀಕ್ಷೆಯನ್ನು ಹುಸಿಗೊಳಿಸುತ್ತಿದೆ. ಸಾರ್ವಜನಿಕ ಆರೋಗ್ಯದ ಮೇಲೆ ಜಾಗತಿಕವಾಗಿ ಸರಾಸರಿ ಜಿಡಿಪಿಯ 5.99% ದಷ್ಟು ಖರ್ಚು ಮಾಡಲಾಗುತ್ತಿದೆ. ಆದರೆ ಭಾರತದಲ್ಲಿ ಇದು ಕೇವಲ 1.2%. 2017ರ ರಾಷ್ಟ್ರೀಯ ಆರೋಗ್ಯ ಧೋರಣೆ ಕೂಡ ಸಾರ್ವಜನಿಕ ಆರೋಗ್ಯದ ಮೇಲಿನ ಖರ್ಚು 2025ರ ವೇಳೆಗೆ 2.5% ವಾಗುವ ಗುರಿಯನ್ನಷ್ಟೇ ಇಟ್ಟುಕೊಂಡಿದೆ.

ಇಡೀ ದೇಶಕ್ಕೆ ಇಷ್ಟೊಂದು ಮಕ್ಕಳ ಸಾವುಗಳು ಮಾತ್ರವೇ ಅಲ್ಲ, ಉತ್ತರಪ್ರದೇಶದ ಆದಿತ್ಯನಾಥ ಸರಕಾರದ ನಿರ್ಲಕ್ಷ್ಯ ಕೂಡ ಭಾರೀ ಆಘಾತವನ್ನುಂಟು ಮಾಡಿವೆ. ಗೋರಖಪುರ ಆಸ್ಪತ್ರೆಯಲ್ಲಿ ಮಕ್ಕಳ ಸಾವುಗಳು ಮುಂದುವರೆಯುತ್ತಿದ್ದಾಗಲೇ, ಆದಿತ್ಯನಾಥ ರಾಜ್ಯದಲ್ಲಿ ಒಂದು ಭವ್ಯ ಜನ್ಮಾಷ್ಟಮಿ ಆಚರಣೆಗೆ ಕರೆ ನೀಡಿದರು. ಪೋಲೀಸರು ಕೂಡ ಸುಯೋಗ್ಯ ರೀತಿಯಲ್ಲಿ ಜನ್ಮಾಷ್ಟಮಿ ಆಚರಿಸುವಂತೆ ಆದೇಶವನ್ನೂ ಕೊಟ್ಟರು. ಈ ನಿರ್ದೇಶನದ ಪ್ರಕಾರ ಪೋಲಿಸ್ ಮಹಾ ನಿರ್ದೇಶಕರು ಇಡೀ ಪೋಲೀಸ್ ಪಡೆಗೆ ಸೂಕ್ತ ಸೂಚನೆಗಳನ್ನು ಕೂಡ ಕೊಟ್ಟರು.

ಇಲ್ಲೊಂದು ದ್ವಿವಿಧ' ಅಪಹಾಸ್ಯವಿದೆ– ಗೋರಖಪುರದ ಮಕ್ಕಳು ಮತ್ತು ಅವರ ಕುಟುಂಬಗಳ ಸಂಕಟಗಳ ಬಗ್ಗೆ ಭಂಡ ನಿರ್ಲಕ್ಷ್ಯ ಮತ್ತು ಒಂದು ಮತೀಯ ಹಬ್ಬವನ್ನು ಬಳಸಿಕೊಂಡು ಅದನ್ನು ಪೋಲಿಸ್ ಪಡೆ ಅಧಿಕೃತವಾಗಿ ಆಚರಿಸುವಂತೆ ಮಾಡಿ ಸಂವಿಧಾನಿಕ ಮೌಲ್ಯಗಳನ್ನು ಬುಡಮೇಲು ಮಾಡುವುದು.

ಹೀಗೆ ಸ್ವಾತಂತ್ರ್ಯ ದಿನ ಮೋದಿಯವರು ಕೆಂಪು ಕೋಟೆಯಿಂದ ನೀಡುವ ಉಪದೇಶಗಳು ಮತ್ತು ಅವುಗಳ ವಾಸ್ತವ ಆಚರಣೆಗಳ ನಡುವೆ ಅಗಾಧ ಅಂತರವಿದೆ ಎಂಬುದನ್ನು ತೋರಿಸುತ್ತದೆ.

ತ್ರಿಪುರ ಮುಖ್ಯಮಂತ್ರಿಗಳ ಸ್ವಾತಂತ್ರ್ಯ ದಿನದ ಭಾಷಣದ ಸೆನ್ಸಾರ್

ತುರ್ತು ಪರಿಸ್ಥಿತಿಯ ದಿನಗಳನ್ನು ನೆನಪಿಸುವ ಕ್ರಮ–ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ದೂರದರ್ಶನ ಮತ್ತು ಆಕಾಶವಾಣಿ ತ್ರಿಪುರದ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್‌ರವರ ಸ್ವಾತಂತ್ರ್ಯ ದಿನದ ಭಾಷಣವನ್ನು ಪ್ರಸಾರ ಮಾಡಲು ನಿರಾಕರಿಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಈ ಸಂದರ್ಭದ ಅವರ ಭಾಷಣವನ್ನು ದೂರದರ್ಶನ ಮತ್ತು ಆಕಾಶವಾಣಿ ಮುದ್ರಿಸಿಕೊಂಡಿತ್ತು. ಆದರೆ ನಂತರ ಅದನ್ನು ಮುದ್ರಿಸಿಕೊಂಡಂತೆ ಪ್ರಸಾರ ಮಾಡಲು ಸಾಧ್ಯವಿಲ್ಲ, ಅದನ್ನು 'ಪುನರ್ರೂಪಿಸಬೇಕು' ಎಂದು ಅವರಿಗೆ ತಿಳಿಸಿದವು.

ಇದು ಒಬ್ಬ ಮುಖ್ಯಮಂತ್ರಿ ಸ್ವಾತಂತ್ರ್ಯ ದಿನದಂದು ತನ್ನ ರಾಜ್ಯದ ಜನಗಳನ್ನು ಉದ್ದೇಶಿಸಿ ಮಾತಾಡುವ ಹಕ್ಕಿನ ಸಾರಾಸಗಟು ಉಲ್ಲಂಘನೆಯಾಗಿದೆ. ಇದು ತುರ್ತುಪರಿಸ್ಥಿತಿಯ ದಿನಗಳನ್ನು ನೆನಪಿಸುತ್ತದೆ. ಅದಕ್ಕಿಂತಲೂ ಮುಂದೆ ಹೋಗಿ ಒಂದು ರಾಜ್ಯದ ಚುನಾಯಿತ ಮುಖ್ಯಮಂತ್ರಿಗಳ ಬಾಯಿಯನ್ನೇ ಮುಚ್ಚಿಸುವ ಪ್ರಯತ್ನ ಮಾಡಿದೆ. ಕೇಂದ್ರ ಸರಕಾರ ಇಂತಹ ಸೆನ್ಸಾರ್‌ಶಿಪ್ ಮೂಲಕ ದೂರದರ್ಶನ/ ಆಕಾಶವಾಣಿ ಮತ್ತು ಪ್ರಸಾರ ಭಾರತಿಯ ಸ್ವಾಯತ್ತತೆಯನ್ನು ತುಳಿದು ಹಾಕಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಟೀಕಿಸಿದೆ.

ಈ ಪ್ರಸಾರವನ್ನು ನಿಷೇಧಿಸಲು ಹೊಣೆಗಾರರಾದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅದು ಆಗ್ರಹಿಸಿದೆ. ಮೋದಿ ಸರಕಾರ ಪ್ರಸಾರ ಭಾರತಿಯನ್ನು ಸಮಾಚಾರ ಮತ್ತು ಪ್ರಸಾರ ಮಂತ್ರಾಲಯದ ಒಂದು ವಿಭಾಗದಂತೆ ಕಾಣುವುದನ್ನು ನಿಲ್ಲಿಸಬೇಕು ಎಂದು ಅದು ಹೇಳಿದೆ.

ಅತ್ತ ಸಹಕಾರಿ ಒಕ್ಕೂಟತತ್ವ ಎಂಬ ಜಪ, ಇತ್ತ ಮುಖ್ಯಮಂತ್ರಿಯ ದನಿ ಅಡಗಿಸಲು ಚಮಚಾಗಳಿಗೆ ಸೂಚನೆ–ಯೆಚುರಿ

ಈ ಕ್ರಮವನ್ನು ಬಲವಾಗಿ ಟೀಕಿಸುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ದೂರದರ್ಶನ ಬಿಜೆಪಿ ಅಥವ ಆರೆಸ್ಸೆಸ್‌ನ ಸ್ವಂತ ಆಸ್ತಿಯಲ್ಲ, ತ್ರಿಪುರ ಮುಖ್ಯಮಂತ್ರಿಗಳ ಭಾಷಣವನ್ನು ಪ್ರಸಾರ ಮಾಡಲು ಅದು ನಿರಾಕರಿಸಿರುವುದು ಪ್ರಜಾಪ್ರಭುತ್ವ–ವಿರೋಧಿ ಮತ್ತು ಕಾನೂನುಬಾಹಿರ ಎಂದು ಹೇಳಿದ್ದಾರೆ. ಪ್ರಧಾನ ಮಂತ್ರಿಗಳು ಸಹಕಾರಿ ಒಕ್ಕೂಟ ತತ್ವದ ಜಪ ಮಾಡುತ್ತಾರೆ, ಇನ್ನೊಂದೆಡೆಯಲ್ಲಿ ಮುಖ್ಯಮಂತ್ರಿಗಳೂ ಸೇರಿದಂತೆ ಪ್ರತಿಪಕ್ಷಗಳವರ ದನಿಗಳು ಜನತೆಗೆ ತಲುಪದಂತೆ ಮಾಡಬೇಕೆಂದು ತನ್ನ ಚಮಚಾಗಳಿಗೆ ಸೂಚನೆ ನೀಡುತ್ತಾರೆ. ಇದು ಸರ್ವಾಧಿಕಾರಶಾಹಿಯಲ್ಲದೆ, ಅಘೋಷಿತ ತುರ್ತು ಪರಿಸ್ತಿತಿಯಲ್ಲದೆ ಇನ್ನೇನು ಎಂದು ಅವರು ಪ್ರಶ್ನಿಸಿದ್ದಾರೆ. ಇದರ ವಿರುದ್ಧ ಸಿಪಿಐ(ಎಂ), ತ್ರಿಪುರಾದ ಜನತೆ ಮತ್ತು ನಮ್ಮ ಎಲ್ಲನಾಗರಿಕರು ಹೋರಾಡುತ್ತಾರೆ ಎಂದು ಅವರು ಎಚ್ಚರಿಸಿದ್ದಾರೆ.



ವ್ಯಂಗ್ಯಚಿತ್ರ: ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

ಮೆಟ್ರೋ ರೈಲು ಯೋಜನೆಗಳಲ್ಲಿ ಪಿ.ಪಿ.ಪಿ. ನಮೂನೆಯ ಗೀಳು

ಕೇಂದ್ರ ಸಂಪುಟ ಮೆಟ್ರೋ ರೈಲು ಯೋಜನೆಗಳಲ್ಲಿ ಇನ್ನು ಮುಂದೆ ರಾಜ್ಯ ಸರಕಾರಗಳು ಖಾಸಗಿಯವರನ್ನು ಒಳಗೊಳ್ಳಬೇಕು, ಅಂದರೆ ಇವು ನವ-ಉದಾರಿಗಳ ಕುಖ್ಯಾತ 'ಪಿಪಿಪಿ' ನಮೂನೆಯನ್ನು ಅನುಸರಿಸಬೇಕು ಎಂದು ತಾಕೀತು ಮಾಡಲು ನಿರ್ಧರಿಸಿರುವುದಾಗಿ ವರದಿಯಾಗಿದೆ.

ಇದನ್ನು ಬಲವಾಗಿ ಖಂಡಿಸಿರುವ ಈ ಕ್ಷೇತ್ರದಲ್ಲಿ ಅಪಾರ ಅನುಭವ ಇರುವ 'ಭಾರತದ ಮೆಟ್ರೋ ಮನುಷ್ಯ' ಎನಿಸಿಕೊಂಡಿರುವ ಇ.ಶ್ರೀಧರನ್ "ನೀತಿ ಆಯೋಗದಲ್ಲಿ ಕೂತಿರುವ ಮೆಟ್ರೋ ರೈಲು ಕಟ್ಟುವುದು, ನಡೆಸುವುದು ಹೇಗೆ ಎಂದು ಏನೇನೂ ಅನುಭವವಿಲ್ಲದವರು ಯಾರೋ ಈ ಧೋರಣೆಯನ್ನು ರೂಪಿಸಿರುವಂತೆ ಕಾಣಿಸುತ್ತದೆ" ಎಂದಿದ್ದಾರೆ.

ಇದೊಂದು ಹಿಮ್ಮುಖ ಚಲನೆಯ ಕ್ರಮ ಎಂದಿರುವ ಅವರು "ಇದು ಅತ್ಯಂತ ವಿನಾಶಕಾರಿ. ಪಿಪಿಪಿ ನಮೂನೆಗೆ ಹೋಗಿ ಹಣವನ್ನು ಎತ್ತುವ ಕೆಲಸವನ್ನು ರಾಜ್ಯಗಳಿಗೆ ದಾಟಿಸುವುದು ಎಲ್ಲಾ ಮೆಟ್ರೋ ಪ್ರಾಜೆಕ್ಟ್‌ಗಳನ್ನು ಬಾಧಿಸುತ್ತದೆ. ಹಲವು ನಗರಗಳ ಮೆಟ್ರೋ ಆಕಾಂಕ್ಷೆಗಳ ಮೇಲೆ ಪರದೆ ಎಳೆದಂತಾಗುತ್ತದೆ" ಎಂದು ಅವರು ಹೇಳಿದ್ದಾರೆ.

ಮೆಟ್ರೊ ರೈಲು ಯೋಜನೆಯ ವಿವಿಧ ಭಾಗಗಳನ್ನು ವಿಂಗಡಿಸಿ ಅದನ್ನು ನಡೆಸುವುದನ್ನು, ನೋಡಿಕೊಳ್ಳುವುದನ್ನು ಖಾಸಗಿಯವರಿಗೆ ವಹಿಸಿಕೊಡುವುದರಿಂದ ಆ ಮೂರನೆಯವರಿಗೆ ಮಾತ್ರ ಪ್ರಯೋಜನ ಎಂದು ಅವರು ಹೇಳಿದ್ದಾರೆ.ಜಗತ್ತಿನಲ್ಲೆಲ್ಲೂ ಮೆಟ್ರೊ ರೈಲು ಯೋಜನೆಗಳಲ್ಲಿ ಪಿಪಿಪಿ ನಮೂನೆ ಯಶಸ್ವಿಯಾಗಿಲ್ಲ ಎಂದ ಅವರು ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳ ನಡುವಿನ ಈಗಿನ ಜಂಟಿ ಉದ್ಯಮ(ಜೆವಿ) ಮಾದರಿ ದೇಶದಲ್ಲಿ ಸಾಕಷ್ಟು ಯಶಸ್ವಿಯಾಗಿದೆ ಎಂದಿದ್ದಾರೆ.

ಅಷ್ಟೇ ಅಲ್ಲ, ಖಾಸಗಿಯವರನ್ನು ಒಳಗೊಂಡಿರುವ ದೇಶದಲ್ಲಿನ ಇದುವರೆಗಿನ ಮೂರು ಯೋಜನೆಗಳು ವಿಫಲವಾಗಿವೆ ಎಂಬುದೂ ಗಮನಾರ್ಹ(ನ್ಯೂಸ್‌ಕ್ಲಿಕ್.ಇನ್, ಆಗಸ್ಟ್ 19). ಇವೆಂದರೆ ದಿಲ್ಲಿಯ ಏರ್‌ಪೋರ್ಟ್ ಎಕ್ಸ್‌ಪ್ರೆಸ್ ಲೈನ್, ಮುಂಬೈ ಮೆಟ್ರೊ ಲೈನ್1 ಮತ್ತು ಹೈದರಾಬಾದ್ ಮೆಟ್ರೊ.ಮೊದಲ ಎರಡರಲ್ಲಿ ಅಂಬಾನಿ ಗುಂಪಿನ ರಿಲಯನ್ಸ್ ಇನ್‌ಫ್ರಾಸ್ಟ್ರಕ್ಚರ್ ಪಾಲುದಾರರು, ಮೂರನೇಯದರಲ್ಲಿ ಎಲ್‌ಅಂಡ್ ಟಿ. ದಿಲ್ಲಿಯ ಏರ್‌ಪೋರ್ಟ್ ಎಕ್ಸ್‌ಪ್ರೆಸ್ ಯೋಜಿತ ಗಡುವನ್ನು ನಾಲ್ಕು ಬಾರಿ ವಿಸ್ತರಿಸಿದ ನಂತರ ಫೆಬ್ರುವರಿ 2011 ರಿಂದ ಕೊನೆಗೂ ಆರಂಭವಾದ ಪ್ರಾಜೆಕ್ಟ್ ಜುಲೈ 2012ರಲ್ಲಿ ನಿಂತು ಹೋಯಿತು, ನಷ್ಟ ವಾಗುತ್ತಿದೆ ಎಂದು. ಏಳು ತಿಂಗಳು ಮುಚ್ಚಿದ್ದ ನಂತರ ದಿಲ್ಲಿ ಮೆಟ್ರೋವೇ ಅದನ್ನು ವಹಿಸಿಕೊಳ್ಳಬೇಕಾಯಿತು.

ಮುಂಬೈ ಮೆಟ್ರೊ ಲೈನ್1ರ 11 ಕಿ.ಮಿ. ಮೆಟ್ರೋ ಕಟ್ಟಲು 7 ವರ್ಷಗಳು ಬೇಕಾದವು. ಈಗ ಅತಿ ಹೆಚ್ಚು ಟಿಕೆಟ್ ದರ ವಿಧಿಸಿದರೂ ದಿನಕ್ಕೆ 50 ಲಕ್ಷ ರೂ. ನಷ್ಟ ಮಾಡುತ್ತಿದೆಯಂತೆ.

ಹೈದರಾಬಾದ್ ಮೆಟ್ರೋ 2012ರಲ್ಲಿ ಆರಂಭವಾಗಿದ್ದು ಇನ್ನೂ ಮುಗಿದಿಲ್ಲ, ಇನ್ನೂ 17 ತಿಂಗಳ ವರೆಗೆ ಗಡುವು ವಿಸ್ತರಿಸಲಾಗಿದೆ.

ಇದು ಪಿಪಿಪಿ ನಮೂನೆಯ ಇದುವರೆಗಿನ ಅನುಭವ. ಆದರೂ ಏಕೆ ಈ ಪಿಪಿಪಿ ಗೀಳು? ಇಷ್ಟೇ ಅಲ್ಲ, ಈ ಹೊಸ ಮೆಟ್ರೋ ನೀತಿಯಲ್ಲಿ ರಾಜ್ಯ ಸರಕಾರಗಳು ಕಾಲಕಾಲಕ್ಕೆ ದರಗಳನ್ನು ಪರಿಷ್ಕರಿಸಲು (ಅಂದರೆ ಹೆಚ್ಚಿಸಲು) ಖಾಯಂ 'ದರ ನಿಗದಿ ಪ್ರಾಧಿಕಾರ'ವನ್ನು ರಚಿಸಬೇಕು ಎಂದೂ ತಾಕೀತು ಮಾಡಲಾಗಿದೆ!

ಕಾರ್ಪೊರೇಟ್ ವಂತಿಗೆಗಳಲ್ಲಿ ಸಿಂಹಪಾಲು ಅಚ್ಛೇ ದಿನ್ ತರಲು!

ಅಸೋಸಿಯೇಶನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್(ಎಡಿಆರ್) ಕಲೆ ಹಾಕಿದ ಮಾಹಿತಿಗಳ ಪ್ರಕಾರ 2012-13ರ ಮತ್ತು 2015-16ರ ನಡುವೆ ದೇಶದ ಐದು ರಾಷ್ಟ್ರೀಯ ಪಕ್ಷಗಳು ಪಡೆದ 20,000ರೂ.ಗಳಿಗಂತ ಹೆಚ್ಚಿನ ವಂತಿಗೆಗಳ ಮೊತ್ತ 1070.68 ಕೋಟಿ ರೂ. ಅದರಲ್ಲಿ 89% ಅಂದರೆ 956.77 ಕೋಟಿ ರೂ. ಕಾರ್ಪೊರೇಟ್ ವಂತಿಗೆಗಳು. ಇದರಲ್ಲಿ ಬಿಜೆಪಿಯ ಪಾಲೇ 705.81 ಕೋಟಿ ರೂ. ಅಂದರೆ 74%. ನಂತರದ ಸ್ಥಾನ ಕಾಂಗ್ರೆಸಿನದ್ದು, 198.16 ಕೋಟಿ ರೂ. ಅಂದರೆ 20% ಅಂದರೆ ಈಗಿನ ಆಳುವ ಪಕ್ಷದ ಪಾಲು ಹಿಂದಿನ ಆಳುವ ಪಕ್ಷದ ಪಾಲಿಗಿಂತ ಮೂರೂವರೆ ಪಟ್ಟು ಹೆಚ್ಚು!

384.04 ಕೋಟಿ ರೂ. ವಂತಿಗೆಗಳ ಪಿಎಎನ್ ವಿವರಗಳನ್ನು, 355.08 ಕೋಟಿ ರೂ. ವಂತಿಗೆಗಳ ವಿಳಾಸಗಳನ್ನು ಕೊಟ್ಟಿಲ್ಲ, ಇವುಗಳಲ್ಲಿ 99% ಬಿಜೆಪಿಗೆ ಬಂದವುಗಳು! ಬಿಜೆಪಿಗೆ ವಂತಿಗೆ ನೀಡಿದ ಕಾರ್ಪೊರೇಟ್‌ಗಳ ಸಂಖ್ಯೆ 2987, ಕಾಂಗ್ರೆಸ್‌ನ ಕಾರ್ಪೊರೇಟ್ ವಂತಿಗೆದಾರರ ಸಂಖ್ಯೆ 167.


ಇನ್ನಷ್ಟು ಅಂಕಿ-ಅಂಶಗಳನ್ನು ನೋಡಿ.

* ಇದರ ಹಿಂದಿನ ಎಂಟು ವರ್ಷಗಳಲ್ಲಿ ಕಾರ್ಪೊರೇಟ್ ವಂತಿಗೆಗಳ ಮೊತ್ತ 378.8 ಕೋಟಿ ರೂ. ಅಂದರೆ ಈ ನಾಲ್ಕು ವರ್ಷಗಳಲ್ಲಿ ಪಡೆದ ವಂತಿಗೆಗಳ ಸುಮಾರು ಮೂರನೇ ಒಂದರಷ್ಟು ಮಾತ್ರ.
* ಈ ನಾಲ್ಕು ವರ್ಷಗಳಲ್ಲೂ ಅತಿ ಹೆಚ್ಚು ಅಂದರೆ 573.18 ಕೋಟಿ ರೂ. ವಂತಿಗೆಗಳು ಬಂದದ್ದು 2014-15ರಲ್ಲಿ, ಅದರ ಹಿಂದಿನ ವರ್ಷ 224.6 ಕೋಟಿ ರೂ. ಅಂದರೆ 84% ಈ ಎರಡು ಚುನಾವಣಾ ವರ್ಷಗಳಲ್ಲೇ! ಯಾರು, ಯಾಕಾಗಿ ಕೊಟ್ಟರು, ಅಚ್ಛೇ ದಿನ್‌ಗಳ ಪಾರದರ್ಶಕತೆ ಮತ್ತು ಪ್ರಾಮಾಣಿಕತೆಯೆಂದರೆ ಇದೇ ಏನು ಎಂಬಿತ್ಯಾದಿ ಪ್ರಶ್ನೆಗಳು ಏಳುವುದು ಸಹಜ ತಾನೇ? ಬಹುಶಃ ಈ ಪ್ರಶ್ನೆಗಳು ಇನ್ನು ಮುಂದೆ ಬರದಿರಲಿ ಎಂದು ಕಾರ್ಪೊರೇಟ್ ವಂತಿಗೆಗಳನ್ನು ಇನ್ನಷ್ಟು ಅಪಾರದರ್ಶಕಗೊಳಿಸುವ ಚುನಾವಣಾ ಬಾಂಡ್ ವ್ಯವಸ್ಥೆ ಬರುತ್ತಿದೆ!

ಪಿಪಿಪಿ ಗೀಳಿಗೆ ಉತ್ತರ ಇಲ್ಲಿದೆಯೇ?

ಆಗ 'ಅಚ್ಛೇದಿನ್', ಈಗ '2022ರೊಳಗೆ ನವಭಾರತ' ಆಗ 'ಜುಮ್ಲಾ', ಈಗ 'ಕೋರ್ಟ್ ಬ್ಯಾಂಟರ್'!

ಖಾಸಗಿತನ ಮೂಲಭೂತ ಹಕ್ಕು ಎಂದು ಸುಪ್ರಿಂ ಕೋರ್ಟ್‌ನ ಸಂವಿಧಾನ ಪೀಠ ಒಮ್ಮತದಿಂದ ಎತ್ತಿ ಹಿಡಿದ ನಂತರ 'ಅಚ್ಛೇ ದಿನ್' ಐಟಿ ಮಂತ್ರಿಗಳು ಇದು ಮೂಲಭೂತ ಹಕ್ಕು ಎಂಬುದೇ ಎಂದಿಗೂ ತಮ್ಮ ಸರಕಾರದ ನಿಲುವಾಗಿತ್ತು ಎಂದು ಟ್ವೀಟ್ ಮಾಡಿ ತಮಾಷೆಯ ವಸ್ತುವಾಗಿ ಬಿಟ್ಟರೂ ಧೃತಿಗೆಡದೆ ಅವಸರದಲ್ಲಿ ಪತ್ರಿಕಾ ಸಮ್ಮೇಳನ ಕರೆದು ಅದನ್ನು ಪುನರುಚ್ಚರಿಸಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ನಿಮ್ಮ ಪರವಾಗಿ ನ್ಯಾಯಾಲಯದಲ್ಲಿ ವಾದಿಸಿದ ಅಟಾರ್ನಿ ಜನರಲ್‌ಗಳು ಅದು ಮೂಲಭೂತ ಹಕ್ಕು ಅಲ್ಲ ಎಂದೇ ವಾದಿಸಿಕೊಂಡು ಬಂದಿದ್ದಾರಲ್ಲ ಎಂದು ಕೇಳಿದಾಗ ಅದು ಕೇವಲ 'ಕೋರ್ಟ್ ಬ್ಯಾಂಟರ್' ಅಂದರೆ 'ನ್ಯಾಯಾಲಯ'ದಲ್ಲಿನ ಕುಚೋದ್ಯ'ದ ಮಾತು ಎಂದು ಟಿಪ್ಪಣಿ ಮಾಡುತ್ತ ಇದು ಲಂಡನ್, ವಾಶಿಂಗ್ಟನ್‌ನಲ್ಲೂ ನಡೆಯುತ್ತದೆ ಎಂದು ವಿದೇಶಿ ಸಮರ್ಥನೆಗಳನ್ನು ನೀಡಿದರು!



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

ಐಟಿ ಮಂತ್ರಿಗಳು ಮುಂದುವರೆದು 2016 ರಲ್ಲಿ ಹಣಕಾಸು/ರಕ್ಷಣಾ ಮಂತ್ರಿಗಳು 'ಬಹುಶ: ಇದು ಮೂಲಭೂತ ಹಕ್ಕು' ಎಂದು ಹೇಳಿದ್ದರೆಂದು ದೇಶೀ ಸಮರ್ಥನೆಯನ್ನೂ ನೀಡಿದರು. ಆದರೆ ಅದೇ ಕಾರಣದಿಂದ ಖಾಸಗಿತನದ ಹಕ್ಕಿನ ಪ್ರಶ್ನೆಯಿರುವ 'ಆಧಾರ್' ಮಸೂದೆಯನ್ನು ಹಣಕಾಸು ಮಸೂದೆ'ಯಾಗಿ ತಂದದ್ದು ಎಂದೇನೂ ಸಮರ್ಥಿಸಿಕೊಳ್ಳುವ ಪ್ರಯತ್ನ ಮಾಡಲಿಲ್ಲ.

ಮೂಲಭೂತ ಹಕ್ಕು ಎಂಬುದೇ ಸರಕಾರದ ನಿಲುವಾಗಿದ್ದರೆ ಸುಪ್ರಿಂ ಕೋರ್ಟ್ ಇದಕ್ಕಾಗಿ ಸಂವಿಧಾನ ಪೀಠ ರಚಿಸಬೇಕಾಗಿ ಏಕೆ ಬಂತು ಎಂಬ ಪ್ರಶ್ನೆಯೂ ಕುಚೋದ್ಯವೇ?

ಅದಿರಲಿ, ತಲಾಖ್ ತೀರ್ಪು ಬಂದಾಗ ಅದನು ಸ್ವಾಗತಿಸಿದ ಪ್ರಧಾನ ಮಂತ್ರಿಗಳು ಈಗೇಕೆ ಮೌನವಾಗಿದ್ದಾರೆ, ಅವರಿಗೆ ಇದರ ಕೀರ್ತಿಯನ್ನು ಸಲ್ಲಿಸಿದ ಆಳುವ ಪಕ್ಷದ ಅಧ್ಯಕ್ಷರೂ ಏಕೆ ಮೌನವಾಗಿದ್ದಾರೆ, ಅಥವ ಅವರು ಈ ತೀರ್ಪಿನ ಕೀರ್ತಿಯನ್ನೂ ಪ್ರಧಾನಿಗಳಿಗೆ ಸಲ್ಲಿಸುತ್ತಾರೆಯೇ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ 'ಕುಚೋದ್ಯ' ಮಾಡಿದ್ದಾರೆ.

ಅಂದ ಹಾಗೆ ಈ ಹಿಂದೆ ಪ್ರತಿಯೊಬ್ಬನ ಬ್ಯಾಂಕ್ ಖಾತೆಗೆ 15 ಲಕ್ಷ ರೂ.2 ಕೋಟಿ ಉದ್ಯೋಗ ಇತ್ಯಾದಿಗಳು 'ಜುಮ್ಲಾ'ಗಳು ಅಂದರೆ ಚುನಾವಣಾ ಕಂತೆ ಎಂದು ಆ ಪದ 'ಅಚ್ಛೇ ದಿನ್' ಕುರುಹಾದಂತೆ ಇನ್ನು 'ಕೋರ್ಟ್ ಬ್ಯಾಂಟರ್' ಎಂಬುದೂ '2022ರೊಳಗೆ ನವಭಾರತ' ಎಂಬ ಹೊಸ ಘೋಷಣೆಯ ಕುರುಹು ಎಂದು ಇಟ್ಟುಕೊಳ್ಳಬಹುದೇ?



ಹೇಗಾದರೂ ಚುನಾವಣೆ ಗೆಲ್ಲುವುದೇ ಈಗ ಸಾಮಾನ್ಯ ಸಂಗತಿಯಾಗಿದೆ-ಚುನಾವಣಾ ಆಯುಕ್ತರ ಖೇದ

ಹೇಗಾದರೂ ಚುನಾವಣೆ ಗೆಲ್ಲಲೇ ಬೇಕು, ಶಾಸಕರ ಬೇಟೆ ಎಂಬುದು ಅನೈತಿಕವಲ್ಲ, ಬದಲಿಗೆ ಒಂದು 'ಸ್ಮಾರ್ಟ್' ರಾಜಕೀಯ, ಹಣದ ಆಮಿಷ ಮತ್ತು ಸರಕಾರೀ ಯಂತ್ರದ ಬಳಕೆ ಜಾಣತನದ ಲಕ್ಷಣ-ಎಂಬುದೆಲ್ಲ ಈಗ ಹೊಸ ಸಂಕಥನದ ಭಾಗವಾಗುತ್ತಿದೆ. ಇದನ್ನು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸುವವರೆಲ್ಲರೂ ಗಮನಿಸಬೇಕಾಗಿ, ಈ ಬಗ್ಗೆ ಬಲವಾದ ಕ್ರಮಗಳ ಬಗ್ಗೆ ಯೋಚಿಸಬೇಕಾಗಿದೆ ಎಂದು ಚುನಾವಣಾ ಆಯುಕ್ತ ಒ.ಪಿ.ರಾವತ್ 'ಚುನಾವಣಾ ಮತ್ತು ರಾಜಕೀಯ ಸುಧಾರಣೆಗಳನ್ನು ಕುರಿತ ಪ್ರಾದೇಶಿಕ ಸಮಾಲೋಚನೆ'ಯಲ್ಲಿ ಭಾಗವಹಿಸಿದ್ದವರನ್ನು ಉದ್ದೇಶಿಸಿ ಮಾತಾಡುತ್ತ ಹೇಳಿದ್ದಾರೆ.

"ಗೆದ್ದವರು ಯಾವ ಪಾಪವನ್ನೂ ಮಾಡುವುದಿಲ್ಲ; ಆಳುವ ಬಣಕ್ಕೆ ಪಕ್ಷಾಂತರ ಮಾಡುವವನ ಎಲ್ಲ ತಪ್ಪುಗಳಿಗೂ, ಬಹುಶಃ ಅಪರಾಧಗಳಿಗೂ ಮಾಫಿ, ಇದೀಗ 'ಹೊಸ ಸಾಮಾನ್ಯ ಸಂಗತಿ'. ಎಲ್ಲ ರಾಜಕೀಯ ಪಕ್ಷಗಳು, ರಾಜಕಾರಣಿಗಳು, ಮಾಧ್ಯಮಗಳು, ನಾಗರಿಕ ಸಂಘಟನೆಗಳು, ಸಂವಿಧಾನಿಕ ಅಧಿಕಾರಿಗಳು, ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವ ಎಲ್ಲರೂ ಒಂದು ಉತ್ತಮ ಭವಿಷ್ಯಕ್ಕಾಗಿ ಉತ್ತಮ ಚುನಾವಣೆಯ ದೃಷ್ಟಿಯಿಂದ ಇದನ್ನು ಕಠಿಣ ಕ್ರಮಕ್ಕೆ ಗುರಿಪಡಿಸಬೇಕು" ಎಂದು ಅವರು ಕಳಕಳಿಯಿಂದ ಹೇಳಿರುವುದಾಗಿ ವರದಿಯಾಗಿದೆ.

ಕೆಲವೇ ದಿನಗಳ ಹಿಂದೆ ಗುಜರಾತಿನ ರಾಜ್ಯಸಭಾ ಚುನಾವಣೆಗಳ ಸಂದರ್ಭದಲಲಿ ಕೇಂದ್ರದ ಆಳುವ ಪಕ್ಷದ ಉಪಸ್ಥಿತಿಯಲ್ಲೇ ನಡೆದವಿದ್ಯಮಾನಗಳ ಹಿನ್ನೆಲೆಯಲ್ಲಿ ಅವರು ಇದನ್ನು ಹೇಳಿದ್ದಾರೋ ಗೊತ್ತಿಲ್ಲ.

ಛತ್ತೀಸ್‌ಗಡ ಗೋಶಾಲೆಯಲ್ಲಿ 200ಕ್ಕೂ ಹೆಚ್ಚು ಗೋವುಗಳ ಸಾವು

ಇದು ಅಚ್ಛೇ ದಿಇನ್ ಆಳ್ವಿಕೆಯ ರಾಜ್ಯದಿಂದ ಬಂದಿರುವ ಸುದ್ದಿ. ಇದು ನಡೆದಿರುವುದು ಬಿಜೆಪಿ ಮುಖಂಡರೊಬ್ಬರು ನಡೆಸುತ್ತಿರುವ ಗೋಶಾಲೆಯಲ್ಲಿ ಎಂದು ಹಿಂದುಸ್ತಾನ್ ಟೈಮ್ಸ್ (ಆಗಸ್ಟ್20)ವರದಿ ಮಾಡಿದೆ. ರಾಜ್ಪುರ್‌ದ ಶಗುನ್ ಗೋಶಾಲೆಯಲ್ಲಿ 200 ಗೋವುಗಳ ಹೆಣಗಳು ದೊರೆತರೆ, ಅಲ್ಲಿಂದ 15 ಕಿ.ಮೀ. ದೂರದ ಗೋದ್‌ಮರ್ರದ ಫೂಲ್‌ಚಂದ್ರ ಗೋಶಾಲೆಯಲ್ಲಿ ಇನ್ನೂ 70 ಹಾಗೂ ರಾನೊ ಎಂಬ ಹಳ್ಳಿಯ ಮಯೂರಿ ಗೋಶಾಲೆಯಲ್ಲಿ 20 ಹಸುಗಳ ಹೆಣಗಳು ದೊರೆತಿವೆ ಎಂದು ಈ ವರದಿ ಹೇಳುತ್ತದೆ.


ರಾಜ್ಯ ಅಧಿಕಾರಿಗಳು ಇದಕ್ಕೆ ಜುಮಲ್ ನಗರ ಪಂಚಾಯತ್‌ನ ಬಿಜೆಪಿ ಉಪಾಧ್ಯಕ್ಷ ಹರೀಶ್ ವರ್ಮ ಹೊಣೆ ಎಂದಿದ್ದಾರೆ. ಈತ ಆ ಗೋಶಾಲೆಗಳನ್ನು ನಡೆಸುತ್ತಿದ್ದಾರಂತೆ. ಅವರನ್ನು ಈಗ ಬಂಧಿಸಲಾಗಿದೆ. ಹುಲ್ಲು ಮತ್ತು ನೀರಿಲ್ಲದೆ ಅವು ಸತ್ತಿವೆ ಎಂದು ಹಳ್ಳಿಗರು ಹೇಳುತ್ತಿದ್ದಾರೆಂದು ತಿಳಿದುಬಂದಿದೆ.

ಮೊದಲು ಭಾರೀ ಮಳೆಯಿಂದ ಗೋಡೆ ಕುಸಿದು ಅವು ಸತ್ತವು ಎಂದು ಆತ ಹೇಳಿದರೆ, ನಂತರ ಗೋವಧೆಯನ್ನು ನಿಷೇಧಿಸಿರುವ 'ತಮ್ಮದೇ' ಸರಕಾರ ಕಳೆದ ವರ್ಷ ಈ ಗೋಶಾಲೆಗೆ ಕೊಡಬೇಕಾದ 10ಲಕ್ಷ ರೂ. ಕೊಟ್ಟಿಲ್ಲ ಎಂದು ಈಗ ದೂರುತ್ತಿದ್ದಾರಂತೆ.



ವ್ಯಂಗ್ಯಚಿತ್ರ: ಕೀರ್ತೀಶ್, ಬಿಬಿಸಿ ಹಿಂದಿ.ಕಾಂ.

ನೋಟು ನಿಷೇಧ ವಿಫಲ, ಜಿಡಿಪಿ ಬೆಳವಣಿಗೆ 3 ವರ್ಷಗಳಲ್ಲೇ ಅತಿ ಕಡಿಮೆ



ವ್ಯಂಗ್ಯ ಚಿತ್ರ: ಸತೀಶ್ ಆಚಾರ್ಯ

ಈ ವಾರ ಎರಡು ಆರ್ಥಿಕ ಶಾಕ್ ಗಳನ್ನು ಮೋದಿ ಸರಕಾರ ಎದುರಿಸಬೇಕಾಗಿ ಬಂದಿದೆ. ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಿದ ಮಾಹಿತಿಯ ಪ್ರಕಾರವೇ ನೋಟು ನಿಷೇಧದ ನಂತರ ಹೆಚ್ಚು ಕಡಿಮೆ ಪೂರ್ಣ ಮೌಲ್ಯದ ನೋಟುಗಳು ರಿಸರ್ವ್ ಬ್ಯಾಂಕ್ ಗೆ ವಾಪಸು ಬಂದಿವೆ. ಸರಕಾರದ ಆಗಿನ ಅಂದಾಜಿನ ಪ್ರಕಾರ ದೊಡ್ಡ ಪ್ರಮಾಣದ (ಶೇ. 20ಕ್ಕೂ ಹೆಚ್ಚು) ಕಪ್ಪು ಹಣವಾಗಿ ಶೇಖರಿಸಲ್ಪಟ್ಟ ನೋಟುಗಳು ವಾಪಸು ಬರುವುದಿಲ್ಲ. ಅಷ್ಟು ಕಪ್ಪು ಹಣ ನಾಶವಾಗುತ್ತದೆ. ಅಷ್ಟರ ಮಟ್ಟಿಗೆ ಭ್ರಷ್ಟಾಚಾರ ಮತ್ತು ಕಪ್ಪು ಆರ್ಥಿಕತೆಗೆ ಏಟು ಬೀಳುತ್ತದೆ. ಆದರೆ ರಿಸರ್ವ್ ಬ್ಯಾಂಕಿನ ಬಿಡುಗಡೆ ಮಾಡಿದ ಮಾಹಿತಿಯ ಪ್ರಕಾರ ಶೇ. 99 ರಷ್ಟು ನೋಟುಗಳು ಬ್ಯಾಂಕಿಗೆ ವಾಪಸಾಗಿವೆ. ಇದರಿಂದಾಗಿ ಮೋದಿ ಸರಕಾರದ ನೋಟು ನಿಷೇಧ ಕ್ರಮ ಪೂರ್ಣ ವಿಫಲ ಎಂದು ಅಧಿಕೃತವಾಗಿ ಒಪ್ಪಿಕೊಂಡಂತಾಗಿದೆ. ಈ ಬಗ್ಗೆ ವಿವರಗಳು ಆ ಮೇಲೆ.

ಏಪ್ರಿಲ್–ಜೂನ್ ತ್ರೈಮಾಸಿಕದ ಜಿಡಿಪಿ ಬೆಳವಣಿಗೆ ದರ ಶೇಕಡ 5.7ಕ್ಕೆ ಕುಸಿತವಾಗಿದೆ ಎಂಬುದು ಇನ್ನೊಂದು ಶಾಕ್. ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಶೇಕಡ 6.1ರಷ್ಟಿದ್ದ ಜಿಡಿಪಿ ದರ ಬೆಳವಣಿಗೆ ಈ ತ್ರೈಮಾಸಿಕದಲ್ಲಿ ಶೇಕಡ 0.4ರಷ್ಟು ಕುಸಿತ ಕಂಡಿದೆ. ಕಳೆದ ವರ್ಷ ಎಪ್ರಿಲ್–ಜೂನ್ ತ್ರೈಮಾಸಿಕದ ಜಿಪಿಡಿ ದರ ಬೆಳವಣಿಗೆ ಶೇಕಡ 7.9ರಷ್ಟಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷದ ಜಿಡಿಪಿ ದರ ಬೆಳವಣಿಗೆ ಶೇಕಡ 2.2ರಷ್ಟು ಕುಸಿತವಾಗಿದೆ. ಇದು ಕಳೆದ 3 ವರ್ಷಗಳಲ್ಲಿ ಅತ್ಯಂತ ಕಡಿಮೆ ಜಿಡಿಪಿ ಬೆಳವಣಿಗೆ ದರ. ನೋಟು ರದ್ದತಿ ಮತ್ತು ಜಿಎಸ್‌ಟಿ ಜಾರಿಯ ಪರಿಣಾಮ ಜಿಡಿಪಿ ದರ ಬೆಳವಣಿಗೆ ಕುಸಿದಿದೆ ಎಂದು ವಿಶ್ಲೇಷಿಸಲಾಗಿದೆ.

ಈ ಎರಡೂ ಒಟ್ಟಿಗೆ ಹೇಳುವದೇನೆಂದರೆ ಮೋದಿ ಸರಕಾರ ಭಾರತದ ಆರ್ಥಿಕತೆಯನ್ನು ನಿರ್ವಹಿಸುವಲ್ಲಿ ಪೂರ್ಣ ವೈಫಲ್ಯ ಕಂಡಿದೆ. ಅದು "ದಿಟ್ಟ ರಾಜಕೀಯ ಆರ್ಥಿಕ ಕ್ರಮಗಳು" ಎಂದು ಬಣ್ಣಿಸಿದ ಅವಸರದಲ್ಲಿ ರಾಜಕೀಯ ಕಾರಣಗಳಿಗೆ ಅತ್ಯಂತ ಕಳಪೆ ರೀತಿಯಲ್ಲಿ ಜಾರಿಗೆ ತಂದ ನೋಟು ನಿಷೇಧ ಮತ್ತು ಜಿ.ಎಸ್.ಟಿ.ಯ ನಿರ್ದಿಷ್ಟ ಸ್ವರೂಪಗಳೇ ಈ ದುರಂತಕ್ಕೆ ಕಾರಣ ಎಂಬುದು ಸಹ ಸ್ಪಷ್ಟವಾಗಹತ್ತಿದೆ.

ಈಗ ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಿದ ಮಾಹಿತಿ ಏನು? ಅದು ಹೇಗೆ ನೋಟು ನಿಷೇಧ ಪೂರ್ಣ ವೈಫಲ್ಯವನ್ನು ಹೇಗೆ ಸೂಚಿಸುತ್ತದೆ ಎಂದು ನೋಡೋಣ.

ಚಲಾವಣೆಯಲ್ಲಿರುವ 1000 ರೂ. ನೋಟುಗಳ ಮೌಲ್ಯ		
ದಿನಾಂಕ	ಮೌಲ್ಯ	ಶೇಕಡಾ
ನವೆಂಬರ್ 8, 2016	6.858 ಲಕ್ಷ ಕೋಟಿ ರೂ.	100 %
ಮಾರ್ಚ್ 31, 2017	8925 ಕೋಟಿ ರೂ.	1.3 %
ಬ್ಯಾಂಕಿಗೆ ವಾಪಸಾದ ನೋಟುಗಳ ಮೌಲ್ಯ	6.858 ಲಕ್ಷ ಕೋಟಿ ರೂ.	98.7 %

ಲೋಕಸಭಾದಲ್ಲಿ ಕೇಳಲಾದ ಪ್ರಶ್ನೆಗೆ ಉತ್ತರವಾಗಿ ಸಂತೋಷ ಕುಮಾರ್ ಗಂಗ್ವಾರ್, ಹಣಕಾಸು ರಾಜ್ಯ ಸಚಿವ ಉತ್ತರವಾಗಿ ನವೆಂಬರ್ 8, 2016ರಂದು 1000 ರೂ. ನೋಟುಗಳ ಮೌಲ್ಯ ರೂ. 6.858 ಲಕ್ಷ ಕೋಟಿ ರೂ. ಎಂದಿದ್ದರು. ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಿದ ವರದಿ ಪ್ರಕಾರ ಈಗ ಚಲಾವಣೆಯಲ್ಲಿರುವ 1000 ರೂ. ನೋಟುಗಳ ಮೌಲ್ಯ ರೂ. 8925 ಕೋಟಿ ರೂ. ಎಂದಿದೆ. ಇದರರ್ಥ 6.858 ಲಕ್ಷ ಕೋಟಿ ರೂ. ಮೌಲ್ಯದ 1000 ನೋಟುಗಳು ಬ್ಯಾಂಕಿಗೆ ವಾಪಸಾಗಿವೆ ಅಂತ. ಅಂದರೆ ನೋಟು ನಿಷೇಧದ ನಂತರ ಶೇ. 98.7 ರಷ್ಟು ನೋಟುಗಳು ವಾಪಸಾಗಿವೆ. ಕೇವಲ ಶೇ. 1.3 ನೋಟುಗಳು ವಾಪಸಾಗಿಲ್ಲ. ಭೂತಾನ್, ನೇಪಾಳ (ಇವೆರಡೂ ದೇಶಗಳಲ್ಲಿ ಭಾರತೀಯ ರೂಪಾಯಿ ಸ್ವೀಕರಿಸಲಾಗುತ್ತದೆ) ಮತ್ತು ಸಹಕಾರಿ ಬ್ಯಾಂಕುಗಳಲ್ಲಿರುವ ನೋಟುಗಳನ್ನು ಲೆಕ್ಕ ಹಾಕಿದರೆ ಶೇ.100 ಅಥವಾ ಇನ್ನೂ ಹೆಚ್ಚಾಗಬಹುದು ಎಂದು ಅಂದಾಜು ಮಾಡಲಾಗಿದೆ. ಉಳಿದ ಶೇ. 1.3 ವಿವಿಧ



ಕಾರಣಗಳಿಗಾಗಿ ಬ್ಯಾಂಕಿಗೆ ವಾಪಸು ಮಾಡಲು ಸಾಧ್ಯವಾಗದ ಜನಸಾಮಾನ್ಯರ ಹಣವೇ ಆಗಿರುವ ಸಾಧ್ಯತೆ ಹೆಚ್ಚು.

ಇದು 1000 ರೂ. ನೋಟಿನ ಕತೆ. ಹಾಗಾದರೆ 500 ರೂ. ನೋಟಿನ ಕತೆ? ಹೊಸ 500 ರೂ. ನೋಟುಗಳು ಬಿಡುಗಡೆ ಆಗಿರುವುದರಿಂದ, ಈ ವಿಧಾನದಿಂದ ಎಷ್ಟು 500 ರೂ. ನೋಟುಗಳನ್ನು ಬ್ಯಾಂಕಿಗೆ ವಾಪಸು ಮಾಡಲಾಯಿತು ಎಂಬುದು ಗೊತ್ತಾಗುವುದಿಲ್ಲ. ಆದರೆ ಅದು 1000 ರೂ. ನೋಟುಗಳಿಗಿಂತ ಭಿನ್ನವಾಗಿರುತ್ತವೆ ಎಂದು ನಿರೀಕ್ಷಿಸಲು ಯಾವುದೇ ಕಾರಣಗಳಿಲ್ಲ.

ವಾಪಸಾಗಿರುವ 500 ಮತ್ತು 1000 ರೂ. ನೋಟುಗಳೆಷ್ಟು ಎಂಬ ಮಾಹಿತಿಯನ್ನು ರಿಸರ್ವ್ ಬ್ಯಾಂಕ್ ಬ್ಯಾಂಕ್ ನೇರವಾಗಿ ಬಿಡುಗಡೆ ಮಾಡಿಲ್ಲ ಎಂಬುದನ್ನು ಗಮನಿಸಬೇಕು. ನೋಟು ನಿಷೇಧದ ಹಲವು ತಿಂಗಳುಗಳ ನಂತರವೂ ರಿಸರ್ವ್ ಬ್ಯಾಂಕ್ ಇನ್ನೂ ವಾಪಸಾದ ನೋಟುಗಳನ್ನು ಎಣಿಸುತ್ತಿದೆ ಎಂದು ಸರಕಾರ ಹೇಳುತ್ತಲೇ ಬಂದಿದೆ. ಅದು ಅಸಲಿಯೋ ನಕಲಿಯೋ ಎಂದು ಪರೀಕ್ಷಿಸ ಬೇಕಾಗಿರುವದರಿಂದ "ಬಹಳ ಸಮಯ" ಹಿಡಿಯುತ್ತದೆ ಎಂದು ಸರಕಾರ ಸಬೂಬು ಹೇಳುತ್ತಾ ಬಂದಿದೆ. ಆದರೆ ನಿಜವಾದ ಕಾರಣ ಈಗ ಹೊರಬಂದಿರುವ ಸತ್ಯವನ್ನು ಮತ್ತು ಅದರಿಂದ ಆಗುವ ಮುಖಭಂಗವನ್ನು ಆದಷ್ಟು ಸಮಯ ತಡೆ ಹಿಡಿಯಲು ಸರಕಾರ ಪ್ರಯತ್ನ ಮಾಡುತ್ತಿತ್ತು ಎಂಬುದು ಸ್ಪಷ್ಟ.



ನೋಟು ನಿಷೇಧ: ಯೆಚುರಿ ಅವರ 14 ಪ್ರಶ್ನೆಗಳು

ರಿಸರ್ವ್ ಬ್ಯಾಂಕಿನ ಮಾಹಿತಿಯ ಪ್ರಕಾರವೇ ನೋಟು ನಿಷೇಧದ ಸಂಪೂರ್ಣ ವೈಫಲ್ಯದ ಹಿನ್ನೆಲೆಯಲ್ಲಿ ಕಾ. ಸೀತಾರಾಂ ಯೆಚುರಿ ಅವರು ಒಂದು ಪತ್ರಿಕಾ ಗೋಷ್ಠಿ ಕರೆದು 14 ಪ್ರಶ್ನೆಗಳನ್ನು ಕೇಳಿದ್ದಾರೆ. ಈ ಪ್ರಶ್ನೆಗಳಿಗೆ ಅವರು ಮೋದಿ ಸರಕಾರದಿಂದ ಉತ್ತರಕ್ಕೆ ಒತ್ತಾಯಿಸಿದ್ದಾರೆ :

1. ನೋಟು ನಿಷೇಧ'ದ ನಿರ್ಣಯ ತೆಗೆದುಕೊಂಡಿದ್ದು ಯಾರು (ಪ್ರಧಾನಿ ಮೋದಿಯವರೇ)? ಇದರಿಂದಾಗಿಯೇ ಆಗಿನ ರಿಸರ್ವ್ ಬ್ಯಾಂಕಿನ ಗವರ್ನರ್ ರಘುರಾಂ ರಾಜನ್ ರಾಜಿನಾಮೆ ಕೊಡಬೇಕಾಯಿತೇ?
2. ಪ್ರಧಾನಿ ಘೋಷಣೆಯಿಂದಾಗಿ ತಮ್ಮದೇ ಕಷ್ಟ ಪಟ್ಟು ಸಂಪಾದಿಸಿದ ಹಣವನ್ನು ಪಡೆಯಲು ಕ್ಯೂಗಳಲ್ಲಿ ನಿಂತು 100ಕ್ಕೂ ಹೆಚ್ಚು ಜನ ಸತ್ತರು. ಇದಕ್ಕೆ ಯಾರು ಜವಾಬ್ದಾರರು? ಇದಕ್ಕೆ ಏಕೆ ಪರಿಹಾರ ಕೊಡಲಿಲ್ಲ? ಇದರ ಬಗ್ಗೆ ಎಫ್.ಐ.ಆರ್. ಇದೆಯೇ?
3. ಭೂತಾನ್, ನೇಪಾಳ, ಮತ್ತು ಸಹಕಾರಿ ಬ್ಯಾಂಕುಗಳ ಬಳಿ ಇರುವ ನೋಟುಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ನಿಷೇಧಕ್ಕೆ ಒಳಗಾದ ಒಟ್ಟು ನೋಟುಗಳ ಮೌಲ್ಯಕ್ಕಿಂತ ಹೆಚ್ಚು ನೋಟುಗಳು ವಾಪಸು ಬರುತ್ತವೆಂದು ವರದಿಯಾಗಿದೆ. ಇದನ್ನು ನೋಡಿದರೆ ನೋಟು ನಿಷೇಧ ಕಪ್ಪು ಹಣವನ್ನು ಬಿಳಿಯಾಗಿಸುವ ಯೋಜನೆಯಂತೆ ಕಾಣುವುದಿಲ್ಲವೇ?
4. ಬಂಗಾಳದಲ್ಲೂ ಮತ್ತು ಇತರೆಡೆಗೂ, ಬಿಜೆಪಿ ಸದಸ್ಯರು ಭಾರಿ ಪ್ರಮಾಣದ ಹಣವನ್ನು ನೋಟು ನಿಷೇಧದ ಸ್ವಲ್ಪ ಮೊದಲು ಬ್ಯಾಂಕುಗಳಿಗೆ ತುಂಬಿದರು ಎಂಬುದಾಗಿ ತಿಳಿದು ಬಂದಿದೆ. ಆದ್ದರಿಂದ ಇದು ಸ್ವತಂತ್ರ ಭಾರತದ ಅತಿ ದೊಡ್ಡ ಹಗರಣವಲ್ಲವೇ? ಪ್ರಧಾನಿ ಅವರು ಭ್ರಷ್ಟಾಚಾರದ ವಿರುದ್ಧ ಹೋರಾಟ ಎಷ್ಟು ಸಾಚಾ ಎಂದು ಇದರಿಂದ ತಿಳಿಯುತ್ತದಲ್ಲವೇ?
5. ನವೆಂಬರ್ 8, 2016 ರಂದು (ನೋಟು ನಿಷೇಧ ಘೋಷಣೆಯಾದಂದು) ಡಿಜಿಟಲೀಕರಣದ ಬಗ್ಗೆ ಪ್ರಸ್ತಾಪವೇ ಇರಲಿಲ್ಲ. ಆರ್ಥಿಕತೆ ಕುಸಿಯಿತು. 'ಡಿಜಿಟಲೀಕರಣ'ದ ನೆಪದಲ್ಲಿ ಸರಕಾರ ಕೆಲವು ಖಾಸಗಿ ಕಂಪನಿಗಳ ನೆರವಿಗೆ ಧಾವಿಸಿತು. ಒಂದು ಖಾಸಗಿ ಕಂಪನಿಯ (ಪೇ ಟಿ.ಎಂ.)ಇಡೀ ಪುಟದ ಜಾಹೀರಾತಿನಲ್ಲಿ ಸ್ವತಃ ಕಾಣಿಸಿಕೊಂಡರು. ಏಕೆ? ಇದು ಅಂತರ್‍ರಾಷ್ಟ್ರೀಯ ಮತ್ತು ದೇಶೀಯ ಕಂಪನಿಗಳಿಗೆ ಲಾಭದ ಸುಗ್ಗಿ ಒದಗಿಸಲಿಕ್ಕಾಗಿ ಅಲ್ಲವೇ?
6. ರಾಷ್ಟ್ರೀಕೃತ ಬ್ಯಾಂಕುಗಳಿಂದ ಭಾರೀ ಮೊತ್ತದ (ಒಂದು ಅಂದಾಜಿನ ಪ್ರಕಾರ ರೂ. 11 ಲಕ್ಷ ಕೋಟಿ) ಸಾಲ ಪಡೆದು ಪಾವತಿ ಮಾಡಲು ನಿರಾಕರಿಸುತ್ತಿದ್ದ ಕಾರ್ಪೋರೇಟ್ ಕಂಪನಿಗಳನ್ನು ರಕ್ಷಿಸಲಿಕ್ಕಾಗಿಯೇ ಈ ಇಡೀ ಸರ್ಕಸ್ ಮಾಡಲಾಯಿತೇ? ಈ ಸಾಲದಿಂದ ಬ್ಯಾಂಕುಗಳು ಕುಸಿಯದಂತೆ ತಡೆಯಲು ಹೀಗೆ ಮಾಡಲಾಯಿತೇ? ಜನತೆಯ ಈ ಹಣವನ್ನು ಕಾರ್ಪೋರೇಟ್ ಕಂಪನಿಗಳಿಂದ ವಸೂಲಿ ಮಾಡಲು ಸರಕಾರ ಯಾಕೆ ಕ್ರಮಗಳನ್ನು ಕೈಗೊಳ್ಳಲಿಲ್ಲ?
7. ಭ್ರಷ್ಟಾಚಾರವಂತೂ ಕೊನೆಗೊಂಡಿಲ್ಲ. 2000 ನೋಟುಗಳಲ್ಲಿ ಇರುವ ಒಟ್ಟು ಹಣ 1000 ನೋಟುಗಳಲ್ಲಿ ಇದ್ದ ಹಣಕ್ಕಿಂತ ಹೆಚ್ಚು, ಭ್ರಷ್ಟ ಶ್ರೀಮಂತರಿಗೆ ನೇರವಾಗಲು ಅಲ್ಲದೆ ಬೇರೆ ಯಾವ ಕಾರಣಗಳಿವೆ ಇದಕ್ಕೆ ?
8. ನಕಲಿ ನೋಟುಗಳ ಬಗ್ಗೆ ಪ್ರಧಾನಿ ಹೇಳಿದ್ದೆಲ್ಲಾ ತಪ್ಪು. ನೋಟು ನಿಷೇಧ ಎಲ್ಲಾ ನಕಲಿ ನೋಟುಗಳನ್ನು ಕಾನೂನುಬದ್ಧ ಮಾಡಿಬಿಟ್ಟಿದೆಯಲ್ಲವೇ?
9. ಇದರಿಂದ ಭಯೋತ್ಪಾದನೆ ಕೊನೆಯಾಗುತ್ತದೆ ಎಂದು ಹೇಳಲಾಯಿತು. ಕೊನೆಯಾಗುವುದು ದೂರ ಉಳಿಯಿತು, ಭಯೋತ್ಪಾದಕ ದಾಳಿಗಳಲ್ಲಿ ಸತ್ತ ಭದ್ರತಾ ಸಿಬ್ಬಂದಿಯ ಸಂಖ್ಯೆ ಗಮನಾರ್ಹವಾಗಿ ಏರಿದೆ.
10. ನಮ್ಮ ದುಡಿಮೆಗಾರರ ಮೂರನೇ ಎರಡು ಭಾಗದಷ್ಟು ಜನರಿಗೆ ಉದ್ಯೋಗ ಕೊಡುವ ಅನೌಪಚಾರಿಕ ಕ್ಷೇತ್ರ ನೋಟು ನಿಷೇಧದಿಂದಲೇ ಕುಸಿದಿದೆ ಎಂದು ಎಲ್ಲಾ ಮಾಹಿತಿಗಳೂ ತೋರಿಸುತ್ತಿವೆ. ಇದರಿಂದ ಆಗಿರುವ ಪ್ರಾಣ, ಜೀವನೋಪಾಯ ಮತ್ತು ಉದ್ಯೋಗಗಳ ಹಾನಿಗೆ ಯಾರು ಜವಾಬ್ದಾರರು?
11. ನೋಟು ನಿಷೇಧದಿಂದ ಗ್ರಾಮೀಣ ಮಾರುಕಟ್ಟೆ ಮತ್ತು ಕೃಷಿಯ ಮೇಲಾದ ದುಷ್ಪರಿಣಾಮಗಳು, ರೈತರ ಸಂಕಷ್ಟಗಳನ್ನು ಇನ್ನಷ್ಟು ಹೆಚ್ಚಿಸಿವೆ. ಅವರ ಪ್ರತಿಭಟನೆಗಳನ್ನು ಬಿಜೆಪಿ ರಾಜ್ಯ ಸರಕಾರಗಳು ಗೋಲಿಬಾರು ಮುಂತಾದ ದಮನಗಳಿಂದ ಮಾತ್ರ ಎದುರಿಸುತ್ತಿಲ್ಲವೇ?
12. ಹೊಸ ನೋಟುಗಳನ್ನು ಮುದ್ರಿಸಲು ರೂ. 8 ಸಾವಿರ ಕೋಟಿ; ಎ.ಟಿ.ಎಂ. ಪುನಃ ಸೆಟ್ ಮಾಡಲು 35 ಸಾವಿರ ಕೋಟಿ ರೂ.; ಮತ್ತು 1.5 ಲಕ್ಷ ಕೋಟಿ ರೂ. ಗಳಷ್ಟು (ಸಿ.ಎಂ.ಐ.ಇ. ಅಂದಾಜು ಪ್ರಕಾರ) ಆರ್ಥಿಕ ಚಟುವಟಿಕೆಯ ನಷ್ಟಗಳ ಹೊರೆಯನ್ನು ಜನರ ಮೇಲೆ ಹೊರಿಸಿದ್ದು ಏಕೆ?
13. ಪ್ರಧಾನಿ ಮತ್ತು ನೋಟು ನಿಷೇಧವನ್ನು ವೈಭವೀಕರಿಸಲು ಎಷ್ಟು ತೆರಿಗೆದಾರರ ಹಣವನ್ನು ಖರ್ಚು ಮಾಡಲಾಯಿತು?
14. ಈ ದುರಂತಕ್ಕೆ ಕಾರಣರಾದವರನ್ನು ಜವಾಬ್ದಾರರನ್ನಾಗಿ ಮಾಡಿ ಸರಕಾರ ಅವರನ್ನು ಶಿಕ್ಷಿಸಬೇಕು.

ಎಸ್ಎನ್‌ಸಿ-ಲವ್ಲಿನ್ ಪ್ರಕರಣದ ರಾಜಕೀಯ ದುರುದ್ದೇಶವನ್ನು ಬಯಲು ಮಾಡಿದ ಕೇರಳ ಹೈಕೋರ್ಟ್ ತೀರ್ಪು

ಆಗಸ್ಟ್ 23ರಂದು ಕೇರಳ ಹೈಕೋರ್ಟ್ ಎಸ್‌ಎನ್‌ಸಿ–ಲವ್ಲಿನ್ ಪ್ರಕರಣದಲ್ಲಿ ಸಿಬಿಐ ವಿಶೇಷ ನ್ಯಾಯಾಲಯ ನೀಡಿದ ತೀರ್ಪನ್ನು ಎತ್ತಿ ಹಿಡಿದಿದೆ. ವಿಶೇಷ ನ್ಯಾಯಾಲಯ 1996–98ರ ಈ ಪ್ರಕರಣದಲ್ಲಿ ಆಗ ವಿದ್ಯುಚ್ಛಕ್ತಿ ಮಂತ್ರಿಗಳಾಗಿದ್ದ ಪಿಣರಾಯಿ ವಿಜಯನ್ ಮೇಲೆ ಸಿಬಿಐ ಹಾಕಿದ್ದ ಆರೋಪದಿಂದ ಮುಕ್ತಗೊಳಿಸಿತ್ತು. ಇದನ್ನು ಪ್ರಶ್ನಿಸಿ ಸಿಬಿಐ ಕೇರಳ ಹೈಕೋರ್ಟಿನಲ್ಲಿ ಅರ್ಜಿ ಹಾಕಿತ್ತು. ಈಗ ಕೇರಳ ಹೈಕೋರ್ಟ್ ತೀರ್ಪು ಇದೊಂದು ರಾಜಕೀಯ ದುರುದ್ದೇಶದ ಪ್ರಕರಣ ಎಂಬ ಸಿಪಿಐ(ಎಂ) ನಿಲುವನ್ನು ಘಂಟಾಘೋಷವಾಗಿ ಎತ್ತಿ ಹಿಡಿದಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯರೊ ಹೇಳಿದೆ.

ಪಿಣರಾಯಿ ವಿಜಯನ್ ಅವರ ಮೇಲೆ ಸಿಬಿಐ ಉದ್ದೇಶಪೂರ್ವಕವಾಗಿಯೇ ಗುರಿಯಿಟ್ಟಿದೆ ಎಂದು ಹೈಕೋರ್ಟ್ ಹೇಳಿದೆ. ನ್ಯಾಯಾಲಯ ಅವರ ಮೇಲೆ ಹಾಕಿದ್ದ ಎಲ್ಲ ಆರೋಪಗಳನ್ನು ಸಮಗ್ರವಾಗಿ ಬಯಲಿಗೆ ತಂದಿದೆ.

ಲವ್ಲಿನ್ ಪ್ರಕರಣವನ್ನು ಸಿಪಿಐ(ಎಂ) ಮತ್ತು ಅದರ ಒಬ್ಬ ಮುಖಂಡರ ಪ್ರತಿಷ್ಠೆಯ ಮೇಲೆ ಮಸಿ ಬಳೆಯಲು ಬಳಸುವ ಪ್ರಯತ್ನಗಳು ನಡೆಯುತ್ತಿವೆ. ಹೈಕೋರ್ಟ್ ತೀರ್ಪು ಈ ಪ್ರಯತ್ನಗಳನ್ನು ಬಯಲಿಗೆಳೆದಿಟ್ಟಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.



ಪಶ್ಚಿಮ ಬಂಗಾಲದಲ್ಲಿ ಮತ್ತೊಂದು ಚುನಾವಣಾ ನಾಟಕ–ದುರ್ಗಾಪುರದಲ್ಲಿ ವ್ಯಾಪಕ ಪ್ರತಿಭಟನೆ

ಪಶ್ಚಿಮ ಬಂಗಾಲದಲ್ಲಿ ಆಗಸ್ಟ್ 13ರಂದು ಏಳು ನಗರಸಭೆಗಳಿಗೆ ಚುನಾವಣೆಗಳು ನಡೆದವು. ಇದರಲ್ಲಿ ಟಿಎಂಸಿ 'ಕ್ಲೀನ್ ಸ್ವೀಪ್' ಮಾಡಿದೆ ಎಂದು ಕೆಲವು ಮಾಧ್ಯಮಗಳು ಕುಣಿದಾಡಿವೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪ್ರತಿಪಕ್ಷಗಳಿಗೆ 1% ಮತವೂ ಸಿಕ್ಕಿಲ್ಲ ಎಂದು ಭಾರೀ ಹರ್ಷ ವ್ಯಕ್ತಪಡಿಸಿದ್ದಾರೆ.

ಕೆಲವು ಅಂಕೆ–ಸಂಖ್ಯೆಗಳನ್ನು ನೋಡಿ: ದುರ್ಗಾಪುರ ಮಹಾನಗರಪಾಲಿಕೆಯ 146 ವಾರ್ಡುಗಳಲ್ಲಿ 4 'ಅವಿರೋಧ' ಆಯ್ಕೆ ಸೇರಿದಂತೆ 142 ಟಿಎಂಸಿ ಪಾಲು. ಹಲ್ದಿಯಾದಲ್ಲಿ ಎಲ್ಲ ವಾರ್ಡುಗಳೂ ಟಿಎಂಸಿ ಪಾಲು. ಏಳು ನಗರಸಭೆಗಳಲ್ಲಿ ಟಿಎಂಸಿ ಪಡೆದ ಮತಗಳು 72%! ದುರ್ಗಾಪುರ ಮತ್ತು ಹಲ್ದಿಯಾ ಎಡಪಕ್ಷಗಳ ಬಲಿಷ್ಟ ನೆಲೆಗಳು ಎನಿಸಿಕೊಂಡಿರುವವುಗಳು. 2016ರ ವಿಧಾನಸಭಾ ಚುನಾವಣೆಗಳಲ್ಲಿ ಟಿಎಂಸಿ ದುರ್ಗಾಪುರ ನಗರದ ಎರಡೂ ವಿಧಾನಸಭಾ ಕ್ಷೇತ್ರಗಳಲ್ಲಿ ಸೋತಿತ್ತು.

ಚುನಾವಣಾ ಪೂರ್ವ ಹಿಂಸಾಚಾರ, ಪ್ರಚಾರಕ್ಕೆ ವ್ಯಾಪಕ ಅಡೆ–ತಡೆಗಳು, ಮತದಾನದ ದಿನ ಬೆದರಿಕೆ ತಂತ್ರಗಳು ಇವೆಲ್ಲವುಗಳ ಹಿನ್ನೆಲೆಯಲ್ಲಿ ಈ 'ಭಾರೀ' ಅಂಕೆ–ಸಂಖ್ಯೆಗಳು ತಮ್ಮದೇ ಕತೆ ಹೇಳುತ್ತವೆ.

ಎಡರಂಗದ ಅಧ್ಯಕ್ಷ ಬಿಮನ್ ಬಸು ಇವು ದೋಷಯುಕ್ತ ಚುನಾವಣೆಗಳು ಎಂದು ಖಂಡಿಸುತ್ತ ಪಶ್ಚಿಮ ಬಂಗಾಲದ ನಾಗರಿಕ ಸಮಾಜ ಭವಿಷ್ಯದಲ್ಲಿ ಜನಗಳ ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸುವುದು ಹೇಗೆ ಎಂಬುದರ ಬಗ್ಗೆ ಯೋಚಿಸಬೇಕಾಗಿದೆ ಎಂದಿದ್ದಾರೆ. ದುರ್ಗಾಪುರದಲ್ಲಿ ಚುನಾವಣಾ ಫಲಿತಾಂಶಗಳ ನಂತರ ಪ್ರತಿದಿನವೆಂಬಂತೆ ಪ್ರತಿಭಟನೆಗಳು ನಡೆಯುತ್ತಿವೆ. ಈ ಅಪಹಾಸ್ಯದ ಚುನಾವಣೆಯನ್ನು ರದ್ದು ಮಾಡಬೇಕು, ನ್ಯಾಯಾಂಗದ ಉಸ್ತುವಾರಿಯಲ್ಲಿ ಮರು ಚುನಾವಣ ನಡೆಯಬೇಕು ಎಂದು ಆಗ್ರಹಿಸಲಾಗುತ್ತಿದೆ.

ಆಗಸ್ಟ್ 14: ಮಹಾರಾಷ್ಟ್ರದಲ್ಲಿ ರೈತರ ಬೃಹತ್ ರಾಸ್ತಾರೋಕೋ

ಮಹಾರಾಷ್ಟ್ರದಲ್ಲಿ ಈ ವರ್ಷ ಜೂನ್ 1ರಂದು ರಾಜ್ಯವ್ಯಾಪಿ ಮುಷ್ಕರದ ನವೀನ ವಿಧಾನದಿಂದ ಆರಂಭವಾದ ರೈತರ ಚಾರಿತ್ರಿಕ ಹೋರಾಟ ಸ್ವಾತಂತ್ರ್ಯದಿನದ ಹಿಂದಿನ ದಿನ ಇನ್ನೊಂದು ಘಟ್ಟವನ್ನು ತಲುಪಿತು. ರೈತ ಸಂಘಟನೆಗಳ ಸಮನ್ವಯ ಸಮಿತಿಯ ಕರೆಯ ಮೇರೆಗೆ ಅಗಸ್ಟ್ 14ರಂದು ರಾಜ್ಯದ 27 ಜಿಲ್ಲೆಗಳ ಕನಿಷ್ಟ 183 ಕೇಂದ್ರಗಳಲ್ಲಿ ಹಲವು ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಹಲವು ಗಂಟೆಗಳ ಕಾಲ ಸಂಚಾರ ಸ್ಥಗಿತಗೊಂಡಿತು. 1ಲಕ್ಷ 60 ಸಾವಿರಕ್ಕಿಂತಲೂ ಹೆಚ್ಚು ರೈತರು ಈ 'ಚಕ್ಕಾ ಜಾಮ್' ಅಥವ ರಸ್ತೆ ತಡೆಯಲ್ಲಿ ಭಾಗವಹಿಸಿದರು.

ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಜೂನ್ 11ರಂದು ರೈತರಿಗೆ ನೀಡಿದ ಭರವಸೆಗಳನ್ನು ಪಾಲಿಸುವಲ್ಲಿ ಮತ್ತೊಮ್ಮೆ ವಿಫಲರಾದ ಹಿನ್ನೆಲೆಯಲ್ಲಿ ಜುಲೈ 10ರಿಂದ 23 ರ ನಡುವೆ ರಾಜ್ಯದಲ್ಲಿ 15 ದೊಡ್ಡ ಜಿಲ್ಲಾ ಸಮಾವೇಶಗಳ ನಂತರ ಹೋರಾಟದ ಮುಂದಿನ ಕಾರ್ಯಾಚರಣೆಯಾಗಿ ಈ ರಸ್ತೆ ತಡೆಗೆ ಕರೆ ನೀಡಲಾಗಿತ್ತು. ಇದರೊಂದಿಗೇ ಜಿಲ್ಲಾ ಕೇಂದ್ರಗಳಲ್ಲಿ ರೈತರ ಆತ್ಮಹತ್ಯೆಗಳಿಗೆ ಕಾರಣವಾದ ಸರಕಾರದ ಮಂತ್ರಿಗಳಿಂದ ರಾಷ್ಟ್ರ ಧ್ವಜಾರೋಹಣದ ಬದಲು ರೈತರಿಂದ ಧ್ವಜಾರೋಹಣಕ್ಕೆ ಕರೆ ನೀಡಲಾಗಿತ್ತು. ಇದರಿಂದ ಭೀತಗೊಂಡ ಸರಕಾರ ಹಿಂದಿನ ದಿನವೇ ಹಲವೆಡೆಗಳಲ್ಲಿ ರೈತ ಮುಖಂಡರನ್ನು ಬಂಧಿಸುವ ಮಟ್ಟಕ್ಕೆ ಇಳಿಯಿತು.

ಮುಖ್ಯಮಂತ್ರಿಗಳು ಮಾತುಕೊಟ್ಟಂತೆ ಶ್ರೀಮಂತ ರೈತರನ್ನು ಬಿಟ್ಟು ಉಳಿದೆಲ್ಲ ರೈತರ ಸಂಪೂರ್ಣ ಸಾಲಮನ್ನಾ, ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಕನಿಷ್ಟ ಬೆಂಬಲ ಬೆಲೆ ಈ ಎರಡು ಪ್ರಮುಖ ಬೇಡಿಕೆಗಳಲ್ಲದೆ, ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಮೋಸಗಳ ನಿವಾರಣೆಗಾಗಿ ಅದರಲ್ಲಿ ತೀವ್ರ ಬದಲಾವಣೆ, ಮುಂಬೈ–ನಾಗಪುರ ಸಮೃದ್ಧಿ ಹೆದ್ದಾರಿ, ಮುಂಬೈ–ದಿಲ್ಲಿ ಕೈಗಾರಿಕಾ ಕಾರಿಡಾರ್, ಮುಂಬೈ–ಅಹಮದಾಬಾದ್ ಬುಲೆಟ್ ರೈಲು ಮತ್ತಿತರ ಯೋಜನೆಗಳಿಗಾಗಿ ಅನ್ಯಾಯಪೂರ್ಣ ಭೂಸ್ವಾಧೀನವನ್ನು ನಿಲ್ಲಿಸಬೇಕು, ನೀರಾವರಿ ಸೌಲಭ್ಯಗಳನ್ನು ವಿಸ್ತರಿಸಬೇಕು, ರೈತರಿಗೆ ಮತ್ತು ಕೃಷಿ ಕೂಲಿಕಾರರಿಗೆ ಪೆನ್ಶನ್ ಹಾಗೂ ರೈತರ ವಿದ್ಯುತ್ ಬಿಲ್ ಬಾಕಿಗಳ ಮನ್ನಾ ಈ ಹೋರಾಟದ ಬೇಡಿಕೆಗಳಾಗಿವೆ.

ಈ ಹೋರಾಟದ ಹರಹು ಬಿಜೆಪಿ ಮುಖ್ಯಮಂತ್ರಿಗಳ ಧೃತಿಗೆಡಿಸಿದೆ ಎಂಬುದು ಅವರು ಆಗಸ್ಟ್ 17 ರಂದು ಬಿಜೆಪಿಯ ರಾಜ್ಯ ಕಾರ್ಯಕಾರಿಣಿಯಲ್ಲಿ ಮಾಡಿದ ಸಮತೋಲನ ಕಳಕೊಂಡ ಭಾಷಣದಿಂದ ವ್ಯಕ್ತವಾಗಿದೆ ಎಂದು ವರದಿಯಾಗಿದೆ.

ಗೋರಖ್‌ಪುರದಲ್ಲಿ 63 ಮಕ್ಕಳ ಸಾವು–ಉತ್ತರಪ್ರದೇಶ ಸರಕಾರ ಮತ್ತು ಸಾರ್ವಜನಿಕ ಆರೋಗ್ಯ ಅಧಿಕಾರಿಗಳ ಘೋರ ನಿರ್ಲಕ್ಷ್ಯ

ಉತ್ತರಪ್ರದೇಶ ಸರಕಾರದ ಘೋರ ನಿರ್ಲಕ್ಷ್ಯದಿಂದಾಗಿ, ಆಮ್ಲಜನಕ ಪೂರೈಕೆಯ ಕೊರತೆ–ಯಾಗಿ 63 ಮಕ್ಕಳ ಸಾವು ಉಂಟಾಗಿದೆ, ಇದು ಅಕ್ಷಮ್ಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ.

ಉತ್ತರ ಪ್ರದೇಶ ಸರಕಾರ ಮತ್ತು ಮುಖ್ಯಮಂತ್ರಿಗಳು ಈ ಸಾವುಗಳು ಆಮ್ಲಜನಕದ ಸಿಲಿಂಡರ್‌ಗಳ ಕೊರತೆಯಿಂದಾಗಿ ಆದದ್ದಲ್ಲ, ಕೆಟ್ಟ ನೈರ್ಮಲ್ಯ ಸ್ಥಿತಿ–ಗತಿ ಮತ್ತು ನಗರ ಪರಿಸ್ಥಿತಿಯಿಂದಾಗಿ ಆಗಿದೆ ಎಂಬಿತ್ಯಾದಿ ತರ್ಕಗಳನ್ನು ಕೊಡುತ್ತಿವೆ. ಇವನ್ನು ಒಪ್ಪಲು ಸಾಧ್ಯವಿಲ್ಲ. ಆಮ್ಲಜನಕ ಕೊರತೆಯ ಎಚ್ಚರಿಕೆಗಳನ್ನು ಇತ್ತೀಚೆಗೆ ಕೆಲವು ವರ್ಷಗಳಿಂದ ಕೊಡಲಾಗುತ್ತಿದೆ. ಇದರ ಪೂರೈಕೆಗೆ ಹಣ ಪಾವತಿ ಮಾಡದೆ ಬಾಕಿ ಇಟ್ಟುಕೊಂಡಿರುವುದು ಮುಖ್ಯ ಕಾರಣವೆಂದು ಕಾಣುತ್ತಿದೆ.

ಈ ಸಾವಿಗೆ ನೈರ್ಮಲ್ಯದ ಸ್ಥಿತಿ–ಗತಿಗಳನ್ನು ದೂಷಿಸಿರುವುದು ಪ್ರಧಾನ ಮಂತ್ರಿಗಳ ಮತ್ತು ಬಿಜೆಪಿಯ ಸ್ವಚ್ಛ ಬಾರತ ಪ್ರಚಾರದ ಅಬ್ಬರದ ನಿಜ ಹೂರಣದ ಬಗ್ಗೆ ಸಾಕಷ್ಟು ಹೇಳುತ್ತದೆ. ಅಲ್ಲದೆ, ಉತ್ತರಪ್ರದೇಶದ ಮುಖ್ಯಮಂತ್ರಿಗಳೇ ಕಳೆದ 20 ವರ್ಷಗಳಿಂದ ಲೋಕಸಭೆಯಲ್ಲಿ ಗೋರಖ್‌ಪುರವನ್ನು ಪ್ರತಿನಿಧಿಸಿದ್ದಾರೆ. ಆದ್ದರಿಂದ ಇಲ್ಲಿ ನೈರ್ಮಲ್ಯದ ಕೊರತೆಗೆ ಅವರ ಕಾಣಿಕೆಯನ್ನು ನಿರ್ಲಕ್ಷಿಸುವಂತಿಲ್ಲ.

ಈ ಸಾವುಗಳಿಗೆ ಮುಖ್ಯಮಂತ್ರಿಗಳು ಮತ್ತು ರಾಜ್ಯ ಸರಕಾರದಿಂದ ಹಿಡಿದು ಯಾರೆಲ್ಲ ಕಾರಣರು ಎಂಬುದನ್ನು ಕಂಡು ಹಿಡಿಯಲು ಒಂದು ಉನ್ನತ ಮಟ್ಟದ ನ್ಯಾಯಾಂಗ ತನಿಖೆಯನ್ನು ನಡೆಸಬೇಕು, ಅದನ್ನನುಸರಿಸಿ ಅಪರಾಧಿಗಳಿಗೆ ಕಠಿಣ ಶಿಕ್ಷೆಯನ್ನು ವಿಧಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಮಾನವ ಜೀವಗಳ ಬಗ್ಗೆ ಘೋರ ನಿರ್ಲಕ್ಷ್ಯ, ಬದಲಿಗೆ ವಿಭಜನಕಾರಿ ಪ್ರಶ್ನೆಗಳ ಮೇಲೆ ತೀವ್ರ ಗಮನ

ಹೌದು, ಉತ್ತರ ಪ್ರದೇಶ ಸರಕಾರ ಹೇಳುವಂತೆ ಈ ಮಕ್ಕಳನ್ನು ಸಾಯಿಸಿದ್ದು ಆಮ್ಲಜನಕ ಕೊರತೆಯಲ್ಲ, ಮಾನವ ಜೀವದ ಬಗ್ಗೆ ಘೋರ ನಿರ್ಲಕ್ಷ್ಯ ತೋರಿ ವಿಭಜನಕಾರಿ ವಿಷಯಗಳ ಮೇಲೆ ತೀವ್ರ ಗಮನ ನೀಡಿರುವುದು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ 63 ಮಕ್ಕಳ ಸಾವಿನ ಬಗ್ಗೆ ಟಿಪ್ಪಣಿ ಮಾಡುತ್ತ ಹೇಳಿದ್ದಾರೆ. 1998 ರಿಂದ ಇಲ್ಲಿಯ ಎಂಪಿಯಾಗಿದ್ದವರು ಯಾರು? ಪ್ರಸಕ್ತ ಮುಖ್ಯಮಂತ್ರಿ ಯಾರು? ಅದೇ ಮನುಷ್ಯ. ಆದಿತ್ಯನಾಥ– ಒಬ್ಬ ಎಂಪಿಯಾಗಿದ್ದರೂ ಆತನನ್ನು ಕೆಲವರು ಮುಖ್ಯಮಂತ್ರಿಯಾಗಿ ಆರಿಸಿದರು. ಆದ್ದರಿಂದ ಹೊಣೆ ಆದಿತ್ಯನಾಥರ ಬುಡದಲ್ಲೇ ನಿಲ್ಲುವದಿಲ್ಲ. ಹಿಂದು ಯುವ ವಾಹಿನಿಯನ್ನು 'ಬೆಳೆಸಿದ' ದಾಖಲೆಯಿದ್ದರೂ ಆತನನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಹೆಕ್ಕಿದವರೂ ಉತ್ತರ ಕೊಡಬೇಕಾಗುತ್ತದೆ, ಸತ್ತ ಮಕ್ಕಳ ಬಗ್ಗ ಆಡಂಬರದ ಮಾತುಗಳು ಮತ್ತು ಮೊಸಳೆ ಕಣ್ಣೀರು ಎಷ್ಟೇ ಸುರಿಸಿದರೂ ಉತ್ತರಪ್ರದೇಶ ಉರಿಯುತ್ತಿರಲು ಆತನನ್ನು ಆರಿಸಿ ತೆಗೆದವರ ಅಪರಾಧ ಅಳಿಸಿ ಹೋಗಲಾರದು ಎಂದು ಹೇಳಿದ್ದಾರೆ.

ಮೊದಲು ಮಕ್ಕಳನ್ನು ಕೊಲ್ಲುತ್ತೀರಾ, ನಂತರ ಅವರ ಬಡ ತಂದೆ–ತಾಯಂದಿರ ಮೇಲೆ ಪೋಲಿಸನ್ನು ಹರಿಯ ಬಿಡುತ್ತೀರಾ, ನಂತರ ನಿಮ್ಮ ಸರಕಾರದಿಂದ ಸುಳ್ಳುಗಳ ಸರಮಾಲೆ, ಇದು ಆಳ್ವಿಕೆಯ ಬಿಜೆಪಿ ಶೈಲಿ ಎಂದು ಅವರು ವ್ಯಂಗ್ಯವಾಡಿದ್ದಾರೆ.

ಜುನೈದ್ ಕುಟುಂಬಕ್ಕೆ ಸಿಪಿಐ(ಎಂ)ನಿಂದ 10 ಲಕ್ಷ ರೂ.

ದಿಲ್ಲಿಯಿಂದ ತನ್ನೂರಿಗೆ ಬರುವ ರೈಲಿನಲ್ಲಿ ದ್ವೇಷ ಪ್ರಚಾರದ ದಾಳಿಗೆ ಬಲಿಯಾದ ಜುನೈದ್‌ನ ಹಳ್ಳಿ ಖತಾವಾಲಿಯಲ್ಲಿ ಆಗಸ್ಟ್ 23ರಂದು ನಡೆದ ಒಂದು ಗಂಭೀರ ಮತ್ತು ಹೃದಯಸ್ಪರ್ಶಿ ಸಭೆಯಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್, ಹರ್ಯಾಣ ರಾಜ್ಯ ಕಾರ್ಯದರ್ಶಿ ಸುರಿಂದರ್ ಮಲಿಕ್ ಮತ್ತು ಇತರ ಮುಖಂಡರಿದ್ದ ಸಿಪಿಐ(ಎಂ) ನಿಯೋಗ ಜುನೈದ್ ತಂದೆ ಜಲಾಲುದ್ದೀನ್ ಮತ್ತು ಸಾಯಿರಾ ಅವರಿಗೆ ಸಿಪಿಐ(ಎಂ) ಕೇರಳ ರಾಜ್ಯಸಮಿತಿಯ ಪರವಾಗಿ 5ಲಕ್ಷ ರೂ.ಗಳ ಎರಡು ಚೆಕ್‌ಗಳನ್ನು ನೀಡಿದರು. ಕಳೆದ ತಿಂಗಳು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ದಿಲ್ಲಿಗೆ ಬಂದಿದ್ದಾಗ ಅವರನ್ನು ಈ ದುಃಖತಪ್ತ ದಂಪತಿಗಳು ಭೇಟಿ ಮಾಡಿದ್ದರು. ಜುನೈದ್‌ನ ತಾಯಿ ತನ್ನ ಮಗನ ಹೆಸರಿನಲ್ಲಿ ಹೆಣ್ಣು ಮಕ್ಕಳಿಗೆ ಒಂದು ಶಾಲೆ ತೆರೆಯ ಬೇಕೆಂದಿರುವುದಾಗಿ ಹೇಳಿದ್ದರು.

ಈ ನಿಧಿ ಈ ನೋವು ಮತ್ತು ಹತಾಶೆಯ ಸಮಯದಲ್ಲಿ ಒಂದು ಬಲವಾದ ಸೌಹಾರ್ದದ ಸಂಕೇತ ಮಾತ್ರ ಎಂದ ಬೃಂದಾ ಕಾರಟ್, ಜುನೈದ್‌ನಂತವರನ್ನು ಬಡಿದು ಸಾಯಿಸುತ್ತಿರುವ ಕರಾಳ ಶಕ್ತಿಗಳನ್ನು ಎದುರಿಸಿ, ಸೋಲಿಸಲು ಸಿಪಿಐ(ಎಂ) ಬದ್ಧ ಎಂಬುದನ್ನು ಪುನರುಚ್ಚರಿಸುತ್ತೇವೆ ಎಂದರು. ಈ ಹತ್ಯೆಗೆ ಸಂಬಂಧಿಸಿದಂತೆ ಬಂಧಿಸಿದ್ದ ಆರು ಮಂದಿಯಲ್ಲಿ ನಾಲ್ವರನ್ನು ಜಾಮೀನಿನ ಮೇಲೆ ಈಗಾಗಲೇ ಬಿಡುಗಡೆ ಮಾಡಿದ್ದು ನ್ಯಾಯವನ್ನು ಬುಡಮೇಲು ಮಾಡಲಾಗುತ್ತಿದೆ ಎಂದು ಬಲವಾಗಿ ಖಂಡಿಸಿದರು. ಸುರಿಂದರ್ ಮಲಿಕ್ ಮಾತಾಡಿ ಹರ್ಯಾಣದ ಸಿಪಿಐ(ಎಂ) ಸದಾ ಜುನೈದ್ ಕುಟುಂಬದವರೊಮದಿಗೆ ಇರುತ್ತದೆ, ಜುನೈದ್ ಹತ್ಯೆಗೆ ಹೊಣೆಯಾಗಿರುವ ಬಿಜೆಪಿ ಸರಕಾರದ ವಿರುದ್ಧ ಬಹುಮುಖೀ ಹೋರಾಟವನ್ನು ಮುಂದುವರೆಸುತ್ತದೆ ಎಂದರು.



ಧಾರವಾಡದಲ್ಲಿ "ದಲಿತ-ಬುಡಕಟ್ಟು ಮಹಾಕಾವ್ಯ...............

ಪುಟ 16 ರಿಂದ

ಅವರಿಗೆ, ಆದಿವಾಸಿ ಎಂದು ಇಂಡಿಜಿನಸ್ ಜನ ಎಂದು ಹೆಸರು ಕೊಟ್ಟುಬಿಟ್ಟರು. ಯಾವ ದೇಶದಲ್ಲಿ ಖಂಡಿತ ರಾಜ, ರಾಜ ವ್ಯವಸ್ಥೆಯೇ ಇರಲಿಲ್ಲವೋ ಅಲ್ಲಿ ಆದಿವಾಸಿಗಳನ್ನು ಅಕ್ಷರಶಃ ನಿರ್ನಾಮ ಮಾಡಿದರು, ಓಡಿಸಿದರು, ಕೊಂದುಹಾಕಿದರು. ಹೀಗೆ ರಾಜನೇ ಇಲ್ಲದ ಸಮಾಜ ವ್ಯವಸ್ಥೆಯಲ್ಲಿ ಹೇಗೆ ವ್ಯವಹರಿಸುವುದು ? ಹೇಗೆ ಭೂಮಿ ಪಡೆಯುವುದು ಎಂದು ಅರ್ಥವಾಗದೇ ಅವರನ್ನು ಛಿದ್ರಮಾಡಿದರು. ರಾಜ ಇದ್ದಲ್ಲಿ ಕರಾರು ಮಾಡಿಕೊಂಡು ಹಸ್ತಲಾಘವ ಮಾಡಿಕೊಂಡರು.

ಬ್ರಿಟಿಶರ ವಿರುದ್ಧ ಆದಿವಾಸಿ ಹೋರಾಟ

ನಮ್ಮ ದೇಶದಲ್ಲಿ ಕೆಲವು ಜಾತಿಗಳು ಇದ್ದವು, ಕೆಲವು ಬುಡಕಟ್ಟುಗಳಿದ್ದವು. ಭಾರತದ ಜಾತಿ ವ್ಯವಸ್ಥೆಯಲ್ಲಿ ಶ್ರೇಷ್ಠರೆಂಬ ಮೇಲ್ಜಾತಿಗಳ ಜೊತೆಗೆ ಕರಾರು ಮಾಡಿಕೊಂಡರು. ಇಲ್ಲಿಯ ಬುಡಕಟ್ಟುಗಳನ್ನು ಊರ ಹೊರಗಿಟ್ಟರು. ಅವರ ಭೂಮಿಯನ್ನೆಲ್ಲ ವಶಕ್ಕೆ ಪಡೆದು ಅದನ್ನು ಸರ್ಕಾರದ ಭೂಮಿ ಎಂದು ಮಾಡಿಕೊಂಡರು. ತಮ್ಮನ್ನು ಆಳುವ ಪರವಾಧಿಕಾರಕ್ಕೆ ಭೂಮಿಯನ್ನು ಬಿಟ್ಟುಕೊಟ್ಟದ್ದರಿಂದ ಮೂಲ ಮಾಲಿಕತ್ವ ಬೇರೆಯವರಿಗೆ ಹೋಯಿತು. ಈಗ ಅವರು ಗೇಣಿದಾರರಾಗಿ ಉಳಿಯುವಂತೆ ಆಯಿತು.

1863 ರಲ್ಲಿ ಇಂಥ ಜನರ ಯಾದಿ ತಯಾರಿ ಆಯಿತು. 1883-84 ರಲ್ಲಿ ಇಂಥ ಭೂಮಿ ಹೊಂದಿದವರ ಮೇಲೆ ಆಡಳಿತಾತ್ಮಕ ಕ್ರಮ ವಹಿಸಲು ಪ್ರಾರಂಭಿಸಿದರು. ಇಂಗ್ಲೆಂಡಿನ ಅರಣ್ಯ ಇಲಾಖೆ ಆ ದೇಶದಲ್ಲಿ ಇರಲಿಲ್ಲ. ಅದು ಇಲ್ಲಿಯೇ ಪ್ರಾರಂಭವಾಯಿತು. ಎಲ್ಲ ಭೂಮಿಯನ್ನೂ ಅರಣ್ಯ ಇಲಾಖೆಗೆ ವಹಿಸಿ ಕೊಡಲಾಯಿತು. ಈ ಅರಣ್ಯ ಇಲಾಖೆಯಿಂದ ಆದಿವಾಸಿ ಜನರು ದಬಾಳಿಕೆ ಒಳಗಾಗಿ ಬದುಕುವಂತಾಯಿತು. ಇವರ ಪೂರ್ವಜರು ಸಾವಿರಾರು ವರ್ಷಗಳಿಂದ ಈ ಭೂಮಿಯಲ್ಲಿ ವಾಸಿಸುತ್ತಿದ್ದರೂ ಅವರ ಮಾಲಿಕತ್ವದ ಈ ಜಮೀನುಗಳೆಲ್ಲ ಕಿತ್ತುಕೊಂಡ ಬ್ರಿಟಿಷರು ಅರಣ್ಯ ಇಲಾಖೆಗೆ ಕೊಟ್ಟರು. ಹಾಗೆ ಅರಣ್ಯ ಇಲಾಖೆಯ ದಮನಕಾರಿ ನೀತಿ ಪ್ರಾರಂಭವಾಯಿತು.

ಕಾರ್ಮಿಕರ ಹಕ್ಕುಗಳಿಗಾಗಿ ನಡೆದ ಹೋರಾಟ ಮೇ ದಿನ ಎಂದು ಪ್ರಸಿದ್ಧವಾದ ಸಮಯದಲ್ಲೇ ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಕೆನಡಾ ಮುಂತಾದೆಡೆಗಳಲ್ಲಿ ಬುಡಕಟ್ಟು ಜನರ ಹೊಸ ಸಂಘರ್ಷವೂ ಶುರುವಾಯಿತು. ಭಾರತದಲ್ಲಿ ಆದಿವಾಸಿ ಹೋರಾಟ ಹದಿನೇಳನೇ ಶತಮಾನದಲ್ಲಿ ಶುರುವಾಯಿತು. ಬ್ರಿಟಿಷರಿಗೆ ಎದುರಾಗಿ ಇದು ಪ್ರಾರಂಭವಾಗಿರುವುದು ತಂಟ್ಯಾ ಭೀಮ್, ಉಮಾಜಿ ನಾಯ್ಕ ಮುಂತಾದವರು ಬ್ರಿಟಿಷರ ವಿರುದ್ಧ ಹೋರಾಡಿದರು. ಈ ಇತಿಹಾಸ ಎಲ್ಲೂ ಕೂಡ ದಾಖಲಾಗಿಲ್ಲ.

ಈ ಆದಿವಾಸಿಗಳು ತಮ್ಮ ಭೂಮಿ ಉಳಿಸಿಕೊಳ್ಳಲು ಆರ್ಥಿಕ ಪರ್ಯಾಯ ನೀತಿ ಎಂದರೆ ಜೀವನದ ಬಹುಮೂಲ್ಯ ಸಮಾನತಾ ಸಮಾಜದ ಆರ್ಥಿಕತೆಯ ರಕ್ಷಣೆಗೆ ಹೋರಾಡಿದರು. ಕೇವಲ ಭೂಮಿಗಾಗಿ ಅಲ್ಲ; ಸಮಾನತೆಯ ರಕ್ಷಣೆಗೆ ಹೋರಾಡಿದರು. ಇದನ್ನು ಎಲ್ಲರೂ ಮರೆತುಬಿಡುತ್ತಾರೆ.

ಆದಿವಾಸಿ ದಿನ : ಪ್ರಜಾಪ್ರಭುತ್ವದ ಅರ್ಥ ವಿಸ್ತಾರದ ದಿನ

1996 ರಲ್ಲಿ ವಿಶ್ವಸಂಸ್ಥೆಯು ವಿಶ್ವದ ಎಲ್ಲ ಆದಿವಾಸಿಗಳಿಗೆ ಒಂದು ಸ್ವತಂತ್ರ ಸಮುದಾಯದ ಮಾನ್ಯತೆ ನೀಡಲು ತೀರ್ಮಾನಿಸಿತು. ಅಂದಿನಿಂದ ಅಗಷ್ಟ 9 ಆದಿವಾಸಿ ದಿನವಾಗಿ ಆಚರಿಸಲಾಗುತ್ತದೆ. 1993 ರಲ್ಲಿ ಈ ಪ್ರಸ್ತಾಪವನ್ನು ವಿಶ್ವಸಂಸ್ಥೆಯಲ್ಲಿ ಇಟ್ಟಾಗ ಅಮೇರಿಕಾ, ಆಸ್ಟ್ರೇಲಿಯಾ ಕೆನಡಾ ಭಾರತ ದೇಶಗಳು ವಿರೋಧಿಸಿದ್ದವು. ಆದರೆ ಆಸ್ಟ್ರೇಲಿಯಾ ಪ್ರಧಾನಿ "ಎಲ್ಲ ಜನರ ಪರವಾಗಿ ಆದಿವಾಸಿ ಜನರ ಕ್ಷಮೆ ಕೇಳುವೆ' ಎಂದರು. ಆದರೆ ನಮ್ಮ ದೇಶದಲ್ಲಿ ಅಂಥದ್ದು ಆಗಲೇ ಇಲ್ಲ.

ಭಾರತದಲ್ಲಿ ಅದೇ ವೇಳೆ ಆದಿವಾಸಿಗಳ ಅರಣ್ಯ ಹಕ್ಕುಗಳ ಕುರಿತು ಪ್ರಸ್ತಾಪ ಬಂತು. ಆ ಚರ್ಚೆಯಲ್ಲಿ ನಾನು ಅತ್ಯಂತ ಹತ್ತಿರದಿಂದ ಪಾಲ್ಗೊಂಡಿದ್ದೇನೆ. ಅಲ್ಲಿ ಏನೆಲ್ಲ ಸಂಘರ್ಷಗಳು ನಡೆದವು ನನಗೆ ಗೊತ್ತು. ಅರಣ್ಯ ಭೂಮಿಯಲ್ಲಿ ನೆಲೆಸಿದ ಬುಡಕಟ್ಟುಗಳಿಗೆ ಹಕ್ಕು ನೀಡಲು ಅರಣ್ಯ ಇಲಾಖೆ ವಿರೋಧಿಸಿತು. ಆದರೆ ಕಾನೂನು ಪಾಸಾಯಿತು. ಆದರೆ ಭೂಮಿ ಹಕ್ಕಿನ ಜೊತೆಗೆ ಅವರಿಗೆ ಸಾಂಸ್ಕೃತಿಕ ಹಕ್ಕು ನೀಡುವ ಬಗ್ಗೆ ಯೋಚಿಸಲಾಗಿಲ್ಲ ಎಂಬುದು ದುಃಖದ ಸಂಗತಿ. ಇದೊಂದು ಕನಿಷ್ಠ ಹಕ್ಕು ಹೊರತೂ ಅಂತಿಮವಾದ ಹಕ್ಕಲ್ಲ.



ಚೌಡಿಕೆ ಪದ

ಭಾರತದಲಿ ಬೋಡೋ ಸಂತಾಲ್ ಆದಿವಾಸಿ ಭಾಷೆಗಳನ್ನು ಬಿಟ್ಟರೆ ಉಳಿದ ಬುಡಕಟ್ಟು ಭಾಷೆಗಳಿಗೆ ರಕ್ಷಣೆ ಇಲ್ಲ, ಮಾನ್ಯತೆ ಇಲ್ಲ, ಶೆಡ್ಯೂಲ್‌ನಲ್ಲಿ ಸೇರಿಸಿಲ್ಲದ ಕಾರಣ ಸಂವಿಧಾನದ ಮಾನ್ಯತೆ ಕೊಡಲಾಗಿಲ್ಲ. ಆದಿವಾಸಿಗಳಿಗೆ ಪ್ರತ್ಯೇಕ ಧರ್ಮವಿದೆ. ಜನ ಗಣತಿಯಲ್ಲಿ ಇವರ ಬಾಷೆಯನ್ನು ಗುರ್ತಿಸಿಲ್ಲ, ಧರ್ಮಕ್ಕೆ ಬೆಲೆ ಕೊಟ್ಟಿಲ್ಲ. ಉತ್ತರದ ಹಿಮಾಲಯ ಮತ್ತು ಈಶಾನ್ಯದಲ್ಲಿ ಅವರಿಗೆ ಮೂರು ಪ್ರತ್ಯೇಕ ಧರ್ಮವಿದೆ. ಅವರು ಬದುಕುವ ರೀತಿ ಜೀವನ ಲಕ್ಷಣ, ಭಾಷೆ ಅವರದೇ ಆದ ಜ್ಞಾನ ಶಿಸ್ತು ಮತ್ತು ಸ್ವತಂತ್ರ ಅಸ್ತಿತ್ವಕ್ಕೆ ಮಾನ್ಯತೆ ಕೊಡಲಾಗಿಲ್ಲ. ಇವರ ಬಾಷೆಗೂ ಬದುಕಿಗೂ ಸಂಬಂಧವಿದೆ. ಆದರೆ ನಮ್ಮ ದೇಶದಲ್ಲಿ ಅದಕ್ಕೆಲ್ಲ ಮಾನ್ಯತೆ ಸಿಕ್ಕಿಲ್ಲ. ನಮ್ಮ ಸಂಸ್ಕೃತಿಯ ಭಾಗವಾಗಿ ದೇವರನ್ನು ನೋಡುವ ಕ್ರಮ ಭಿನ್ನವಾಗಿದೆ. ಭಗವಾನ್ ದಾಸ್ ಪಟೇಲ ರವರ ಮಹಾಭಾರತ, ಮಂಟೇಸ್ವಾಮಿ, ಮಲೆಮಾದೇಶ್ವರ ಕಾವ್ಯ ಇರಬಹುದು, ಛತ್ತೀಸಗಡದ ಭರ್ತನಿ ಇವರೆಲ್ಲ ಇರಬಹುದು ಹಾಗೂ ಇತ್ತೀಚೆಗೆ ಓರಿಸ್ಸಾದಲ್ಲಿ 3 ಆದಿವಾಸಿ ಮಹಾಕಾವ್ಯಗಳು ದೊರೆತದ್ದು ಇರಬಹುದು ಅವೆಲ್ಲವೂ ಕೂಡ ನಮ್ಮ ಮಹತ್ವದ ಸಾಂಸ್ಕೃತಿಕ ಪರಂಪರೆಯ ಭಾಗವಾಗಿವೆ. ಇದರಲ್ಲಿ ನಮ್ಮದೇ ಆದ ಭಾಷೆ ಇದೆ, ಒಂದು ಅರ್ಥಶಾಸ್ತ್ರ ಇದೆ, ವಿಶ್ವವನ್ನು ನೋಡುವ ಪ್ರತ್ಯೇಕ ದೃಷ್ಟಿಕೋನವಿದೆ. ಈ ಎಲ್ಲಾ ವಿಷಯಗಳನ್ನು ನೆನಪು ಮಾಡಿಕೊಳ್ಳಲು, ಈ ನೆನಪುಗಳನ್ನು ಮುಂದಕ್ಕೆ ಒಯ್ಯಲು ಈ ದಿನದ ಆಚರಣೆಯಾಗುತ್ತಿದೆ. ಈ ದಿನ ಪ್ರಜಾಪ್ರಭುತ್ವಕ್ಕೆ ವಿಸ್ತಾರ ಅರ್ಥ ಕೊಡುವ ಮತ್ತು ಭೂಮಿ ಜೊತೆ ಸಂಬಂಧ ರೂಪಿಸುವ ವಿಶ್ವವನ್ನು ರಕ್ಷಿಸುವ ದಿನದ ಮಹತ್ವವಿದೆ. ಬೇರೆಯವರ ವೇದನೆಗಳನ್ನು ಅರ್ಥ ಮಾಡಿಕೊಳ್ಳುವ ಸಂವೇದನೆಯ ದಿನವೂ ಹೌದು." ಎಂದು ಪ್ರೊ. ಜಿ ಎನ್ ದೇವಿ ವಿವರವಾಗಿ ಮಾತನಾಡಿದರು.

ನೆಲೆಗೊಳ್ಳುವ ಪೂರ್ವದ ಸ್ಥಿತಿ ಘರ್ಷಣೆ ಹೇಳುವ ಬುಡಕಟ್ಟು ಮಹಾಕಾವ್ಯಗಳು

ಕಾರ್ಯಕ್ರಮದ ಆಶಯ ಭಾಷಣ ಮಾಡಿದ ಕನ್ನಡ ವಿ ವಿ ಯ ಮಾಜಿ ಕುಲಪತಿಗಳಾದ ಪ್ರೊ. ಹಿ. ಚಿ ಬೋರಲಿಂಗಯ್ಯ ಮಾತನಾಡಿ "ಭಾರತದಾದ್ಯಂತ ಅನೇಕ ಬುಡಕಟ್ಟುಗಳು ತಮ್ಮದೇ ಆದ ರಾಮಾಯಣ ಮಹಾಭಾರತಗಳನ್ನು ಹಾಡಿಕೊಳ್ಳುತ್ತಿದ್ದರಾದರೂ ಸ್ಥಾಪಿತ ಮೌಲ್ಯಗಳಿಗೆ ಅವು ವಿರುದ್ಧವಾಗಿದ್ದುದರಿಂದಾಗಿ ಅವುಗಳನ್ನು ಮಾನ್ಯ ಮಾಡಲಿಲ್ಲ. ಮಹಾಕಾವ್ಯವೆಂದರೆ ಅದು ನೂರಾರು ಘಟನೆಗಳ ಮೊತ್ತವಾದ್ದರಿಂದ ಅಕ್ಷರ ಬಲ್ಲವನು ಮಾತ್ರ ಅಂಥದ್ದನ್ನು ರಚಿಸಬಲ್ಲನೆಂಬ ತಿಳುವಳಿಕೆಯೂ ಈ ನಿರ್ಲಕ್ಷಕ್ಕೆ ಕಾರಣವಿರಬಹುದು. ಇಡೀ ಭಾರತಕ್ಕೆ ಒಂದು ಸಂಸ್ಕೃತಿ ಇದೆ, ಅದೇ "ಭಾರತೀಯ ಸಂಸ್ಕೃತಿ" ಎಂಬ ಏಕಮುಖೀ ಚಿಂತನೆ ಈ ಅಭಿಪ್ರಾಯಕ್ಕೆ ಕಾರಣವಾಗಿರಬಹುದು. ಆದರೆ, ಈಗ ಒಂದು ದೇಶಕ್ಕೆ ಒಂದೇ ಸಂಸ್ಕೃತಿ ಎಂಬುದಿರುವುದಿಲ್ಲ, ಅದರಲ್ಲೂ ಭಾರತದಂಥ ದೇಶ ಬಹುಮುಖೀ ಸಂಸ್ಕೃತಿಯನ್ನು ಪ್ರತಿನಿಧಿಸುವ ಒಂದು ಸಂಕೀರ್ಣ ಭೂಪ್ರದೇಶವಾಗಿದ್ದು ಕೆಲವರು ಊಹಿಸುವಂಥ ಒಂದೇ ಸಂಸ್ಕೃತಿ ಇರಲು ಸಾಧ್ಯವಿಲ್ಲ ಎಂಬ ತಿಳುವಳಿಕೆ ಗಟ್ಟಿಗೊಳ್ಳುತ್ತಿದೆ." ಎಂದರು.

ಮುಂದುವರಿದು "ಇಡೀ ರಾಮಾಯಣ ಒಂದು ಸಾಮ್ರಾಜ್ಯದ ವಿಸ್ತರಣೆಗೆ ಸಂಬಂಧಿಸಿದ್ದು. ರಾಮನ ಪಯಣವೇ ಸಾಮ್ರಾಜ್ಯ ವಿಸ್ತರಣೆಯ ತವಕದಿಂದ ಕೂಡಿದ್ದು. ಮಹಾಭಾರತ ಅಂಥ ಒಂದು ಸಾಮ್ರಾಜ್ಯವನ್ನು ಹಂಚಿಕೊಳ್ಳುವ ತವಕಕ್ಕೆ ಸಂಬಂಧಿಸುತ್ತದೆ. ಒಂದು ಕಡೆ ನೆಲೆಗೊಂಡು ಒಂದು ನಾಗರೀಕತೆಯನ್ನು ಕಟ್ಟಿದ ನಂತರದ ಸ್ಥಿತಿಯನ್ನು ರಾಮಾಯಣ ಮಹಾಭಾರತಗಳು ಹೇಳುತ್ತವೆ. ಆದರೆ ಈ ಮೌಖಿಕ ಮಹಾ ಕಾವ್ಯಗಳಲ್ಲಿನ ಮೂಲತಃ ಅಲೆಮಾರಿಗಳೂ ಭೈರಾಗಿಗಳೂ ಆದ ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಮೈಲಾರರು ಒಂದು ಕಡೆ ನೆಲೆಗೊಳ್ಳುವ ತವಕದಲ್ಲಿ ಇರುವವರು. ಹೀಗಾಗಿ ಈ ಮಹಾಕಾವ್ಯಗಳ ವಸ್ತುವೇ ಒಂದು ಕಡೆ ನೆಲೆಗೊಳ್ಳುವ ಪೂರ್ವದ ಸ್ಥಿತಿಯನ್ನೂ ಮತ್ತು ಆ ಸಂದರ್ಭದ ಘರ್ಷಣೆಗಳನ್ನೂ ಹೇಳುವಂಥದ್ದು. ಇರುವುದನ್ನು ವೈಭವಿಸುವ ಲಿಖಿತ ಮಹಾಕಾವ್ಯಗಳು ಕಾವ್ಯ ಸತ್ವದ ಕಡೆಗೆ ಹೆಚ್ಚು ಗಮನ ಕೊಟ್ಟರೆ, ಇಲ್ಲದಿರುವುದಕ್ಕೆ ತುಡಿಯುವ ಜನಪದ ಮಹಾಕಾವ್ಯಗಳು ಜೀವನದ ಸತ್ಯಕ್ಕೆ ಹೆಚ್ಚು ಒತ್ತು ಕೊಟ್ಟಿವೆ ಎನ್ನಿಸುತ್ತದೆ. ಹನ್ನೆರಡನೇ ಶತಮಾನದ ಕಾಲಕ್ಕೆ ಅತ್ಯಂತ ಪ್ರಗತಿಪರವಾಗಿದ್ದ ಆ ಗುಂಪು ನಂತರ ಕ್ರಮೇಣ ಒಂದು ಜಾತಿಯಾಗಿ ಮಾರ್ಪಟ್ಟು, ಕೆಲವು ಕಟ್ಟುಪಾಡುಗಳನ್ನು ವಿಧಿಸಿಕೊಂಡು, ತನ್ನ ಕಂದಕವನ್ನು ತಾನೇ ತೋಡಿಕೊಳ್ಳತೊಡಗಿದಾಗ ಇದರಿಂದ ಬೇಸತ್ತ ಕೆಳವರ್ಗದ ಕೆಲವು ನಾಯಕರು ಆ ಒಕ್ಕೂಟದಿಂದ ಸಿಡಿದು ತಮ್ಮ ತಮ್ಮ ದಾರಿಗಳನ್ನು ತಾವು ಹಿಡಿದಂತೆ ಕಾಣುತ್ತದೆ. ಶರಣರ ಜನಪರ ಚಳುವಳಿಯ ಮೂಲಕ ಚರಿತ್ರೆಯಲ್ಲಿಯೇ ಮೊದಲ ಬಾರಿಗೆ ಬೀದಿಗೆ ಬಂದ ಕೆಳವರ್ಗದ ಜನ ನಂತರದ ಅನಿಶ್ಚಿತ ಸೋಲಿನಿಂದಾಗಿ ಹತಾಶರಾಗಿ ತಮ್ಮ ತಮ್ಮ ದಾರಿಗಳನ್ನು ತಾವು ಹಿಡಿದಂತೆ ಕಾಣುತ್ತದೆ. ಈ ಹಿನ್ನೆಲೆಯಲ್ಲಿ ಮಾದೇಶ್ವರ ಮತ್ತು ಮಂಟೆಸ್ವಾಮಿಯವರನ್ನು ನಾವು ನೋಡಬೇಕಾಗಿದೆ." ಎಂದರು.

ಬುಡಕಟ್ಟು ಮಹಾಕಾವ್ಯಗಳು ಪಠ್ಯಗಳಾಗಲಿ

ಸ್ವಾಗತ ಸಮಿತಿ ಅಧ್ಯಕ್ಷರಾದ ಕವಿವಿ ನಿವೃತ್ತ ಪ್ರಾಧ್ಯಾಪಕರಾದ ಡಾ. ಕೆ.ಆರ್. ದುರ್ಗಾದಾಸ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಜ್ಯ ಕಾರ್ಯದರ್ಶಿ ಎಸ್. ದೇವೇಂದ್ರಗೌಡ ಕಾರ್ಯಕ್ರಮ ನಿರೂಪಿಸಿದರು. ರಾಜ್ಯಾಧ್ಯಕ್ಷ ಅಚ್ಯುತ್ ಅಧ್ಯಕ್ಷತೆ ವಹಿಸಿದ್ದರು. ಧಾರವಾಡ ಘಟಕದ ಅಧ್ಯಕ್ಷ ಗಂಗಾಧರ ಗಾಡದ ಉಪಸ್ಥಿತರಿದ್ದರು.

ಮೊದಲ ಗೋಷ್ಠಿಯಲ್ಲಿ ಮೈಸೂರಿನ ಕಲಾವಿದ ಗುರುರಾಜ ಮತ್ತು ಸಂಗಡಿಗರು ಮಂಟೇಸ್ವಾಮಿ ಮತ್ತು ಮಲೆಮಾದೇಶ್ವರ ಮಹಾಕಾವ್ಯಗಳ ಆಯ್ದ ಭಾಗಗಳನ್ನು ಪ್ರಸ್ತುತಪಡಿಸಿದರು. ಡಾ. ಹಿ.ಚಿ.ಬೋರಲಿಂಗಯ್ಯ ಅವರು ಮಹಾಕಾವ್ಯದ ಅರ್ಥ ವಿವರಣೆ ನೀಡಿದರು. ಎರಡನೇ ಗೋಷ್ಠಿಯಲ್ಲಿ ಬಾಗಲಕೋಟೆಯ ಕಲಾವಿದ ವೆಂಕಪ್ಪ ಅಂಬಾಜಿ ಸುಗತೇಕರ್ ಮತ್ತು ಸಂಗಡಿಗರು ಗೊಂದಲಿಗರ ಹಾಡುಗಳನ್ನು ಮತ್ತು ಮುಧೋಳದ ಕಲಾವಿದೆ ಯಲ್ಲವ್ವ ಗಾಜರ ಹಾಗೂ ಸಂಗಡಿಗರು ಚೌಡಕಿ ಪದಗಳನ್ನು ಪ್ರಸ್ತುತಪಡಿಸಿದರೆ ಡಾ. ಕೆ.ಆರ್. ದುರ್ಗಾದಾಸ ಪದಗಳ ಅರ್ಥ ವಿವರಣೆ ನೀಡಿದರು.

ಸಮಾರೋಪ ಭಾಷಣ ಮಾಡಿದ ಉದಯ ಟಿವಿಯ ಹಿರಿಯ ಪತ್ರಕರ್ತ ಡಾ. ಜಗದೀಶ ಕೊಪ್ಪ ಮಾತನಾಡಿ " ಭಾರತೀಯ ಸಂಸ್ಕೃತಿ ಒಳಗೊಂಡಿರುವ ಬುಡಕಟ್ಟು ಮಹಾಕಾವ್ಯಗಳಲ್ಲಿಯ ಸಂದೇಶ ತತ್ವ ವಿಚಾರಗಳನ್ನು ಯುವ ಜನತೆಗೆ ತಿಳಿಸುವಂತಾಗಬೇಕು. ಮುಂದಿನ ಪೀಳಿಗೆಗೆ ಮುಂದುವರೆಯಲು ಬುಡಕಟ್ಟು ಮಹಾಕಾವ್ಯಗಳನ್ನು ಪಠ್ಯವಾಗಿಸಬೇಕು. ಮಾನವೀಯ ಮೌಲ್ಯಗಳನ್ನು ಕಟ್ಟಿಕೊಡುವ ಕೆಲಸವಾಗಲಿ" ಎಂದರು.

ಕರ್ನಾಟಕ ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ. ಹುಸೇನ ಖಾನ ಅಧ್ಯಕ್ಷತೆ ವಹಿಸಿದ್ದರು. ಡಾ. ವಿಠ್ಠಲ ಭಂಡಾರಿ ಸ್ವಾಗತಿಸಿದರು. ಧಾರವಾಡ ಘಟಕದ ಕಾರ್ಯದರ್ಶಿ ಬಿ.ಐ.ಈಳಿಗೇರ ವಂದಿಸಿದರು. ರಂಜಿತಾ ಜಾಧವ ಕಾರ್ಯಕ್ರಮ ನಿರ್ವಹಿಸಿದರು. ನಂತರ ವಿನೋಧ ರಾಜ್ ಅವರ "ಹಕ್ಕಿ-ಪಿಕ್ಕಿ" ಬುಡಕಟ್ಟು ಜನಾಂಗದ ಸಾಕ್ಷ ಚಿತ್ರವನ್ನು ಪ್ರದರ್ಶಿಸಲಾಯಿತು.

ಭಿನ್ನ ಕಲಾತ್ಮಕ ಅನುಭವ-ವಾಸುದೇವ ಉಚ್ಚಿಲ

* 'ಬುಡಕಟ್ಟು ಕಾವ್ಯ' 'ಆಖ್ಯಾನ ವ್ಯಾಖ್ಯಾನ' ಕಾರ್ಯಕ್ರಮವನ್ನು 2 ವರ್ಷಗಳ ಹಿಂದೆ ಶಿವಮೊಗ್ಗದಲ್ಲಿ ಹಮ್ಮಿಕೊಂಡಿತ್ತು. ಜನಪದ ಕಾವ್ಯಗಳ ಓದು ಕೊಡುವ ಅನುಭವಕ್ಕಿಂತಲೂ, ಅವನ್ನು ಹಾಡುವ ಪ್ರದರ್ಶಿಸುವ ದಲಿತ-ಬುಡಕಟ್ಟು ಸಮುದಾಯಗಳ ನಿರೂಪಣೆಗಳು ಭಿನ್ನ ಕಲಾತ್ಮಕ ಅನುಭವವಾಗಿರುತ್ತದೆ ಎಂಬುದು ಶಿವಮೊಗ್ಗದ ಪ್ರೇಕ್ಷಕರಂತೆ ಧಾರವಾಡದ ಪ್ರೇಕ್ಷಕರ ಅನುಭವವೂ ಬಂದಿತು. ಪ್ರೊ.ಗಣೇಶ ದೇವಿ ಮತ್ತು ಪ್ರೊ.ಬೋರಲಿಂಗಯ್ಯ ಅವರ ಉಪನ್ಯಾಸಗಳು ಮುಂದೆ ನಡೆದ ಜಾನಪದ ಕಲಾವಿದರು ನಿರೂಪಿಸಿದ ಆಖ್ಯಾನ-ವ್ಯಾಖ್ಯಾನಗಳನ್ನು ಅರ್ಥಮಾಡಿಕೊಳ್ಳಲು ಉತ್ತಮ ಭೂಮಿಕೆ ಒದಗಿಸಿತು.
* ಈಗಲೂ ಬೇರೆ ಭಾಷೆಗಳ ಜೊತೆ ಹೋಲಿಸಿದರೆ ಕನ್ನಡದಲ್ಲೇ ಹೆಚ್ಚು ಜನಪದ ಮಹಾಕಾವ್ಯಗಳಿದ್ದು, 19 ಮಹಾಕಾವ್ಯಗಳು ಈಗಾಗಲೇ ಮುದ್ರಣಗೊಂಡಿವೆ. ಅಭಿಜಾತ ಮಹಾಕಾವ್ಯಗಳ ಜೊತೆಗೇನೇ ಇವೂ ಹುಟ್ಟಿ ಅಸ್ತಿತ್ವದಲ್ಲಿವೆ - ಪ್ರೊ. ಹಿ.ಚಿ. ಬೋರಲಿಂಗಯ್ಯ
* ಸಮುದಾಯ ಕರ್ನಾಟಕದ ಕಾರ್ಯದರ್ಶಿ ದೇವೇಂದ್ರಗೌಡ, ರಾಜ್ಯ ಸಮಿತಿಯ ವಿಠಲ ಭಂಡಾರಿ, ರಂಜಿತಾ ಇವರುಗಳ ವಿಶೇಷ ಪರಿಶ್ರಮದಿಂದ ಕಾರ್ಯಕ್ರಮ ಜನಮೆಚ್ಚುಗೆ ಗಳಿಸಿತು. ಧಾರವಾಡದ 6 ಕಾಲೇಜುಗಳ ಸಾಹಿತ್ಯ ವಿದ್ಯಾರ್ಥಿಗಳು, ಜಿಲ್ಲೆಯ ಸಾಂಸ್ಕೃತಿಕ ಆಸಕ್ತರು ನಾಲ್ಕುನೂರು ಜನ ಸೇರಿ ಭಾಗವಹಿಸುವಲ್ಲಿ ಸಂಘಟಕರ ಪರಿಶ್ರಮವನ್ನು ಮೆಚ್ಚಲೇ ಬೇಕಾಗಿದೆ.
* ಹಕ್ಕಿಪಿಕ್ಕಿ ಬುಡಕಟ್ಟಿನ ಕುರಿತು ವಿನೋದರಾಜ್ ಅವರು ನಿರ್ದೇಶಿಸಿರುವ ಮಧುಭೂಷಣ ನಿರ್ಮಿಸಿದ "ಸಿಕ್ಕಿದ್ರೆ ಶಿಕಾರಿ ಇಲ್ದಿದ್ರೆ ಬಿಕಾರಿ" ಎಂಬ 90 ನಿಮಿಷಗಳ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು. ಅಲೆಮಾರಿ ಸಮುದಾಯವೊಂದು ನಾಗರಿಕ ಸಮಾಜದ ಮಧ್ಯೆ ಕನಿಷ್ಠ ಅಗತ್ಯೆಗಳಿಗಾಗಿಯೂ ಪಡಿಪಾಟಲು ಅನುಭವಿಸುತ್ತಿರುವ ವಿವರ ಚಿತ್ರಣಗಳು ಇಂಥದೇ ಇತರ ದಲಿತ-ಬುಡಕಟ್ಟು ಸಮುದಾಯಗಳ ಬಗ್ಗೆ ಚಿಂತಿಸುವಂತೆ ಮಾಡುವ ಮೂಲಕ, ಇಡೀ ಬುಡಕಟ್ಟು ಉತ್ಸವಕ್ಕೆ ಉತ್ತಮ ಸಮಾಪ್ತಿ ನೀಡಿದೆ.

JANASHAKTHI KANNADA VARA PATRIKE SEPTEMBER 4-10, 2017 Price : Rs. 10/- Date of Publication: 1 SEPTEMBER 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಧಾರವಾಡದಲ್ಲಿ "ದಲಿತ–ಬುಡಕಟ್ಟು ಮಹಾಕಾವ್ಯ: ಹಾಡು ಮತ್ತು ಅರ್ಥ"

ಆದಿವಾಸಿಗಳಿಗೆ, ಬುಡಕಟ್ಟುಗಳಿಗೆ ಸ್ವಾತಂತ್ರ್ಯದ 'ಅರ್ಥ ಮತ್ತು ಅನುಭವ' ಈಗಲೂ ದೊರೆಯುತ್ತಿಲ್ಲ : ಪ್ರೊ. ದೇವಿ

– ಡಾ. ವಿಠ್ಠಲ ಭಂಡಾರಿ, ಕೆರೆಕೋಣ



ಮಂಟೆಸ್ವಾಮಿ

ಮಹಾಕಾವ್ಯಗಳೆಂದರೆ ತಟ್ಟನೆ ನೆನಪಾಗೋದು ರಾಮಾಯಣ, ಮಹಾಭಾರತ; ಮಹಾಕಾವ್ಯಗಳ ನಾಯಕರೆಂದರೆ ರಾಮ, ಕೃಷ್ಣ, ಅರ್ಜುನ, ಧರ್ಮರಾಯ; ಮಹಾಕಾವ್ಯದ ಲಕ್ಷಣ ಎಂದರೆ ಅಷ್ಟಾದಶ ವರ್ಣನೆ, ಸಂಸ್ಕೃತ ಭೂಯಿಷ್ಟ ಭಾಷಾ ಪ್ರಯೋಗ. ಮಹಾಪುರುಷರ ಯುದ್ಧೋನ್ಮಾದದ ವಿವರ; ಕಾವ್ಯದ ನಾಯಕನೆಂದರೆ ದೇವಾಂಶ ಸಂಭೂತ, ಪ್ರತಿನಾಯಕನೆಂದರೆ ದೈವ ವಿರೋಧಿ; ಸಾವನ್ನು ಎದುರು ನೊಡವವನು; ಕಾವ್ಯದ ನಾಯಕಿ ಎಂದರೆ ನಾಯಕನ ವ್ಯಕ್ತಿತ್ವದ ಪ್ರವರ್ಧಮಾನಕ್ಕೆ ಪೂರಕ ಪಾತ್ರ: ರಥ ಏರು ಎಂದರೆ ಏರುವವಳು. ಬೆಂಕಿಗೆ ಹಾರು ಎಂದರೆ ಹಾರುವವಳು. ಕಾಡಿಗೆ ನಡೆ ಎಂದರೆ ನಡೆಯುವವಳು; ಸ್ವಂತ ವ್ಯಕ್ತಿತ್ವವೇ ಇಲ್ಲದ ಬೆದುರು ಬೊಂಬೆ .... ಇದೆಲ್ಲವೂ ಮಹಾಕಾವ್ಯದ ಕುರಿತು ನಮ್ಮಲ್ಲಿರುವ ಸಿದ್ಧ ಉತ್ತರಗಳು. ಇವುಗಳನ್ನು ಇಟ್ಟುಕೊಂಡೇ ಕೂದಲು ಸೀಳುವ ಕೆಲಸ ಮಾಡುತ್ತಿದ್ದೇವೆ. ಇವುಗಳಲ್ಲಿಯೇ ಜೀವ ಪರವಾದ ಆಲೋಚನೆಗಳಿಗಾಗಿ ಹುಡುಕಾಡುತ್ತೇವೆ. ಈ ಕಾಲಕ್ಕೆ ಬೇಕಾದ ತರ್ಕವನ್ನು ಕಟ್ಟಿ ಕೊಡಲು ಹೆಣಗಾಡುತ್ತೇವೆ.

ಮಹಾಕಾವ್ಯಗಳ ಸಿದ್ಧ ಚೌಕಟ್ಟನ್ನು ಒಡೆಯುವ ಬುಡಕಟ್ಟು ಮಹಾಕಾವ್ಯಗಳು

ಆದರೆ ಮಹಾಕಾವ್ಯದ ಮೀಮಾಂಸೆಯನ್ನು ತಿರಸ್ಕರಿಸಿ ಆವರೆಗಿನ ಸ್ಥಾಪಿತ ಪುರಾಣ ಮೌಲ್ಯ/ಜೀವನ ಮೌಲ್ಯಗಳನ್ನು ಅಲ್ಲಗಳೆದು, ಏಕಮುಖಿ ಚಿಂತನೆಯ ವ್ಯಾಖ್ಯಾನವನ್ನೇ ತಿರಸ್ಕರಿಸಿ ಸಾವಿರದ ಸಂಸ್ಕೃತಿ/ವೈವಿಧ್ಯವನ್ನು ನಮ್ಮೆದುರು ನಮ್ಮದೆ ಜನಪದ ಮಟ್ಟಿನಲ್ಲಿ ತೆರೆದು ಕೊಳ್ಳುವ ಹತ್ತಾರು ಬುಡಕಟ್ಟು ಮಹಾಕಾವ್ಯಗಳು ಇದ್ದೂ ಇಲ್ಲದಂತೆ ಇವೆ. ಕರ್ನಾಟಕದ ಬಹುಭಾಗದಲ್ಲಿ ಇಂತಹ ಮಹಾಕಾವ್ಯ ಜನಪರ ಅಧ್ಯಯನಕಾರರ ಅಧ್ಯಯನ ಸಂಗತಿಯಾಗಿದೆಯೇ ಹೊರತು ಜನಮಾನಸದ ಸ್ಮೃತಿಯ ಭಾಗವೇ ಆಗಿಲ್ಲ. ನಾಡಿನ ತುಂಬಾ ಎಷ್ಟೊಂದು ಮಹಾಕಾವ್ಯಗಳಿವೆ. ಮಲೆಮಾದೇಶ್ವರನ ಕಾವ್ಯ, ಮಂಟೇಸ್ವಾಮಿ ಮಹಾಕಾವ್ಯ, ಜುಂಜಪ್ಪನ ಕಾವ್ಯ, ಬಿಳಿಗಿರಿರಂಗನ ಕಾವ್ಯ, ಗಾಮೋಕ್ಕಲ ಕಾವ್ಯ, ಜಾನಪದ ಮಹಾಭಾರತಗಳು ...... ಒಂದೇ ಎರಡೇ?. ನೂರಾರು ಕಾವ್ಯಗಳು........ ಬದುಕು ಕಟ್ಟುವ ಕಥನಗಳು: ಬದುಕಿನ ಅರ್ಥ ಬಿಚ್ಚಿಡುವ ಜೋಳಿಗೆಗಳು...... ಬದುಕಿಗೆ ಹೊಸ ಅರ್ಥಕೊಡುವ ಜನಪದದ ತತ್ವಜ್ಞಾನಗಳವು. ಇಲ್ಲಿ ಬಹಿರಂಗ ಯುದ್ಧಗಳಿಲ್ಲ. ಎಲ್ಲವೂ ಅಂತರಂಗದ ಅವಲೋಕನವೇ: ಇಲ್ಲಿ ರಾಜ್ಯದ ವಿಸ್ತರಣೆ ಇಲ್ಲ. ರಾಜ್ಯದ ಗಡಿಯನ್ನು ಮೀರುವ ಪ್ರಕ್ರಿಯೆ, ಇಲ್ಲಿ ಭೂಮಿಯ ಹಕ್ಕುದಾರಿಕೆ ಇಲ್ಲ. ಭೂಮಿಯಲ್ಲಿ ಒಟ್ಟಾಗಿ ಬೆಳೆತೆಗೆವ, ನೇಗಿಲ ಮೊನೆಗೆ ಕಬ್ಬಿಣದ ಶೋಧದ ಕತೆ ಇದೆ. ಇಲ್ಲಿ ಕ್ಷತ್ರಿಯ ಕುಮಾರರಾದ ರಾಮ, ಲಕ್ಷ್ಮಣ, ಅರ್ಜುನ, ಭೀಮರಿಲ್ಲ. ಭಂಗಿ ಸೇದುತ್ತಾ ತಿರುಗುವ ಹೊಲೆಯನೆಂದು ಕರೆಯಲಾಗುವ ಮಂಟೆಸ್ವಾಮಿ, ಮಾದಿಗ ಮಲೆಮಾದೇಶ್ವರ, ದನಕಾಯುವ ಅನಾಥ ಮೈಲಾರ ಲಿಂಗ, ಗೊಲ್ಲದ ಜುಂಜಪ್ಪ ಬುದುಕಿನ ಪ್ರೀತಿ ಹರಡುತ್ತಾ ಅಡ್ಡಾಡುವವರು. ರಾಮ ಹೇಳಿದಾಗ ಬೆಂಕಿಗೆ ಹಾರುವ ಸೀತೆಯರಿಲ್ಲ; ಬದಲಾಗಿ ಪಾತಿವ್ರತ್ಯ ಕಾಪಾಡಿಕೊಳ್ಳುತ್ತೇನೆಂದು ಭಾಷೆಕೊಡು ಎಂದು ಕೇಳಿದಾಗ ಅವನನ್ನು ತಿರಸ್ಕರಿಸುವ ಹೆಂಡತಿ ಸಂಕಮ್ಮನಂತವರೇ ಇದ್ದಾರೆ. ಒಟ್ಟಾಗಿ ಮಹಾಕಾವ್ಯದ ಸಿದ್ಧ ಚೌಕಟ್ಟನ್ನು, ಒಡೆದು ಹಾಕುವ ಇಂತಹ ದಲಿತ–ಬುಡಕಟ್ಟು ಮಹಾಕಾವ್ಯಗಳನ್ನು ಪಕ್ಕಕ್ಕೆ ತಳ್ಳುವ ಕ್ರಿಯೆ ಕೂಡ ಉದ್ದೇಶ ಪೂರ್ವಕವೇ ಆಗಿದೆ; ಇದು ಈ ನಾಡಿನ ಸಾಂಸ್ಕೃತಿಕ ರಾಜಕಾರಣದ ಒಂದು ಭಾಗವೇ ಆಗಿದೆ.



ಗೊಂದಲಿಗರ ಹಾಡು

ಈ ಹಿನ್ನೆಲೆಯಲ್ಲಿ ಜೀವ ವಿರೋಧಿ ಸಿದ್ಧ ಮಾದರಿಯನ್ನು ಒಡೆ–ಯುತ್ತಾ ನಮ್ಮ ನಡುವೆ ಇರುವ ಪರ್ಯಾಯ ಮಾದರಿಗಳನ್ನು ಶೋಧಿಸುತ್ತಾ ಹೋಗುವ "ಸಮುದಾಯ ಕರ್ನಾಟಕದ"ದ ಆಶಯದ ಭಾಗವಾಗಿ ಕಳೆದರಡು ವರ್ಷದಿಂದ ದಲಿತ–ಬುಡಕಟ್ಟು ಮಹಾಕಾವ್ಯವನ್ನು ಚರ್ಚೆಯ ಮುಖ್ಯನೆಲೆಗೆ ತರಲು ಪ್ರಯತ್ನಿಸುತ್ತಿದೆ. ಏಕ ದೇವತೆ, ಏಕಭಾಷೆ, ಏಕ ಆಹಾರ, ಏಕ ಉಡುಪು, ಏಕಸಂಸ್ಕೃತಿಯ ಜಪ ಒಂದೆಡೆ ನಡೆಯುತ್ತಿದೆ. ಈ ನಾಡಿನ ಮುಖ್ಯ ಅಸ್ಮಿತೆಯಾದ ಬಹು ದೇವತೆ, ಬಹು ಸಂಸ್ಕೃತಿ, ಬಹು ಭಾಷೆಯ ನೆಲೆಗಳನ್ನು ಪರಿಚಯಿಸುವ ಭಾಗವಾಗಿ ಧಾರವಾಡದಲ್ಲಿ ಸಮುದಾಯದ ಕರ್ನಾಟಕವು "ದಲಿತ–ಬುಡಕಟ್ಟು: ಹಾಡು ಮತ್ತು ಅರ್ಥ" ಕಾರ್ಯಕ್ರಮವನ್ನು ತುಂಬಿದ ಸಭಾಭವನದಲ್ಲಿ ಯಶಸ್ವಿಯಾಗಿ ನಡೆಸಿತು. ಅಂತಾರಾಷ್ಟ್ರೀಯ ಬುಡಕಟ್ಟಿನ ದಿನ, ಕ್ವಿಟ್ ಇಂಡಿಯಾದ 75ನೇ ವರ್ಷದ ದಿನ ಮತ್ತು ನಾಗಾಸಾಕಿಯ ಮೇಲೆ ಬಾಂಬ್ ಹಾಕಿದ ನೋವಿನ ದಿನ...ದ ನೆಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಲೆ ಮಾದೇಶ್ವರ ಕಾವ್ಯ ಮತ್ತು ಮಂಟೆಸ್ವಾಮಿ ಕಾವ್ಯ, ಗೊಂದಲಿಗರ ಕಾವ್ಯ, ಚೌಡಿಕೆ ಪದ ಮತ್ತು ಅರ್ಜುನ ಜೋಗಿ ಆಖ್ಯಾನವನ್ನು ಪ್ರದರ್ಶಿಸಲಾಯಿತು. ನಂತರ ಹಕ್ಕಿ–ಪಿಕ್ಕಿ ಬುಡಕಟ್ಟಿನ ಬದುಕು ಬವಣೆ ಕುರಿತು ಸಾಕ್ಷ ಚಿತ್ರವನ್ನು ಪ್ರದರ್ಶಿಸಲಾಯಿತು.

ಸಾಮ್ರಾಜ್ಯಶಾಹಿ ಮತ್ತು ಆದಿವಾಸಿಗಳು

ಚೌಡಿಕೆ ಪದದ ವಾದ್ಯವನ್ನು ನುಡಿಸುವ ಮೂಲಕ ಕಾರ್ಯಕ್ರಮ ಉದ್ಘಾಟನೆಗೊಂಡರೆ ಉದ್ಘಾಟನಾ ಮಾತನ್ನು ಪೊ.ಜಿ.ಎನ್ ದೇವಿಯವರು ಆಡಿದರು. "ಅಗಷ್ಟ 9 ಅಂತಾರಾಷ್ಟ್ರೀಯ ಆದಿವಾಸಿ ದಿನ ಮತ್ತು ಅಂದೇ ಕ್ವಿಟ್ ಇಂಡಿಯಾ ಆಂದೋಲನವೂ ಪ್ರಾರಂಭವಾಯಿತು. ನಮಗೆ ಪೂರ್ಣ ಸ್ವಾತಂತ್ರ್ಯ ಸಿಗಬೇಕೆಂಬುದೇ ಕ್ವಿಟ್ ಇಂಡಿಯಾ ಆಂದೋಳನದ ಉದ್ದೇಶ. ಆದರೆ ಸ್ವಾತಂತ್ರ್ಯ ಬಂದು 70 ವರ್ಷಗಳು ಸಂದರೂ ನಮ್ಮಲ್ಲಿ ಸಾಕಷ್ಟು ಆದಿವಾಸಿ, ಬುಡಕಟ್ಟುಗಳಿಗೆ ಸ್ವಾತಂತ್ರ್ಯದ ಅರ್ಥ ಮತ್ತು ಅನುಭವ ಈಗಲೂ ದೊರೆತಿಲ್ಲ. ಇದೊಂದು ದುಃಖದ ವಿಚಾರ. ಜಗತ್ತಿನ ಎಲ್ಲಾ ದೇಶಗಳಲ್ಲೂ ಆದಿವಾಸಿಗಳಿಲ್ಲ. ಜರ್ಮನ್ ಇಟಲಿ ಫ್ರಾನ್ಸ್ ಮುಂತಾದ ದೇಶಗಳಲ್ಲಿ ಆದಿವಾಸಿಗಳಿಲ್ಲ. ಯುರೋಪ್ ದೇಶಗಳು ಎಲ್ಲೆಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದ್ದಾರೋ ಅಲೆಲ್ಲ ಆದಿವಾಸಿಗಳನ್ನು ಕಾಣಬಹುದು. ಆದಿವಾಸಿಗಳೇ ಹೆಚ್ಚಿದ್ದಲ್ಲಿ ಅಲ್ಲಿಯ ಭೂಮಿಯನ್ನು ವಶಪಡಿಸಿಕೊಳ್ಳುವುದು ವಸಾಹತುಗಳಿಗೆ ಕಷ್ಟವಾಗಿತ್ತು. ಆದರೆ ರಾಜಾ ಮಾತ್ರ ಇದ್ದರೆ ಅವನೊಬ್ಬನೊಡನೆ ಕರಾರು ಮಾಡಿಕೊಂಡರಾಯಿತು. ಹೀಗಾದಾಗ ಭೂಮಿ ಮತ್ತು ಸಂಪತ್ತನ್ನು ಕಬಳಿಸುವುದು ಸುಲಭವಾಗುತ್ತಿತ್ತು. ಯುರೋಪಿಯನ್ ದೇಶಗಳು ಯಾವಾಗ ಬೇರೆ ದೇಶಗಳ ಮೇಲೆ ಆಕ್ರಮಣ ಶುರು ಮಾಡಿದರೋ ಅಲ್ಲೆಲ್ಲ ರಾಜರು, ರಾಜ್ಯಗಳಂಥ ಸಂಸ್ಥೆಗಳು ಅಸ್ತಿತ್ವದಲ್ಲಿ ಇತ್ತೋ ಅಲ್ಲೆಲ್ಲ ನಿರ್ದಿಷ್ಟ ಒಂದು ಕರಾರನ್ನು ಅವರೊಡನೆ ಮಾಡಿಕೊಂಡು ಇಡೀ ರಾಜ್ಯವನ್ನೇ ತಮ್ಮ ವಶಕ್ಕೆ ಪಡೆದರು. ಆದರೆ ವಿಶ್ವದಲ್ಲಿ ಇನ್ನೂ ಅನೇಕ ದೇಶಗಳಿದ್ದವು. ಅಲ್ಲೆಲ್ಲ ಇಂಥ ರಾಜ್ಯ ವವ್ಯಸ್ಥೆ ನಿರ್ಮಾಣವಾಗಿರಲಿಲ್ಲ. ಅಂಥ ಜನರ ಜೊತೆಗೆ ಹೇಗೆ ವ್ಯವಹರಿಸಬೇಕೆಂದು ಈ ಫ್ರಾನ್ಸ ಜರ್ಮನ್ ಇಂಗ್ಲೆಂಡ್ ಗೆ ಅರ್ಥವಾಗಿರಲಿಲ್ಲ. ಸಂಕ್ಷಿಪ್ತವಾಗಿ ಹೇಳ ಬೇಕೆಂದರೆ ಆರ್ಥಿಕ ದೃಷ್ಟಿಕೋನದಲ್ಲಿ ಪ್ರತ್ಯೇಕ ನೋಟ ಹೊಂದಿದವರು ಈ ವಿಶ್ವದಲ್ಲಿದ್ದರು. ಅವರು ಈ ಜಗತ್ತನ್ನು ನೋಡುವ ದೃಷ್ಟಿಕೋನವೇ ಬೇರೆಯದಾಗಿತ್ತು. ಅವರು ಎಲ್ಲರೂ ಸಮಾನರು ಎಂದುಕೊಂಡಿದ್ದರು. ಒಂದು ಕಡೆ ರಾಜ ಇನ್ನೊಂದು ಕಡೆ ಪ್ರಜೆ ಎಂಬ ತಿಳಿವಳಿಕೆ ಬೇಡವೇ ಬೇಡ ಎಂದುಕೊಂಡ ಯಾವ ಜನರಿದ್ದರೋ ಅಂಥವರ ಜೊತೆ ಯುರೋಪ್ ದೇಶಗಳ ಸಾಮ್ರಾಜ್ಯಶಾಹಿಗೆ ಈ ಜನರ ಭೂಮಿ ಹೇಗೆ ಕಿತ್ತುಕೊಳ್ಳುವುದು ಎಂಬ ಸಮಸ್ಯೆ ಎದುರಾಗಿತ್ತು. ಆದ್ದರಿಂದ ಇಂಗ್ಲೆಂಡ್ ಫ್ರೆಂಚ್ ಜರ್ಮನ್ ರು ಇಂಥ ಜನರನ್ನು, ರಾಜ ಶಾಹಿ ಅಲ್ಲದ ಸಮತಾವಾದಿಗಳು ಏನಿದ್ರಲ್ಲ

ಪುಟ 15 ಕ್ಕೆ

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**